
ಎಳೆಯರಿಗಾಗಿ ಜಾನಪದ

# ಸಾಲುಸಂಪಿಗೆ ನೆರಳು




ಸಂಪಾದಕರು

ಪ್ರೊ. ಕಾಳೇಗೌಡ ನಾಗವಾರ
ಜಿ ವಿ ಆನಂದಮೂರ್ತಿ

ಎಳೆಯರಿಗಾಗಿ ಜಾನಪದ

# ಸಾಲುಸಂಪಿಗೆ ನೆರಳು



ಸಹಸ್ರಮಾನ ಜಾನಪದ : ೧೧

# ಸಾಲುಸಂಪಿಗೆ ನೆರಳು

## ಪ್ರಾತಿನಿಧಿಕ ಜನಪದ ಸಾಹಿತ್ಯ

ಸಂಪಾದಕರು
**ಪ್ರೊ. ಕಾಳೇಗೌಡ ನಾಗವಾರ**
**ಜಿ ವಿ ಆನಂದಮೂರ್ತಿ**

**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ**
ಕನ್ನಡ ಭವನ, ಜೆ ಸಿ ರಸ್ತೆ, ಬೆಂಗಳೂರು -೫೬೦ ೦೦೨

*SALUSAMPIGE NERALU*
*(Representative Folk literature)*

*Edited by*
***Prof. Kalegowda Nagavara***
***G V Ananda Murthy***

*Published by*
***K Sudhindra***
*Registrar, Karnataka Janapada and*
*Yakshagana Academy, Kannada Bhavana*
*J.C. Road, Bangalore-560 002. Ph : 080-2215509*

*First Edition : 2000 Pages : 250 Copies : 1500*

***Rs : 150/-** (ಒಂದುನೂರ ಐವತ್ತು ರೂಪಾಯಿಗಳು)*

© *Karnataka Janapada and Yakshagana Academy*

ಸಂಪಾದಕರು
**ಪ್ರೊ. ಕಾಳೇಗೌಡ ನಾಗವಾರ**
**ಜಿ ವಿ ಆನಂದಮೂರ್ತಿ**

ರೇಖಾಚಿತ್ರಗಳು
**ಕೆ ಮೋನಪ್ಪ, ಎಂ ಮೋಹನ್**

ವಿನ್ಯಾಸ
**ಜಿ ವಿ ಆನಂದಮೂರ್ತಿ**

ಮುಖಪುಟ ವಿನ್ಯಾಸ
**ಬಿ ಎಲ್ ಶ್ರೀನಿವಾಸ**

ಪ್ರಕಾಶಕರು
**ಕೆ.ಸುಧೀಂದ್ರ**
ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

ಮುದ್ರಣ
ಪ್ರಗತಿ ಪ್ರಿಂಟ್ ಕಮ್ಯೂನಿಕೇಷನ್ಸ್
ಬೆಂಗಳೂರು ✆ 3340100





## ಅಧ್ಯಕ್ಷರ ಮಾತು

**ನಾ**ಡಿನ ಜನಪದ ಕಲೆ, ಸಾಹಿತ್ಯ, ಪರಂಪರೆಯಿಂದ ಬಂದಿರುವ ಜ್ಞಾನ ಹಾಗು ಒಟ್ಟು ನಮ್ಮ ಜನಸಮುದಾಯದ ಸಂಸ್ಕೃತಿಯ ಉದಾತ್ತ ಮೌಲ್ಯಗಳ ಪುನರುತ್ಥಾನದ ಹಾದಿಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ತನ್ನ ಪಯಣವನ್ನು ಆರಂಭಿಸಿದೆ.

ಕರ್ನಾಟಕದಲ್ಲಿರುವ ಎಲ್ಲ ಭಾಷೆಗಳ ಜನಪದ ಸಂಸ್ಕೃತಿಯನ್ನು ಗೌರವಿಸುವ ಹಲವಾರು ಕಾರ್ಯಕ್ರಮಗಳನ್ನು ನಾವು ನಾಡಿನಾದ್ಯಂತ ಹಮ್ಮಿಕೊಂಡಿದ್ದೇವೆ. ದೇಶೀ ಸಂಸ್ಕೃತಿಗಳ ಪ್ರಭೆಯನ್ನು ಮಸುಕುಗೊಳಿಸುತ್ತಿರುವ ಸಮವಸ್ತ್ರ ನೆನಪಿಸುವ ಏಕರೂಪ ಸಂಸ್ಕೃತಿಯ ವಕ್ತಾರನಂತಿರುವ ಜಾಗತೀಕರಣದ ಅಪಾಯಗಳನ್ನು ನಾವು ಮನಗಾಣಬೇಕಾಗಿದೆ. ಹಾಗೆಯೇ ನಮ್ಮ ಕಣ್ಣಮುಂದಿನ ಎಳೆಯರಿಗೆ, ಈ ನೆಲದ ವೈವಿಧ್ಯಮಯ ಸಂಸ್ಕೃತಿಯ ಅಂಗವಾಗಿರುವ ಜನಪದ ಸಾಹಿತ್ಯದ ಮಹತ್ವದ ಬಗ್ಗೆ ಅರಿವು ಮೂಡಿಸುವುದು ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ.

ಮಾನವನ ಆಲೋಚನಾಕ್ರಮದಷ್ಟೇ ಹಳೆಯದಾದ ನಮ್ಮ ಹಿರಿಯರು-ಹೆತ್ತವರ ಅನುಭವ ಜಗತ್ತಿನ ಒಟ್ಟು ಜನಪದ ಸಾಹಿತ್ಯವು, ಬದುಕಿನ ಸಂತೋಷ ಹಾಗು



ದುಃಖ-ದುಮ್ಮಾನದ ಹಲವು ಕ್ಷಣಗಳನ್ನು ಅತ್ಯಂತ ಆತ್ಮೀಯವಾಗಿ ಮತ್ತು ಸರಳವಾಗಿ ಒಳಗೊಂಡಿದೆ.

ಮಕ್ಕಳ ಮನಸ್ಸನ್ನು ಅರಳಿಸುವ, ಅವರಿಗೆ ಮುದನೀಡಿ ಉಲ್ಲಾಸದ ಕ್ರೀಡಾಂಗಣಕ್ಕೆ ಕೈಹಿಡಿದು ಕರೆದೊಯ್ಯುವ ಸಾಹಿತ್ಯವನ್ನು ನೀಡುವಲ್ಲಿ ನಾವು ವಿಫಲರಾಗಿದ್ದೇವೆ. ಈ ಸಂಬಂಧದಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ನಮ್ಮ ಜನಪದ ಸಾಹಿತ್ಯದಲ್ಲಿರುವ ಮಾನವ ಪ್ರೇಮ, ನಿಸರ್ಗ ಪ್ರೀತಿ; ಮಕ್ಕಳ ಎಳೆತನದ ರಸಗಳಿಗೆಗಳನ್ನು ಸರಳವಾಗಿ ಪ್ರತಿಬಿಂಬಿಸುವ ಮಕ್ಕಳಪದ; ಗೀತೆ, ಕಾವ್ಯ, ಗಾದೆ, ಒಗಟು ಹಾಗೂ ಜನಪದ ಕಥೆಗಳನ್ನು ಸೂಕ್ತ ಚಿತ್ರಗಳೊಂದಿಗೆ ನಮ್ಮ ಎಳೆಯರಿಗಾಗಿ ಈ ಸಂಪುಟದಲ್ಲಿ ಅಳವಡಿಸಿದೆ.

ತುಂಬಾ ಉಪಯುಕ್ತವಾಗಿರುವ ಇಲ್ಲಿನ ಮಕ್ಕಳ ಪದಗಳು ಮನರಂಜನೆಯನ್ನು ಒದಗಿಸುತ್ತವೆ. ಹಿಂದಿನಿಂದಲೂ ಮಕ್ಕಳು ಹೊತ್ತುತರುತ್ತಿರುವ ಈ ಪದ್ಯಗಳು ವಿನೋದದ ಆಮೋದ ಮತ್ತು ಪ್ರಾಸದ ಬಳಕೆಯಲ್ಲಿ ಆದ ರಚನೆಗಳು. ಮಕ್ಕಳ ಈ ತೊದಲು ಕಾವ್ಯದಲ್ಲಿ ವಯಸ್ಕರು ಮತ್ತು ಶಾಲೆಯ ಮಕ್ಕಳು ಕಟ್ಟಿ ಸೇರಿಸಿದ ಪ್ರಾಸಗಳೂ ಇವೆ.



ತಮಗೆ ನಿತ್ಯವೂ ನೆರವಾಗುವುದರ ಬಗೆಗೆ ಇರುವ ಧನ್ಯತಾ ಭಾವವು ಜನಪದರ ಬದುಕಿನಲ್ಲಿ ಎದ್ದುಕಾಣುತ್ತದೆ. ಭೂಮಿ, ಮಳೆ, ಬೆಳೆ, ಬೀಸುವಕಲ್ಲು, ದೇವರು, ಪ್ರಕೃತಿ, ತವರು, ಅಣ್ಣ-ತಮ್ಮ, ಗೆಳೆತನ, ಪ್ರೇಮ, ಹುಟ್ಟು-ಸಾವು, ಇವೇ ಮೊದಲಾದ ಹಲವು ಬಗೆಯ ಸಂಗತಿಗಳನ್ನು ಇಲ್ಲಿರುವ ಗೀತೆಗಳು ಅತ್ಯಂತ ಸರಳವಾಗಿ ತಿಳಿಯಾದ ಭಾಷೆಯಲ್ಲಿ ನಿರೂಪಿಸುತ್ತವೆ.

ಒಗಟುಗಳು ಬುದ್ಧಿವಂತಿಕೆಗೆ ಒಡ್ಡುವ ಸವಾಲುಗಳಾಗಿವೆ. ಒಂದು ವಸ್ತುವನ್ನು ಮತ್ತೊಂದರ ಮೂಲಕ ತುಂಬಾ ಚಮತ್ಕಾರಿಕವಾಗಿ ವಿವರಿಸುವ ಜಾಣ್ಮೆಯ ಕ್ರಿಯೆ ವಿಶೇಷವಾಗಿ ಇಲ್ಲಿ ನಡೆದಿರುತ್ತದೆ. ಅನೇಕ ವಿನೂತನವಾದ ವರ್ಣನೆಗಳನ್ನು ಜನಪದ ಕವಿಗಳು ಒಗಟಿನ ರೂಪದಲ್ಲಿ ಕೊಟ್ಟಿದ್ದಾರೆ. ಮಕ್ಕಳು ಸಾಮಾನ್ಯವಾಗಿ ಒಗಟುಗಳ ರಕ್ಷಕರು. ದೊಡ್ಡವರಲ್ಲಿಯೂ ಕೂಡ ಈ ಬಗೆಯ ಸರಕು ಸಾಕಷ್ಟು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ.

ನಮ್ಮ ವಿಶಾಲವಾದ ಬದುಕಿನ ಅನುಭವದ ಸಂಪತ್ತು ನೆನಪಿಡಲು ಸುಲಭವಾಗುವಂತೆ ಪ್ರಾಸಬದ್ಧವಾದ ಚಿಕ್ಕ ಚಿಕ್ಕ ವಾಕ್ಯಗಳಾಗಿ ಗಾದೆಗಳ ರೂಪದಲ್ಲಿ ಕಾಣಿಸಿಕೊಂಡಿದೆ. ವಿವೇಕ, ತಮಾಷೆ-ಗೇಲಿ, ಹೇಳುವ ರೀತಿಯಲ್ಲಿ ಮೊನಚು– ಇವೆಲ್ಲ ಗಾದೆಯ ಮುಖ್ಯ



ಲಕ್ಷಣಗಳು. ಒಂದು ದೇಶದ ನಿಜವಾದ ಬದುಕು, ಭಾಷೆ ಅಲ್ಲಿನ ಗಾದೆಗಳ ಮೂಲಕ ಬಯಲಾಗುತ್ತದೆ.

ಜನಪದ ಕತೆಯನ್ನು ಕನ್ನಡದಲ್ಲಿ ಅಜ್ಜಿಕತೆ ಎಂದು ಕರೆಯುವುದು ರೂಢಿಯಲ್ಲಿದೆ. ಇಲ್ಲಿ ಮನರಂಜನೆ ಮತ್ತು ನೀತಿ ಬೋಧೆ ಕಂಡುಬಂದರೂ, ಇದಕ್ಕೂ ಮಿಗಿಲಾಗಿ ಎಲ್ಲೆ ಕಾಣದ ನಿರಾಶೆಯ ನಡುವೆಯೂ ಸುಖದ ದಿನಗಳನ್ನು ಕಲ್ಪಿಸಿಕೊಂಡು ನೆಮ್ಮದಿ ತಂದುಕೊಳ್ಳುವ ಮಾನವನ ಅದಮ್ಯ ಕನಸುಗಾರಿಕೆ ಇಲ್ಲಿ ಕಾಣುತ್ತದೆ.

**ಸಾಲುಸಂಪಿಗೆ ನೆರಳು** ಹೊತ್ತಗೆಯು ಮಕ್ಕಳ ಭಾವನೆಗಳು ಅರಳಿ, ಹೊಸ ಸೃಷ್ಟಿಗೆ, ಚೆಲುವಿಗೆ ಹಾತೊರೆಯುವಂತೆ ಪ್ರೇರೇಪಿಸುವ ಸಾಹಿತ್ಯವನ್ನು ಒಳಗೊಂಡಿದೆ.

ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸೋಮನಹಳ್ಳಿ ಮಲ್ಲಯ್ಯ ಕೃಷ್ಣ ಅವರನ್ನು ಭೇಟಿಯಾಗಿ ಈ ಸಹಸ್ರಮಾನ ಜಾನಪದ ಸಂಪುಟಗಳ ಉಪಯುಕ್ತತೆಯ ಬಗ್ಗೆ ವಿವರಿಸಿದಾಗ, ಅತ್ಯಂತ ಸಂತೋಷದಿಂದ ಅವರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ವಿಶೇಷ ಅನುದಾನ ನೀಡಿದರು. ಮುಖ್ಯಮಂತ್ರಿಗಳ ಉದಾರ ಮನಸ್ಸು ಮತ್ತು ಸದಭಿರುಚಿಯ ಕಾರಣಕ್ಕಾಗಿ ನಾನು ಅವರಿಗೆ ತುಂಬುಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.



ಮಕ್ಕಳನ್ನು ಗಮನದಲ್ಲಿಟ್ಟುಕೊಂಡೇ ಸಿದ್ಧಪಡಿಸಿರುವ ಈ ಸಚಿತ್ರ ಸಂಪುಟವು ನಮ್ಮ ಎಲ್ಲ ಎಳೆಯರ ಮನೆಯಂಗಳದಲ್ಲಿ ಪರಿಮಳದ ತುಂಬುನೆರಳು ಚೆಲ್ಲಲಿ. ಕನ್ನಡ ಪರಂಪರೆಯ ಸತ್ವವನ್ನು ನಾಡಿನ ಮಕ್ಕಳಿಗೆ ತಲುಪಿಸುವ ಹಂಬಲವನ್ನು ಹೊತ್ತ ಜಾನಪದ ಅಕಾಡೆಮಿಯು ಈ ಪುಟ್ಟ ಉಡುಗೊರೆಯನ್ನು ಅತ್ಯಂತ ಸಂತೋಷದಿಂದ ನೀಡುತ್ತಿದೆ.

ಶುಭಾಶಯಗಳೊಡನೆ,

೧೧ ಡಿಸೆಂಬರ್ ೨೦೦೦

**ಪ್ರೊ. ಕಾಳೇಗೌಡ ನಾಗವಾರ**
ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

# ಪರಿವಿಡಿ


ಅಧ್ಯಕ್ಷರ ಮಾತು ೫
ಮಕ್ಕಳ ಪದಗಳು ೧೫
ಒಗಟುಗಳು ೩೫

ಗೀತೆಗಳು

ನೆನೆ ನೆನೆ ಮನವೆ ೫೫
ಭೂಮಿತಾಯಿ ೫೮
ತಾಯಿ ೬೦
ಒಡಹುಟ್ಟು ೬೫
ರಾಗಿಕಲ್ಲು ೭೧
ಬಾಸಿಂಗ ತರುವಾಗ ೭೪
ಆಡಿ ಬಾ ನನಕಂದ ೭೯
ಬದುಕು ೮೫
ಸಂಗಾತಿ ೯೩
ಗಣನಾಯ್ಕ ೧೦೨
ಸರಸ್ವತಿ ೧೦೪
ಸೀತೆ ೧೦೫
ಆರತಿ ಬೆಳಗಿರೆ ೧೦೬
ಮಳಿ ಹಾಡು ೧೦೮
ಭಾಗ್ಯದ ಬಳೆಗಾರ ೧೧೧
ಹೋಗಿ ನನ್ನ ತವರಿಗೆ ೧೧೨
ಕಿನ್ನೂರಿ ನುಡಿಸೋನು ೧೧೩
ಚೆಲ್ಲಿದರು ಮಲ್ಲಿಗೆಯಾ ೧೧೫
ಬಿದಿರು ೧೧೭
ಬಾಡಬೇಡ ಮಲ್ಲಿಗೆ ೧೧೮
ಸಣ್ಣಾ ಮಲ್ಲಿಗೆ ಉದುರಲಯ್ಯ ೧೧೯

ರಾಗವ ಪಾಡಿತು ನವ್ವಾಲೆ ೧೨೦
ಕೋಗಿಲೆ ೧೨೧
ಮಳೆರಾಯ ೧೨೩
ಜವರಾಯ ೧೨೪
ಕೊರವಂಜಿ ೧೨೭
ಚೆಂಡನಾಡೋಣ ಬನ್ನಿರೇ ೧೨೯
ತನುವಿನೊಳಗೆ ಅನುದಿನವಿದ್ದು ೧೩೧
ಅಚ್ಚಚ್ಚ ಬೆಳದಿಂಗಳೇ ೧೩೨
ದೀಪಾಳೆನ್ನಿರೋ ದೀಪಾಳೆನ್ನಿರೋ ೧೩೫
ನಂಜುಂಡನ ತೇರು ೧೩೬
ಚಂದಕ್ಕಿ ಮಾಮ ೧೩೭
ಗೋವಿನ ಹಾಡು ೧೩೮
ಕೆರೆಗೆ ಹಾರ ೧೪೭
ಮದುವೆಯ ಹಾಡು ೧೫೭
ಗಾದೆಗಳು ೧೬೩


## ಜನಪದ ಕಥೆಗಳು


ಒಟ್ಟಿಗೆ ಬಾಳುವ ಆನಂದ ೧೯೭
ನಾಮದ ಮಹಿಮೆ ೨೦೦
ಕೋತಿ ತಂದ ಭಾಗ್ಯ ೨೦೪
ಮಾದಯ್ಯ ೨೧೦
ಚೆಲುವಯ್ಯನ ಸಾಹಸಗಳು ೨೧೬
ಹೂವಾದ ಹುಡುಗಿ ೨೨೫
ಸಂಸಾರಿ ಸೈ ೨೪೦
ಮುದ್ದು ಗಣದೇವ ೨೪೫


## ಸಂಪಾದಕರು


ಪ್ರೊ. ಕಾಳೇಗೌಡ ನಾಗವಾರ ೨೪೬
ಜಿ ವಿ ಆನಂದಮೂರ್ತಿ ೨೪೮

ಆಲೋಚನೆ - ಪುನರಾಲೋಚನೆಗಳ ನಡುವೆ ಜಾನಪದದ ಅಂತರಂಗಕ್ಕೆ ವಿಶಾಲವಾದ ಅರ್ಥದಲ್ಲಿ ಸಂಕೇತವಾಗಬಲ್ಲ ಲಾಂಛನವನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ರೂಪಿಸಿದೆ: ವಾಸ್ತವವಾಗಿ ಜಾನಪದವು ಗಂಧವತಿ ಪೃಥ್ವಿಯ ಸಕಲ ಸಲ್ಲಕ್ಷಣಗಳನ್ನು ಒಳಗೊಂಡಿರುವ, ಪಂಚಭೂತಗಳ ವಂಚನೆರಹಿತ ಗುಣಧರ್ಮದ ಆಗರವಾಗಿದೆ. ಭರತಖಂಡದ ಪ್ರಾಚೀನತಮ ಜಾನಪದದ ತುಂಬುಮನಸ್ಸು ನಿರ್ಮಿಸಿರುವ ನಿತ್ಯಮಂಗಳಕರವಾದ ಶಿವತತ್ತ್ವದ; ಅರ್ಧನಾರೀಶ್ವರ ಗುಣದ, ಸಕಲ ಜೀವರಾಶಿಗಳ ಬಗೆಗಿನ ಅಪಾರ ಅಂತಃಕರಣದ ಶಿವ ಮತ್ತು ಜಾನಪದದ  ವೈವಿಧ್ಯಮಯ ಸೂಕ್ಷ್ಮಗಳನ್ನು ಒಂದೇ ಸಮನೆ ಧ್ಯಾನಿಸಿದ ಪರಿಶುದ್ಧ ಮನಸ್ಸಿನ ಅಂತರಾಳದಿಂದ ಹೊರಹೊಮ್ಮುವ ವಿಶಾಲ ಪ್ರಸನ್ನತೆಯ ಸಾಕ್ಷಾತ್ ಪ್ರತೀಕವಾದ ಬುದ್ಧದೇವ ಹಾಗೂ ಕಾಡಿನ ಬೇಡರ ಹುಡುಗನಾಗಿ ಹುಟ್ಟಿ-ಬೆಳೆದು, ಜ್ಞಾನದ ಬಗೆಗಿನ ಅಪರಿಮಿತ ಆಕಾಂಕ್ಷೆಯಿಂದ ನಿರಂತರ ಶ್ರಮ ಮತ್ತು ಪ್ರತಿಭಾಸಂಪನ್ನತೆಯ ಹಾದಿಯಲ್ಲಿ ಸಾಗಿ ತುತ್ತತುದಿಯನ್ನು ತಲುಪಿದ, ನಮ್ಮ ಸಮಾಜದ ಎಲ್ಲ ತಬ್ಬಲಿಗಳ ಪ್ರತಿನಿಧಿಯಾದ ಏಕಲವ್ಯನನ್ನು ನೆನಪಿಸುವ, ಜಾನಪದದ ಮಹತ್ತ್ವವನ್ನು ನಿರಂತರವಾಗಿ ವಿಸ್ತರಿಸುತ್ತಿರುವ ಸೃಜನಶೀಲ ರೂಪಕ ಇದಾಗಿದೆ.

**– ಕಾಳೇಗೌಡ ನಾಗವಾರ**

ಮೈತ್ರಿ ಮತ್ತು ಕರುಣಾಭಾವಗಳಿಂದ ಲೋಕದ ಸಕಲ ಜೀವಿಗಳ ಹಿತಕ್ಕಾಗಿ ಧ್ಯಾನಸ್ಥವಾಗಿರುವಂತೆ ತೋರುವ ಪ್ರಸನ್ನ ಮುಖಭಾವ, ಸೃಷ್ಟಿಶೀಲತೆಯ ಸಂಕೇತವಾದ ವೃಕ್ಷ, ಲೋಕವನ್ನು ಸದಾ ಬೆಳಗುವ ಸೂರ್ಯ–ಚಂದ್ರ, ಜನಪದರ ಸಂಭ್ರಮದಲ್ಲಿ ಪಾಲ್ಗೊಂಡ ಅವರ ನಿತ್ಯಸಂಗಾತಿಗಳಾದ ಸಕಲ ಜೀವರಾಶಿಗಳು ಸೂಕ್ಷ್ಮ ವಿನ್ಯಾಸಗಳೊಂದಿಗೆ ಈ ಪ್ರತೀಕದಲ್ಲಿ ಅಪೂರ್ವವಾಗಿ ಸಂಯೋಜಿಸಲ್ಪಟ್ಟಿವೆ. ಪ್ರಕೃತಿಯಂತೆ ನಿತ್ಯವೂ ಹೊಸತಾಗುವ ಸತ್ವಗಳನ್ನು ಒಳಗೊಂಡು ತುಳುಕುವ ಹೊಳೆಯಂತೆ ವಿಸ್ತಾರವೂ ಪಾರದರ್ಶಕವೂ ಆಗಿರುವ ಇದು ಎಲ್ಲ ಮನಸ್ಸುಗಳ ಏಕತೆಯನ್ನು ಸಂಕೇತಿಸುತ್ತದೆ. ಮಾನವೀಯ ತಳಹದಿಯ ಮೇಲೆ ರೂಪುಗೊಂಡಿರುವ ಈ ಲಾಂಛನ ಅಕಾಡೆಮಿಯ ಚಟುವಟಿಕೆಗಳ ವಿಕಾಸಶೀಲ ಪ್ರತಿಮೆಯಾಗಿದೆ.

**– ಜಿ ವಿ ಆನಂದಮೂರ್ತಿ**

# ಮಕ್ಕಳ ಪದಗಳು





# ಮಕ್ಕಳ ಪದಗಳು

೧

ಚಂದಕ್ಕಿ ಮಾಮ
ಚಕ್ಕುಲಿ ಮಾಮ
ಮುತ್ತಿನ ಕುಡಿಕೆ
ಕೊಡು ಮಾಮ
ಕೊಡು ಮಾಮ.

೨

ಅಚ್ಚಚ್ಚು ಬೆಲ್ಲದಚ್ಚು
ಅಲ್ಲಿ ನೋಡು ಇಲ್ಲಿ ನೋಡು:
ಸಂಪಂಗಿ ಮರದಲ್ಲಿ ಗುಂಪು ನೋಡು


ಯಾವ ಗುಂಪು ?
ಕಾಗೆ ಗುಂಪು

ಯಾವ ಕಾಗೆ ?
ಕಪ್ಪು ಕಾಗೆ

ಯಾವ ಕಪ್ಪು ?
ಕಾಡು ಕಪ್ಪು

ಯಾವ ಕಾಡು ?
ಸೌದೆ ಕಾಡು

ಯಾವ ಸೌದೆ ?
ಕಾಡು ಸೌದೆ.





೩

ಕಣ್ಣೇ ಮುಚ್ಚೆ
ಕಾಡೇ ಗೂಡೆ
ಉದ್ದಿನ ಮೂಟೆ
ಉರುಳೇ ಹೋಯ್ತು
ನಮ್ಮ ಹಕ್ಕಿ ಬಿಟ್ಟೆ
ನಿಮ್ಮ ಹಕ್ಕಿ ಹಿಡ್ಕೊಳ್ಳಿ.



೪

ಹುಯ್ಯೊ ಹುಯ್ಯೊ ಮಳೆರಾಯ
ಹೂವಿನ ತೋಟಕೆ ನೀರಿಲ್ಲ

ಕೆಚ್ಚೊ ಕೆಚ್ಚೊ ಮಳೆರಾಯ
ಕೆರೇಕಟ್ಟೆಗೆ ನೀರಿಲ್ಲ

ಬಾರೋ ಬಾರೋ ಮಳೆರಾಯ
ಬಾಳೇ ತೋಟಕೆ ನೀರಿಲ್ಲ

ಬಾರಪ್ಪೋ ಮಳೆರಾಯ
ಬಂದ್ಬುಯ್ಯೋ ಮಳೆರಾಯ

ಚನ್ನಪಟ್ಟಣಕೆ ನಾ ಹೋದೆ
ಸಣ್ಣ ಪಂಚೆ ನಾ ತಂದೆ

ಒಗೆಯಾಕೆ ನೀರಿಲ್ಲ
ಬಾರಪ್ಪೋ ಮಳೆರಾಯ
ಬಂದ್ಬುಯ್ಯೋ ಮಳೆರಾಯ.


೫

ರತ್ತೋ ರತ್ತೊ ರಾಯನ ಮಗಳೆ
ಬಿತ್ತೋ ಬಿತ್ತೊ ಭೀಮನ ಮಗಳೆ
ಹದಿನಾರೆಮ್ಮೆ
ಕರೀಲಾರೆ

ಬೈಲ್‌ಗುಬ್ಬಿ
ಬಾಳೆಕಂಬ

ಕುಕ್ಕರ ಬಸವಿ
ಕೂರು ಬಸವಿ.





೬

ಅಂದದಿಂದ ಸಾಕಿದ್ನಲ್ಲೊ
ಕೆಂದ ಕೋಳಿಯ
ಅವರ ಮಕ್ಕಳ ತಿನ್ನ
ಮುರ್ಕೊಂಡ್ರಲ್ಲೊ
ಮೊಟ್ಟೆ ಕೋಳಿಯ.

೭

ಒಂದೂರ ಹೆಣ್ಣು ತರಬೇಕಣ್ಣ
ಹೆಣ್ಣು ಅಂದ್ರ ಹೆಂಗಿರಬೇಕಣ್ಣ ?
ಬಾಳೆಯ ಸುಳಿಯ ಹಂಗಿರಬೇಕಣ್ಣ
ಹಣೆಗೆ ಚಂದ್ರ ಇಟ್ಟಿರಬೇಕಣ್ಣ.



೮

ಅತ್ತಾಳೆ ಪಿತ್ತಾಳೆ
ರಾಗಿ ಬೀಸೋಳೆ
ಹತ್ ಗಂಟೆ ಬಸ್ ಬಂತು
ಚೀಟಿ ತಕ್ಕೋಳೆ.

೯

ಅಲಮೇಲಕ್ಕ ಚೆಲಮೇಲಕ್ಕ
ಎಲ್ಲಿಗೆ ಹೋಗಿದ್ದೆ?
ನಂಜನಗೂಡ ತೋಪಿನಲ್ಲಿ
ನಲಿಯಕೆ ಹೋಗಿದ್ದೆ !
ಹೊಡೀಬೇಡ ಬಡೀಬೇಡ
ಮೈಯ್ ನೋಯ್ತದೆ
ಹನ್ನೆರೆಡಾಣೆ ಕೆನ್ನೆಸರ
ಮುರುದು ಹೋಗ್ತದೆ.



೧೦

ಆರು ಕಾಸಿನ ಜೀರಿಗೆ
ನಾನು ಬತ್ತೀನಿ ನೀರಿಗೆ !



೧೧

ಎಣಿಮಿ ಎಣಿಮಿ ರಾಟೆ
ಬೆಂಗಳೂರು ಪೇಟೆ
ನೀರಿಗೆ ಹೋದಳಂತೆ
ಜಾರಿ ಬಿದ್ದಳಂತೆ.

೧೨

ಕುಳ್ಳಿ ಕುಳ್ಳಿ ಕುಟಾಕು
ಸೇರು ಪಾವು ಚಟಾಕು
ಒಂದಾಣೆ ಕೊಡ್ತೀನಿ
ಮದ್ವಾಗು.

೧೩

ಕಪ್ಪೆ ಕಪ್ಪೆ ಕಾರುಂಡ
ತಿಪ್ಪೆ ಮೇಲೆ ಬೇರುಂಡ.

೧೪

ಕಾಗೆ ಕಾಗೆ ಕೌವ್ವ
ಯಾರ್ ಬರತಾರವ್ವ?
ಮಾವ ಬರತಾನವ್ವ
ಮಾವಂಗೇನೂಟ?
ರಾಗಿಕಲ್ಲಿನ ಗೂಟ.




೧೫

ಕೋತಿ ತಿಮ್ಮ ಕೋತಿ ತಿಮ್ಮ
ದೇವರ್ ಬತ್ತು
ಎಂಟಾಣೆ ಕರ್ಪೂರ
ಖರ್ಚಾಯ್ತು
ಎದ್ದೇಳೆ ಬೋಸುಡಿ
ಬೆಳಕಾಯ್ತು.


೧೬

ಗಂಟೆ ಗಂಟೆ ಏಳ್‌ಗಂಟೆ
ಗಂಟೆ ತಗಂಡ್ಹೋಗಿ ಹಸೀಗೆ ಕಟ್ಟಿದೆ
ಹಸ ತೊಪ್ಪೆ ಕೊಡ್ತು
ತೊಪ್ಪೆ ತಗಂಡ್ಹೋಗಿ ಅಮ್ಮನಿಗೆ ಕೊಟ್ಟೆ
ಅಮ್ಮ ಒಂದು ಸುಣ್ಣಕಾಯಿ ಕೊಟ್ಲು
ಸುಣ್ಣಕಾಯಿ ತಗಂಡ್ಹೋಗಿ ಗುಲಾಮನಿಗೆ ಕೊಟ್ಟೆ
ಗುಲಾಮ ಒಂದು ಸಲಾಮು ಕೊಟ್ಟ !



೧೭

ಗಣೇಶ ಬಂದಾ
ಕಾಯಿ ಕಡುಬು ತಿಂದ
ಚಿಕ್ಕೆರೇಲಿ ಬಿದ್ದ
ದೊಡ್‌ಕೆರೇಲಿ ಎದ್ದ.



೧೮

ಗುಕುರಿ ಗುಕುರಿ ಗುರಿಯಾನೆ
ಮಾಪಿಳ್ಳೆ ಸಾಕಿದ ಮರಿಯಾನೆ
ಆನೆ ಮಾರಿ ಬರುವಾಗ
ನೀನೆಲ್ಲಿದ್ದೆ ಮರಿಯಾನೆ ?

೧೯

ಚಿಕ್ಕಮಾವನ ಹೆಂಡ್ತಿ
ಚಿಂತಾಮಣಿ
ದೊಡ್ಡಮಾವನ ಹೆಂಡ್ತಿ
ರಮಾಮಣಿ.

೨೦

ಚಕ್ಕಲ ಬಾಗಲ ಚನ್ನಿ
ಸಾಬರು ಬತ್ತಾರೆ ಬನ್ನಿ.



೨೧


ಚಿಕ್ಕ ಚಿಕ್ಕ ಚೀಲ ಕೊಡು
ಅಕ್ಕಿ ತುಂಬಾನೆ
ಬಳ್ಳೂರಕ್ಕ ಬಾಗಿಲು ತೆಗಿ
ಬಗ್ಗಿ ನೋಡಾನೆ
ರಾಜ ರಾಜ ನೆಸೆ ಕೊಡು
ಮೂಸಿ ನೋಡಾನೆ.

೨೨

ಚೀಟಿ ಸ್ಯಾಲೆ ಚಿನಾಲ ಹುಡುಗಿ
ಮೈಸೂರ್‌ಗ್ಹೋಗೂನ ನಡೀ ನಡಿ
ಶಿವನಂಜಪ್ಪನ ಗುಡಿಮುಂದೆ
ನಂಗೂ ನಿಂಗೂ ಹಿಡಿಪುಡಿ.

೨೩

ಜಯಮ್ಮ ಜಯಮ್ಮ ಜಾಕೆಟ್ಟು
ಜಯ್ಯಮ್ಮನ ಗಂಡ ಪಾಕೆಟ್ಟು
ಸಂತೆಗೋದ್ರೆ ಸಾಮಾನು
ಮನೆಗೆ ಬಂದ್ರೆ ಬೋಮಾನು.



೨೪

ಜೋಗಿ ಕೈಲಿ ಒಂದು ಜೋಳಿಗೆ
ಜೋಗಿ ತಂದ್ ರಾಗಿ ಕೋಳಿಗೆ
ಕೋಳಿ ಬಾಡು ಸೂಳೆಗೆ
ಸೂಳೆ ಹಾಡು ಜೋಗಿಗೆ.



೨೫

ನಿಂಗಿ ನಿಂಗಿ ನೀರಲ್ಲಿ
ನಿಂಗಿ ಗಂಡ ಊರಲ್ಲಿ
ಮೀಸೆ ಮೇಲೆ ಫರಂಗಿ

ಹಳ್ಳಕಾಯಿ ರೊಟ್ಟಿ
ಕೆರೆ ತಾವು ಊಟ
ನಂಜನಗೂಡು ನೋಟ.

೨೬

ಪದ್ದಿ ಪದ್ದಿ
ಪಗಡೆಕಾಯಿ
ಪದ್ದಿ ಗಂಡ
ಹೀರೇಕಾಯಿ.

೨೭

ಪೀಪಿ ಪೀಪಿ ಪಿಲ್ಲಂಗ
ಅವರೇಕಾಯಿ ಚಲ್ಲಂಗ
ಜಾತ್ರೆಗೋಯ್ತಿನಿ ಚಲ್ಲಂಗ
ಕಡ್ಲೆ ತತ್ತೀನಿ ಚಲ್ಲಂಗ
ನಿಂಗೂ ಕೊಡ್ತೀನಿ ಚಲ್ಲಂಗ
ಪೀ ಅನ್ನು ಚಲ್ಲಂಗ.



೨೮

ಬಾಡ್ ತಂದ್ಯೊ?
ಭಾಗ್ಯ ತಂದ್ಯೊ?

ಭತ್ತ ತಂದ್ಯೊ?
ಮಿರ್ತ ತಂದ್ಯೊ?

ರಾಗಿ ತಂದ್ಯೊ?
ರೋಗ ತಂದ್ಯೊ!



೨೯

ಪುಟ್ಟ ಪುಟ್ಟ ಹುಡುಗಿ
ಪುಟಾಣಿ ಹುಡುಗಿ

ಕರಿ ಸೀರೆ ಉಡಿಸಿ
ಕರಿ ಕುಪ್ಪಸ ತೊಡಿಸಿ

ಬಿಳೀ ಸೀರೆ ಉಡಿಸಿ
ಬಿಳೀ ಕುಪ್ಪಸ ತೊಡಿಸಿ

ಕತ್ತೆ ಮೇಲೆ ಕೂರಿಸಿ
ಗಂಡನ ಮನೆಗೆ ಕಳಿಸಿ.

೩೦

ಭಲರೆ ಭಲರೆ
ಬಾಪುರಿ
ಸಂತೆಗೆ ಹೋದ್ರೆ
ಕಡ್ಲೆಪುರಿ.

೩೧

ಮರಿ ಮರಿ ಕಾಯ್ತುರಿ
ಕಂಡೋರ ಮನೆ
ಬೀಗ ಮುರಿ.



೩೨

ರಾಮ ರಾಮ ರಾಮ ಸೀತಾ
ಮಜ್ಜಿಗೆ ಕುಡಿದರೆ ಇನ್ನೂ ಸೀತಾ !

೩೩

ಸರೋಜಕ್ಕ ಸರೋಜಕ್ಕ ಚೆನ್ನಾಗಿದ್ದೀಯಾ?
ಮಂಚದ ಮೇಲೆ ಮಲಗಿದ್ದೀಯಾ?
ಅತ್ತೆ ಬಂದರೆ ಅಳ್ತೀಯಾ?
ಗಂಡ ಬಂದರೆ ನಗ್ತೀಯಾ!



೩೪

ಕಪ್ಪೆ ಕರ ಕರ
ತುಪ್ಪ ಜನಿ ಜನಿ

ಮಾವಿನ ವ್ಪೋಟೆ
ಮರದಲಿ ಪ್ಪೋಟೆ

ಹದ್ದಿನ ಕೈಲೀ
ಸುದ್ದೀ ಕೊಟ್ಟು

ಕಾಗೇ ಕೈಲಿ
ಕಂಕಣ ಕಟ್ಸಿ

ನಳ್ಳೀ ಕೈಲಿ
ನಗಾರಿ ಹೊಡ್ಸಿ

ಸೊಳ್ಳೇ ಕೈಲಿ
ಸೋಬಾನೆ ಹೇಳ್ಸಿ


ಸಣ್ಣೆ ಮದುವೆ ಶನಿವಾರ
ಊಟಕೆ ಬನ್ನಿ ಭಾನುವಾರ.

೩೫

ಹಂಗೇ ಆಗಬೇಕು
ಹಲ್ಲು ಮುರಿಬೇಕು
ನಾನು ನಗಬೇಕು
ನೀನು ಅಳಬೇಕು !


೩೬

ಹುಡುಗಿ ಜೋಕ್ ನೋಡು
ಹೊಳೇ ದಾಟ್ ನೋಡು
ಹಣಸೆ ಗೋಟ್ ನೋಡು
ಹೊಂಗೆ ಕಡ್ಡಿ ಏಟ್ ನೋಡು.




೩೭

ಸೀಬಿ ಸೀಬಿ ಬಾ
ಸೀರೆ ಉಟ್ಕೊಂಡು ಬಾ
ಮಳ್ಳಾಚಾರಿ ಮಾಮ ಬರ್‍ತಾನೆ
ಕೋಳಿ ಕುಯ್ಯಾನ ಬಾ !



೩೮

ಸತಾ ಸತಾ ಸೀಪೆ ಹಣ್ಣು
ರಸಾಪುರಿ ಮಾವಿನ ಹಣ್ಣು
ಬಾಯಿಗೆ ತುಂಬಿರಿ ಬಾಳೇಹಣ್ಣು
ರುಚಿಗೆ ತುಂಬಿರಿ ನಿಂಬೇಹಣ್ಣು
ಅಂಬಾರದ ಮೇಲೆ ಜಂಬುನೇರ್‍ಳೇ ಹಣ್ಣು.





೩೯

ಬಿಸಿಲೇ ಬಿಸಿಲೇ ಎತ್ತೋದೆ ?
ಅರಳೀ ಮರಕೆ ಆಡಾಕೋದೆ
ಕರೇಕಲ್ಲಿನ್ ಮೇಲೆ ಒಂದ್ ಸೌಟು ಎಣ್ಣೆ ಬಿಡ್ತೀನಿ
ಚಿಳ್ಳನ್ ಬಾ, ಬೆಳ್ಳನ್ ಬಾ.

# ಒಗಟುಗಳು





# ಒಗಟುಗಳು

ಕೆಂಪಯ್ಯನ ತೋಟದಲ್ಲಿ
ಗುಂಪು ಮಲ್ಲಿಗೆ ಗಿಡಹುಟ್ಟಿ
ಎಸಳು ಎಂಬತ್ತು: ಕುಸುಲು ಮುವ್ವತ್ತು
ಬೀದಿ ಬಿತ್ತಾರ; ನಡುವೆ ಚಿತ್ತಾರ

(ಚೆಂಡುಮಲ್ಲಿಗೆ)

* * *





ಅಜ್ಜಿಗೊಂದು ಅಂಗಿ
ಅಂಗಿಯೊಳಗೆ ಮೀಸೆ
ಮೀಸೆ ಬಿಡಿಸೆ ಹಲ್ಲು
ಹಲ್ಲು ಕಡಿಯೆ ಹಿಟ್ಟು
ಹಿಟ್ಟು ತಟ್ಟೆ ರೊಟ್ಟಿ

(ಮುಸುಕಿನ ಜೋಳ)

* * *

ಅಂಬುಧಿಯಲ್ಲಿ ಹುಟ್ಟುವ ಕುದುರೆ
ಅಂಬಾರದಲ್ಲಿ ಓಡುವ ಕುದುರೆ
ತಂಬೆಲರದಲ್ಲಿ ಬೆವರುವ ಕುದುರೆ
ಇಂಬಾಗಿ ಬೆಟ್ಟದಲೊರಗುವ ಕುದುರೆ

(ಮೋಡ)


* * *



ಅಂಕು ಡೊಂಕು ಬಾವಿ
ಶಂಖ ಚಕ್ರದ ಬಾವಿ
ಬೊಮ್ಮಯ್ಯ ಕಟ್ಟಿಸಿದ ಬಾವಿ
ಬೊಗ್ಗಿ ನೋಡಿದರೆ: ಒಂದು ತೊಟ್ಟೂ ನೀರಿಲ್ಲ!

(ಕಿವಿ)

* * *




ಕಾಡಲ್ಲೆ ಹುಟ್ಟೋದು
ಕಾಡಲ್ಲೆ ಬೆಳಿಯೋದು
ಊರ ನಾರಿರಾ ಮುಂದೆ ತಕತಕನೆ ಕುಣಿಯೋದು
ನಾರಿ ಕಂಡಿದ್ದರೆ ಒಡಚ್ಚೋಳೆ ಗಂಗೆ
ನೀನು ಕಂಡಿದ್ದರೆ ಮಗುಚ್ಚೋಳೆ ತಂಗೆ ?

(ಒನಕೆ)

* * *

ಅರಿಷಿಣದ ಮಯ್ಯವಳು
ಅರವತ್ತು ಮೊಲೆಯವಳು
ಪುರುಷನಿಲ್ಲದಾ ನಾರಿ
ಬಹುಮಕ್ಕಳ ಪಡೆಯುವಳು
(ಅಡಕೆ ಹೊಂಬಾಳೆ)

* * *



ಹಚ್ಚನ್ನ ಹಕ್ಕಿ ಪುಚ್ಚ ತೆಗೆದು
ಕಲ್ಲ ಮೇಲಿಟ್ಟು ಕಾರ ಅರೆದರು
(ಕೊತ್ತಂಬರಿ ಸೊಪ್ಪು)

* * *

ತಾತಾ ಗಿಂಡಿ ತಾಮ್ರದ ಗಿಂಡಿ
ಕೆತ್ತಿಸಿ ನೋಡಿದರೆ ಮುತ್ತಿನ ಗಿಂಡಿ
(ದಾಳಿಂಬೆ ಹಣ್ಣು)

* * *

ಎರಡು ಚಕ್ರವುಂಟು ಬಂಡಿಯಲ್ಲ
ಎರಡು ಕಣ್ಣುಂಟು ಮನುಷ್ಯನಲ್ಲ
ಎರಡು ಕೊಂಬುಂಟು ಎತ್ತಲ್ಲ
ಇದ ಹೇಳಿದವನಿಗೆ ಒಂದುಂಡೆ ಬೆಲ್ಲ

(ರಾಗಿಯ ಕಲ್ಲು)

***


ಕೆರೆಯೆಲ್ಲ ಕುರಿಹೆಜ್ಜೆ

(ನಕ್ಷತ್ರ)

***

ತಲೆಯಲ್ಲಿ ಕಿರೀಟವುಂಟು : ದೇವರಲ್ಲ
ಕೊರಳಲ್ಲಿ ಕಪ್ಪುಂಟು : ನಂಜುಂಡನಲ್ಲ
ಮೆಯ್ಯಲ್ಲಿ ಕಣ್ಣುಂಟು : ಇಂದ್ರನಲ್ಲ

(ಗಂಡು ನವಿಲು)



***

ನಾಲ್ಕು ಕಾಲಿನ ನರಸಿಂಹಯ್ಯನಿಗೆ
ನಲವತ್ತಾರು ಜನಿವಾರ

(ಶ್ಯಾವಿಗೆ)

***

ನಾಕು ಚೌಕದ ಗದ್ದಿ
ನಾರಾಯಣ ಕಟ್ಟಿಸಿದ ಗದ್ದಿ
ಬಿತ್ತೋಕೆ ಹದಿನಾರು ಕಾಳು
ಸಾಗ ಮಾಡೋದಕ್ಕ ಒಂದ ಜತಿ ಎತ್ತು

(ಪಗಡೆ ಹಾಸು)

***



ಕೈಯುಂಟು ಕಾಲಿಲ್ಲ, ತಲೆಹರುಕ ಮುಂಡ
ಮೈಯೆಲ್ಲಾ ನವಗಾಯ ಒಂಬತ್ತು ತುಂಡ
ಬೇಗ ಬೇಗನೆ ಬಂದು ಹೆಗಲೇರಿಕೊಂಡ
ಕೈಕಳಚಿ ಬಿಟ್ಟರೆ ತಾ ಮುದುರಿಕೊಂಡ

(ಅಂಗಿ)

❊ ❊ ❊

ಹೋಗುವಾಗ ಹೂವಿನ ತೋಟ
ಬರುವಾಗ ಬರೀ ತೋಟ

(ಹತ್ತಿಯ ಹೊಲ)

❊ ❊ ❊

ಮಾಳಿಗೆ ಮೇಲೆ
ಮಂಡಲದ ಹಾವು ಮಲಗಿದೆ


(ಪಡವಲಕಾಯಿ)

❊ ❊ ❊

ನಾರು ಸೀರೆ ಗರ್ತಿ
ನೀರು ಕೊಡ ಹೊರ್ತಿ
ನೋಡಿದೋರತ್ತ
ಮೂರು ಕಣ್ಣು ತೋರ್ತಿ

(ತೆಂಗಿನಮರ)


❊ ❊ ❊



ಎಲೆ ಎಲೇ ಬಣ್ಣ
ಏಲಕ್ಕಿ ಬಣ್ಣ
ಬೀಜಿಲ್ಲದ ಹಣ್ಣ
ತಂದುಕೊಡಿ ಅಣ್ಣ

(ಗೆಣಸು)

* * *



ಕೋಟಿ ಜನರು ಕಟ್ಟಿದ ಕೋಟೆ
ಆರೆಂಟು ಬಾಗಿಲು ಬಿಚ್ಚಿದ ಕೋಟೆ
ಹೋದರೆ ಒಳಗಡೆ ರಾಜನ ತಂಟೆ
ನಮಗುಳಿವುಂಟೆ ?

(ಹುತ್ತ)

* * *

ಬುಡ್ಡ ಹುಡುಗಿ ಗುದ್ದಿದರೆ
ಮನೆತುಂಬ ಮಕ್ಕಳು

(ಬೆಳ್ಳುಳ್ಳಿ)

* * *

ಜಗಳವಿಲ್ಲ ತೋಟಿಯಿಲ್ಲ
ಹೊಡೀತಾನೆ ಬಡೀತಾನೆ
ಬೇನೆಯಿಲ್ಲ ಬೇಸರವಿಲ್ಲ !

(ಅಗಸ ಬಟ್ಟೆ ಒಗೆಯುವುದು)

* * *

ಅಂತಪ್ಪನ ಮಗಳು ಎಂತಪ್ಪ ಚೆಲುವೆ ?
ತೊಗಲ ತೊಟ್ಟಿಲಲ್ಲಿ ತೂಗಾಡುತಾಳೆ !

(ಹರಳೋಲೆ)

❊ ❊ ❊

ಹುತ್ತದ ಹೂವು ಕಂಡ
ಮುತ್ತಿನ ಭರಣಿ ಕಂಡ
ಅಲ್ಲೊಂದು ರಂಧ್ರ ಕಂಡ
ಅಲ್ಲೇ ಕೂತ್ಕಂಡ

(ಬುಗುಡಿ: ಸ್ತ್ರೀಯರ ಕಿವಿಯ ಆಭರಣ)

❊ ❊ ❊



ಉತ್ರಾಸದ ಮೇಲೆ
ಉತ್ರಾಣಿ ಗಿಡ ಹುಟ್ಟಿದೆ :
ಕಿತ್ತರೂ ಬರಲ್ಲ ; ಕೀರಾಡಿದರೂ ಬರಲ್ಲ

(ಹಚ್ಚೆ)

❊ ❊ ❊



ಬಾವಿಯಲ್ಲಿ ಬಟ್ಟಲು

(ಚಂದ್ರ)

❊ ❊ ❊

ಬತ್ತಕ್ಕೆ ಮೂರು ಮುತ್ತು


(ಇಬ್ಬನಿ)

❊ ❊ ❊

ಆಕಾಶದಲ್ಲಿ ಆಡೋ ಗಿಡಗ
ಗಿಡಗನ ಹೊಟ್ಟೇಲಿ ಬೆಳ್ಳಿ ಕಡಗ
ಅದ ಓಡಿಸಿದವನೆ ಮೈಸೂರು ಹುಡುಗ

(ಒನಕೆ)

❊ ❊ ❊



ಸೀಮಿ ಮ್ಯಾಗಿನ ಹೆಂಗಸಿಗಿ
ಸೀರಿ ಇಲ್ಲ ಕುಬಸ ಇಲ್ಲ
ಕೊರಳಾಗ ಒಂದು ಗುಳ್ಳ ಕಟ್ಯಾರ

(ಈಚಲುಮರ)

* * *

ಯಾಪಾರ ಸಾಪಾರ ಯಾವಾಗ ?
ಎದುರು ಬದರಿಗೆ ಕೂತಾಗ
ಅಳೋದು ಕರೆಯೋದು ಯಾವಾಗ ?
ಅರ್ಧ ಒಳಕ್ಕೆ ಹೋದಾಗ
ನಗೋದು ನಲಿಯೋದು ಯಾವಾಗ ?
ಪೂರ್ತಿ ಒಳಕ್ಕೆ ಹೋದಾಗ

(ಬಳೆತೊಡಿಸುವುದು)

* * *

ಗುಡ್ಡವೆಲ್ಲ ಬೆಂದರೂ
ಅದರಲ್ಲೊಂದು ಕೋಲು ಬೇಯೋದಿಲ್ಲ

(ಹಿಟ್ಟು ಮತ್ತು ಹಿಟ್ಟಿನ ಕೋಲು)

* * *

ಅಂತರಿಕ್ಷದಲ್ಲಿ ಹಾರಾಡ್ತಾಳೆ
ಹುಟ್ಟಿದ ಜಾಗ ಬೆಟ್ಟದ ವಾರೆ
ಒಡೆಸಿದವನಿಗೆ ಒಂದು ಹಿಡಿ ಹೊನ್ನು !

(ಬಿದಿರು)

* * *

ಸಾಹುಕಾರ ಮುಂದೆ
ಸಾವಿರ ಜನ ಹಿಂದೆ
(ಬಾಳೆಗೊನೆ)

❊ ❊ ❊

ಕೋಣೆಗೆ ಕೊತವಾಲ
ಓಣಿಗೆ ವಜೀರ
(ದೊಣ್ಣೆ ಹಾಗು ನಾಯಿ)

❊ ❊ ❊



ಅಪ್ಪ ಆಕಾಶಕ್ಕೆ
ಅಜ್ಜಿ ಪಾತಾಳಕ್ಕೆ
ಮಗಳು ಮದುವೆಗೆ
ಮಗ ವ್ಯಾಪಾರಕ್ಕೆ
(ತೆಂಗಿನಮರದ ಸುಳಿ, ಬೇರು, ಹೊಂಬಾಳೆ, ತೆಂಗಿನಕಾಯಿ)

❊ ❊ ❊

ತಳ ತಾಮ್ರ
ನಡು ಪಚ್ಚೆ
ಕೊನೆ ಮುತ್ತು
(ಈರುಳ್ಳಿಗಿಡ)


❊ ❊ ❊

ಥಳಿಸದ ಅಕ್ಕಿ ; ಕಾಸದ ತುಪ್ಪ
ಹಳಸದ ಹಣ್ಣು ; ಹೊಟ್ಟುಯಿಲ್ಲದ ರಾಶಿ
ನಿದ್ರೆಯಿಲ್ಲದ ನೀರೆ
(ಯಾಲಕ್ಕಿ, ಜೇನುತುಪ್ಪ, ಹುಣಸೆಹಣ್ಣು, ಮುತ್ತಿನರಾಶಿ, ಹರಿಯುವ ನೀರು)

❊ ❊ ❊

ಅಮ್ಮನ ಸೀರೆ ಮಡಿಸೋಕಾಗೋಲ್ಲ
ಅಪ್ಪನ ದುಡ್ಡು ಎಣಿಸೋಕಾಗೋಲ್ಲ
(ಆಕಾಶ ಮತ್ತು ನಕ್ಷತ್ರ)

❊ ❊ ❊



ಗಂಡನಿಲ್ಲದೆ ಬಸಿರಾಗುವರಾರು ?
ಉಣ್ಣದೆ ತಿನ್ನದೆ ಕೊಬ್ಬುವರಾರು ?

(ಮೋಡಗಳು)

* * *

ಕಡೆ ಬಿಳುಪು ನಡುಗಪ್ಪು ಉಡುವ ವಸ್ತ್ರವಲ್ಲ
ನೀರಾವ ತಮ್ಮ ಮಡುವಲ್ಲ
ಕಣದಾಗ ವಾದ ಮಾಡಣ್ಣ ಒಡದ್ಹೇಳ

(ಕಣ್ಣು)

* * *

ಬಟಾಬಯಲೊಳಗೊಂದು ಬೆಳ್ಳಿ ರೂಪಾಯಿ

(ಚಂದ್ರ)

* * *



ಗುಡಿಹಿಂದೆ ಗುಂಡಗಲ್ಲು ಬಿದ್ದಿದೆ

(ತುರುಬು)

❊ ❊ ❊

ಬಂಗಾರದ ಬಸವಣ್ಣ ಬಾಲದಲ್ಲಿ ನೀರು ಕುಡೀತದೆ

(ದೀಪ, ಬತ್ತಿ)

❊ ❊ ❊

ಮುತ್ತಿಕ್ಕಿದ್ದರೆ ಮೂಗು ಕಚ್ಚಿದಳು

(ಹಲಸಿನಹಣ್ಣು)

❊ ❊ ❊



ಮುತ್ತಿನಂಥಾ ಕೋಳಿ ಮುಳ್ಳಾಗೆ ಮೊಟ್ಟೆ ಇಕ್ಕಿದೆ

(ನಿಂಬೆಹಣ್ಣು)

❊ ❊ ❊

ಹಗಲೆಲ್ಲ ಮಲಗಿರ್ತದೆ ; ಇರುಳೆಲ್ಲ ಎದ್ದಿರ್‌ತದೆ

(ದನಕರು ಕಟ್ಟುವ ಹಗ್ಗ)

❊ ❊ ❊

ಕೂಸು ಕುಡಿಕೆ ಗಾತ್ರ
ಮಾಸು ಮನೆ ಗಾತ್ರ
ಕೂಸಿನೋರವ್ವ ಸಾಸಿವೆ ಗಾತ್ರ
(ರಾಗಿತೆನೆ, ಹುಲ್ಲು, ರಾಗಿ)

❊ ❊ ❊

ಬೇಲಿ ನುಗ್ಗೋ ನಾಯಿಗೆ ತಿಕದಲಿ ಮೂಗುದಾರ
(ಸೂಜಿ, ದಾರ)

❊ ❊ ❊

ಬಸವಣ್ಣನ ಹೆಂಡ್ರು ಬಸುರಾದ್ಲು
ತಡಕೊಳ್ಳಲಾರದೆ ಹೊಡಕೊಂಡ್ಲು
(ಹೊಂಬಾಳೆ)

❊ ❊ ❊

ಹಂಬಿನ್ಹಂಗೆ ಹರೀತದೆ
ಕೊಂಬಿನ್ಹಂಗೆ ಕೂಗ್ತದೆ
ಜಮ್ಮನೇರಳೆ ಮರದ್ಹತ್ರ ಜಗ್ ಜಗ್ ಅಂತದೆ
(ರೈಲು)

❊ ❊ ❊

ಅಕ್ಕ ತಂಗೇರು ಚಕಮಲ್ಲಿ ದೇವರು
ಹಾಲು ಮೊಸರು ಹೊತ್ಕೊಂಡು ವಾಲಾಡ್ತಾರೆ
(ಹಸುವಿನ ಕೆಚ್ಚಲು)

❊ ❊ ❊



# ಗೀತೆಗಳು



## ನೆನೆ ನೆನೆ ಮನವೆ

ಎಂಟೇಲೆ ಮಾವಿನ ದಂಟಿನಲ್ಲಿರುವೋಳೆ
ಗಂಟೇಯ ಗತಿಗೆ ನಲಿಯೋಳೆ । ಸರಸೋತಿ
ಗಂಟಲದ ತೊಡರ ಬಿಡಿಸವ್ವ

ಶಿವ ಶಿವ ಎಂದಾರೆ ಸಿಡಿಲೆಲ್ಲ ಬಯಲಾಗಿ
ಕಲ್ಲು ಬಂದೆರಗಿ ಕಡೆಗಾಗಿ । ಎಲೆಮನವೆ
ಶಿವನೆಂಬ ಸಬುದ ಬಿಡಬ್ಯಾಡ

ಕಲ್ಲು ಮುಳ್ಳಿದ್ದರೆ ಹುಲ್ಲಂತ ತಿಳಿದೇವು
ಸೊಲ್ಲೇರಿಸಿ ಹಾಡಿ ನಡೆದೇವು । ಭಗವಂತ
ಸುಳ್ಳಾಡೆವು ದಾರಿ ಬಿರುಸಂತ



ದೇವರ ನೆನೆದಾರೆ ಸಾವ್ಹುಟ್ಟು ನಮಗಿಲ್ಲ
ಹಾವು ಕಚ್ಚಿದರೂ ವಿಷವಿಲ್ಲ । ಸರ್ಪಾನ
ಹೆಡೆಯ ದಾಟಿದರೂ ಭಯವಿಲ್ಲ

ಕರುಣ ಬಂದರೆ ಕಾಯೊ ಮರಣ ಬಂದರೆ ಒಯ್ಯೊ
ಕರುಣಿ ಕಲ್ಯಾಣದ ಬಸವಣ್ಣ । ಕಾಶಿಲಿಂಗ
ಕಡೆತನಕ ಕಾಯೊ ಅಭಿಮಾನ

ಶರಣರ ನೆನೆದಾರ ಸರಗೀಯ ಇಟ್ಟಾಂಗ
ಹವಳ ಮಲ್ಲೀಗೆ ಮುಡಿದಾಂಗ । ಕಲ್ಯಾಣದ
ಶರಣರ ನೆನೆಯೊ ನನ ಮನವೆ

ಮಾದಯ್ಯ ಬರುವಾಗ ಮಾಳೆಲ್ಲ ಘಮ್ಮೆಂದೊ
ಮಾಳದಲಿ ಗರಿಕೆ ಚಿಗುರ್ಯಾವೊ । ಮಾದೇವ
ಮೂಡ್ಲಲ್ಲಿ ಮಳೆಯು ಸುರಿದಾವೊ

ಹೊತ್ತು ಮುಳುಗಿದರೇನು ಕತ್ತಲಾದರೇನು
ಅಪ್ಪ ನಿನ ಗುಡಿಗೆ ಬರುವೇನೊ । ಮಾದಯ್ಯ
ಮುತ್ತೀನ ಬಾಗಿಲು ತೆರದೀರೊ

ನಿದ್ದೆಗಣ್ಣಲಿ ಕಂಡೆ ಸುದ್ದ ಗುರುವಿನ ಪಾದ
ಎದ್ದು ನೋಡಿದರ ನಿರಬಯಲ । ಗುರುರಾಯ
ರುದ್ದರನ ಮಯಿಮೆ ತಿಳಿಯೂವ


ಹಿರಿಯರಿಗೆ ಹಿರಿಯನ್ನು ಕಿರಿಯರಿಗೆ ಕಿರಿಯನ್ನು
ನೆರೆ ಗಡ್ಡದವರ ಮುದುಕರ । ಕಂಡರೆ
ತಲೆ ಬಾಗಿ ನಡೆಯೊ ನನಮನವೆ

ಮುತ್ತು ಮಾಣಿಕ ಬೇಡ ಮತ್ತೆ ಸಂಪದ ಬೇಡ
ಸುತ್ತು ಕೋಟೆಯ ವೈಭವ ಬೇಡ । ನನ್ನವ್ವ
ಸುತ್ತೆಲ್ಲ ಜನಪದ ಹಾಡಿರಲಿ

ಹಿಡಿದಂಥ ಕೊಂಬೆ ಎರಡಾಗಿ ಹೆಚ್ಚಾಲಿ
ಕಟ್ಟಿದಾ ಕಪಿಲೆ ಕರೆಯಾಲಿ । ಧರ್ಮರು
ಮೆಟ್ಟಿದ ಭೂಮಿ ಬೆಳೆಯಾಲಿ

○





# ಭೂಮಿತಾಯಿ

ಏಳುತಲೆ ನಾನೆದ್ದು ಯಾರ್‍ಯಾರ ನೆನೆಯಾಲಿ ?
ಎಳ್ಳು ಜೀರಿಗೆ ಬೆಳೆಯೋಳ । ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನು

ಊರೀಗೆ ಮಳೆಹುಯ್ತು ಏರುಕಟ್ಟೋ ಕಂದಯ್ಯ
ಊರು ಮುಂದಿರುವ ಬಸವಣ್ಣೆ । ಕೈಮುಗಿದು
ಏರು ಕಟ್ಟೋ ಮುದ್ದು ಮುಖದವನೆ

ಕಾಳ್ಹೋರಿ ಕಪ್ಹೋರಿ ಕಡಲೆ ಬಣ್ಣದ ಹೋರಿ
ಈರಣ್ಣನೆಂಬೋ ಹೊಸ ಹೋರಿ । ಕಟ್ಕೊಂಡು
ನೂರೊಂದ ಸಾಲ ಹೊಡೆದವ್ನೆ

ಮಳೆರಾಯ ಹುಯ್ಯಾಲಿ ಕೆರೆರಾಯ ತುಂಬಾಲಿ
ಹನ್ನೆರಡು ಕೋಡಿ ಹರಿಯಾಲಿ । ನಮ್ಮೂರ
ಸಣ್ಣಕ್ಕಿ ಬಯಲು ಬೆಳೆಯಾಲಿ

ಮಳಿಯಪ್ಪ ಮಳೆರಾಜ ಕರೆಯುತಾರೋ ನಿನ್ನ
ಮೊದಲು ಕೂರಿಗೆ ರೈತಾರು । ಹೊಲದಾಗ
ಫಲವೆದ್ದು ಕೈಯ ಮುಗಿದಾವ


ಹತ್ತೇರು ಕಟ್ಟಿ ಮತ್ತೆ ಮಳೆರಾಯ ಬಂದ
ಮುತ್ತು ಚೆಲ್ಲಯ್ಯ ಹೊಲಕ್ಕೆಲ್ಲ । ಅಣ್ಣಯ್ಯ
ಮತ್ತೆ ಧಾನ್ಯಾವು ಬೆಳೆಯಾಲಿ

ಗುಡು ಗುಡು ಗುಟ್ಟೀತು ನಡುಬಾಣ ಮಿಂಚೀತು
ಮೂಡಾದ್ರಿ ಅಂಬ ದಂಡೀನ । ಕುದುರೆ ಮೇಲೆ
ಚೆಂಡಾಡಿ ಹುಯ್ಯೋ ಮಳೆದೇವ

ಮಣ್ಣನ್ನು ನಂಬಿ ಮಣ್ಣಿಂದ ಬದುಕೇನು
ಮಣ್ಣಿನಗೆ ಮುಂದೆ ಹೊನ್ನು । ಅಣ್ಣಯ್ಯ
ಮಣ್ಣೆ ಲೋಕದಲಿ ಬೆಲೆಯಾದ್ದು

ಕಸವು ಹೊಡೆದಾ ಕೈಯು ಕಸ್ತೂರಿ ನಾತಾವ
ಬಸವಣ್ಣ ನಿನ್ನ ಸೆಗಣೀಯ । ಬಳಿದ ಕೈ
ಎಸಳ ಯಾಲಕ್ಕಿ ಗೊನಿನಾತ

ಹಳ್ಳಾದ ಹೊಲದಾಗ ಬೆಳ್ಳಾನ ಬಿಳಿಜೋಳ
ಮೆಲ್ಲಾಕೆ ಮೆಲಿಯೋ ಗಿಣಿರಾಮ । ನನ್ನಣ್ಣ
ಕಲ್ಲು ಬಂದಾವು ಕಡಿಗಾಗೊ



# ತಾಯಿ

ತಾಯಿಮಕ್ಕಳ ದನಿಯು ತಾಳ ಬಾರಿಸಿದಾಂಗ
ಜೋಡಿ ಕಿನ್ನೂರಿ ನುಡಿದಾಂಗ । ಹಲಸಂಗಿ
ಹೊತ್ತೇರಿ ತಾಸೆ ಬಡೆದಾಂಗ


ಬ್ಯಾಸಿಗೀ ದಿವಸಾಕ ಬೇವೀನಮರ ತಂಪ
ಭೀಮರತಿಯೆಂಬ ಹೊಳಿ ತಂಪ । ಹಡೆದಮ್ಮ
ನೀ ತಂಪ ನನ್ನ ತವರೀಗ

ತೌರೂರ ದಾರೀಲಿ ಮುಳ್ಳಿಲ್ಲ ಕಲ್ಲಿಲ್ಲ
ಸಾಸುವೆಯಷ್ಟು ಮರಳಿಲ್ಲ । ಬಾನಲ್ಲಿ
ಬಿಸಿಲೀನ ಬೇಗೆ ಸುಡಲಿಲ್ಲ

ತಂದೇಯ ನೆನೆದಾರೆ ತಂಗಳು ಬಿಸಿಯಾಯ್ತು
ಗಂಗಾದೇವಿ ನನ್ನ ಹಡೆದವ್ವ । ನೆನೆದಾರೆ
ಮಾಸಿದ ತಲೆಯು ಮಡಿಯಾಯ್ತು

ಕಾಶೀಗಿ ಹೋಗಲಕ ಏಸೊಂದು ದಿನ ಬೇಕ ?
ತಾಸೊತ್ತಿನ ಹಾದಿ ತವರೂರ । ಮನಿಯಾಗ
ಕಾಶಿ ಕುಂತಾಳ ಹಡೆದವ್ವ

ಯಾರ ಇದ್ದರು ನನ್ನ ತಾಯವ್ವನ ಹೋಲಾರ
ಸಾವಿರ ಕೊಳ್ಳಿ ಒಲಿಯಾಗ । ಇದ್ದರ
ಜ್ಯೋತಿ ನಿನ್ಯಾರು ಹೋಲಾರ ?





ಹೆಣ್ಣುಮಕ್ಕಳ ಕಳುಹಿ ಹೆಂಗಿದ್ದೆ ನಮ್ಮವ್ವ ?
ಹನ್ನೆರಡಂಕಣದ ಅರಮನೆ । ಗೋಡೆ ಮೇಲೆ
ನಮ್ಮಂಥ ರೂಪ ಬರಕೋಳ !

ತಾವರೆಯ ಗಿಡಹುಟ್ಟಿ ದೇವರಿಗೆ ನೆರಳಾದಿ
ನಾ ಹುಟ್ಟಿ ಮನೆಗೆ ಎರವಾದೆ । ಹಡೆದವ್ವ
ನೀ ಕೊಟ್ಟಿ ಮನೆಗೆ ಹೆಸರಾದೆ

ಸಂತೇಯ ಮನೆಯೋಳು ಸಮರಂತಿ ನಮ್ಮವ್ವ
ಸಂತಿಟ್ಟು ನನ್ನ ಕಳುಹ್ಯಾಳೆ । ನಿಂತಾಳೆ :
ಸಾಲುಸಂಪಿಗೆ ನೆರಳಾಗಿ



ಆಕಳು ಕರು ಬಂದು ಅಂಬ ಅಂಬಾ ಎಂದು
ತಮ್ಮಮ್ಮನ ಮೊಲೆಯ ನಲಿನಲಿದು । ಉಂಬಾಗ
ನಮ್ಮವ್ವನ ಧ್ಯಾನ ನನಗಾಗಿ

ಹಾಲುಂಡ ತವರೀಗೆ ಏನೆಂದು ಹಾಡಲೇ ?
ಹೊಳೆದಂಡೆಲಿರುವ ಕರಕೀಯ । ಕುಡಿಯಂಗೆ
ಹಬ್ಬಾಲಿ ಅವರ ರಸಬಳ್ಳಿ

ಹೆಣ್ಣುಮಕ್ಕಳ ದುಃಖ ಹೆತ್ತವ್ವ ಬಲ್ಲಳು
ಹುತ್ತದ ಒಳಗಿರೋ ಸರುಪಾನ । ಬೇಗೆಯ
ನೆತ್ತೀ ಮೇಲಿರುವ ಶಿವ ಬಲ್ಲ

ತೊಟ್ಟಿಲ ಹೊತ್ಕೊಂಡು ತವರು ಬಣ್ಣ ಉಟ್ಕೊಂಡು
ಅಪ್ಪಕೊಟ್ಟೆಮ್ಮೆ ಹೊಡಕೊಂಡು । ತೌರೂರ
ತಿಟ್ಹತ್ತಿ ತಿರುಗಿ ನೋಡಾಳು

ಕಣ್ಣು ಕಾಣುವ ತನಕ ಬೆನ್ನು ಬಾಗುವ ತನಕ
ತಾಯಿರಲಿ ನನಗ ತವರಿರಲಿ । ನನ್ನವ್ವ
ಅಣ್ಣಯ್ಯರಿರಲಿ ಕರಿಸಾಕ

ಮೂಡಲ ಸೀಮೆಗೆ ಹೋಗಿಬಾರೊ ಮಳೆರಾಯ
ಕಗ್ಗಲ್ಲ ನನ್ನ ತವರೂರಿಗೆ । ಹೋಗಿ
ಜಗ್ಗಿಸಿ ಹುಯ್ಯೋ ಮಳೆರಾಯ


❊ ❊ ❊

ತಾಯಿಲ್ದ ತವರನ್ನು ಬಯಸದಿರು ನನ ಮನವೇ
ಮೇವಿಲ್ದ ಹೊಲಕೆ ಕರುಹೋಗಿ । ಅಳುವಂತೆ
ತಾಯಿಲ್ದ ತೌರಲ್ಲಿ ಹೆಣ್ಣು ಗೋಳು

ಹೆಣ್ಣಾಗಿ ಹುಟ್ಟೋಕಿಂತ ಮಣ್ಣಾಗಿ ಹುಟ್ಟಿದರೆ
ಮಣ್ಣೀನ ಮೇಲೊಂದು ಮರವಾಗಿ । ಹುಟ್ಟಿದರೆ
ಪುಣ್ಯವಂತರಿಗೆ ನೆರಳಾದೊ

ಗಂಗೆಯಷ್ಟು ಮಾಯೆ ಗೌರಿಗಿಲ್ಲೇಳು ಶಿವನೆ
ನಡುನೀರ ತಂಪು ದಡಕಿಲ್ಲ । ಲೋಕಾದಿ
ಮಗಳಷ್ಟು ಮಾಯೆ ಸೊಸೆಗಿಲ್ಲ

ಹೆಣ್ಣೀಗೆ ತೌರೂರು ರಸಬಾಳೆ ಹಣ್ಣಂತೆ
ಮಲೆನಾಡು ತುಡುಬೆ ಜೇನಂತೆ । ತಾಯಿಯ
ಎದೆಹಾಲು ರುಚಿಯ ಸವಿದಂತೆ



ಬಳಗವು ಹೆಚ್ಚಾಲಿ ಬಂಧಾನ ತಗ್ಗಾಲಿ
ಕೊಳಗದಿ ಹೊನ್ನು ಅಳೆಯಾಲಿ । ತೌರೀನ
ನಡುಮನೆ ಜ್ಯೋತಿ ಉರಿಯಾಲಿ

ತೌರೂರ ಹಾದೀಲಿ ಗಿಡವೆಲ್ಲ ಮಲ್ಲೀಗೆ
ಹೂವರಳಿ ಪರಿಮಳ ಘಮ್ಮೆಂದೊ । ನಾಕೊಯ್ದು
ಗಿಡಕ್ಕೊಂದು ಹೂವು ಮುಡಿದೇನು

ಮಳೆ ಬಿಟ್ಟರೂ ಮರದ ಹನಿ ಬಿಡದು ತಾಯವ್ವ
ನೀ ಬಿಟ್ಟರೂ ನಿನ್ನ ಮನೆ ಬಿಡದು । ನನ್ನವ್ವಾ
ನಿನ್ನಾಸೆ ನನ್ನ ಬಿಡದಲ್ಲೆ

○



## ಒಡಹುಟ್ಟು

ನಾಗರ ಹೆಡೆಹಂಗೆ ನಾಲ್ವಾರು ಅಣ್ಣತಮ್ಮ
ನಾ ಏನು ಬಲ್ಲೇನು ಬಡತಾನ । ಅಣ್ಣಯ್ಯ
ಮಾಡಿಸಿ ಕೊಡುವನು ಒಡವೇಯ

ಏರಿ ಚಿನ್ನದ ಏರಿ, ಏರಿ ರನ್ನದ ಏರಿ
ಏರಿಯ ಕೆಳಗೊಂದು ಎಲೆತೋಟ । ದೊಳಗಿರುವ
ಅವರ ಮಾವ ಕೇಳ್ಯಾರೊಂದು ಹೊಸಮಾತ

ಹೊಸ ಮಾತ ಕೇಳ್ಯಾರೆ ಹುಸಿ ನಗುವ ನಕ್ಯಾರೆ
ಎಸಳ ಮಲ್ಲಿಗೆಯ ಬಿಡಿಸ್ಯಾರೆ । ಮಾಲೆಕಟ್ಟಿ
ಸೊಸೆಯಿದ್ದ ಬಳಿಗೆ ಕಳಿಸ್ಯಾರೆ


ಕಾವೇರಿ ಕಲಕೀದ ನೀರ್ಹೆಂಗೆ ಮೊಗೆಯಾಲಿ
ಭೂಮಿ ತೂಕದ ನನ್ನ ತಮ್ಮ । ಇದ್ದಾಗ
ನಾನೇಕೆ ಬಡತನ ಬಯಸಲಿ ?

ಅಣ್ಣನ ಆರೆತ್ತು ತಮ್ಮನ ಮೂರೆತ್ತು
ನಮ್ಮಪ್ಪನೆತ್ತು ಹದಿನಾರು । ಬರುವಾಗ
ನನ್ನೂರ ಭೂಮಿ ನಡುಗ್ಯಾವ

ಬಡವರು ಬಗ್ಗರು ಹೆಡಗಿ ಬುಟ್ಟಿಯವರು
ಹೋಗಿರಿ ನನ್ನ ತವರೀಗೆ । ಅಣ್ಣಯ್ಯ
ಧರುಮದ ಹಗೇವ ತಗೆದಾನ

ಸೊಲ್ಲಾಪುರದಣ್ಣನ ನಿಲ್ಲದಲೆ ಬರಹೇಳ
ಸೀರೊಲ್ಲೆ ಅವನ ಕುಬುಸೊಲ್ಲೆ । ಅಣ್ಣನ
ಮಾರಿ ನೋಡಂಥ ಮನವಾಗಿ

ಗಿಡ್ಡರು ನಡೆದರೆ ಗಿಣಿ ಹಿಂಡು ನಡೆದಂಗೆ
ಉದ್ದನ ಬಾಲಿ ನನ ತಂಗಿ । ನಡೆದರೆ
ರುದ್ದರನ ತೇರು ಎಳೆದಂಗ



ಕಾರ್‌ಹುಣ್ಣಿಮೆ ಮರುದಿನ ಅಣ್ಣ ಬ್ಯಾಟೆಗೆ ಹೋದ
ಹೆಣ್ಣ ಚಿಗರಿಯ ಕೊಲಬ್ಯಾಡ ! ಅಣ್ಣಯ್ಯ
ನನ್ನ ಸರಿ ಮಾಡಿ ಬಿಡು ಅದನ



ಬಾವುಲಿ ಇಟ್ಟುಕೊಂಡು ಕಾವೂಲಿ ತಿದ್ದುವ
ಗಾಳಿ ಬಂದತ್ತ ಬಳಕೂವ । ನನ ತಮ್ಮ
ಬಾಳಿಯಲಿಗಿಂತ ಬಲು ಚೆಲುವ

ಸರದಾರ ಬರುವಾಗ ಸುರಿದಾವ ಮಲ್ಲೀಗಿ
ದೊರೆ ನನ್ನ ತಮ್ಮ ಬರುವಾಗ । ಯಾಲಕ್ಕಿ
ಗೊನಿ ಬಾಗಿ ಹಾಲ ಸುರಿದಾವ

ಕುದುರೀಯ ಕುಣಿಸೂತ ಆನೀಯ ನಡಸೂತ
ಅರಗಿಣಿಗೆ ಮಾತು ಕಲಿಸೂತ । ಬರುತಾನ
ಬರಿಗೊಡದಮ್ಮ ಬದಿಗಾಗ

ತೋಟಕೆ ಹೋದಣ್ಣಯ್ಯ ಊಟಕ್ಕೆ ಬರಲಿಲ್ಲ
ತೋಟದ ಹೂವ ತಲೆತುಂಬ । ಮುಡಕೊಂಡು
ಊಟದ್ದಂಬಲವ ಮರೆತಾನು



ಬಂಗಾರ ಬೇಡ ಬಳೆ ಬೇಡ ಅಣ್ಣಯ್ಯ
ಕೊಡಿರೊ ನನಗೊಂದು ಎಮ್ಮೆಯ । ಅಣ್ಣಯ್ಯ
ಹೆಸರ್ಹೋಳಿ ಮೊಸರ ಕಡೆದೇನು

ಮನೆಯ ಹಿಂದಲ ಮಾವು ನೆನೆದಾರ ಘಮ್ಮೆಂದೊ
ನೆನೆದ್ಹಂಗೆ ಬಂದ ನನ್ನ ಅಣ್ಣ । ಬಾಳೆಯ
ಗೊನೆಹಂಗೆ ತೋಳ ತಿರುವೂತ

ತೌರೂರ ದಾರೀಲಿ ತೆಗಿಸಣ್ಣ ಬಾವೀಯ
ಅಕ್ಕ ತಂಗೀರು ತಿರುಗಾಡೊ । ಹಾದೀಲಿ
ತೆಗಿಸಣ್ಣ ಕಲ್ಯಾಣದ ಕೊಳಗಳ

ಕರಿಯ ಸೀರೆಯನುಟ್ಟು ಕೆರೆಯ ನೀರಿಗೆ ಹೋದೆ
ಬೆಲೆಯ ಕೇಳಿದರು ಬಹುಮಂದಿ । ನಮ್ಮೂರ
ದೊರೆ ಮೋಜಿನಣ್ಣ ಉಡಿಸ್ಯಾನ

ಎತ್ತು ಕಾಯಲು ಹೋದ ಚಿಕ್ಕ ತಮ್ಮಯ್ಯನು
ಹುತ್ತವ ಒರಗಿ ಮಲಗ್ಯಾನ । ಹಣೆಯ ಮೇಲೆ
ಮುತ್ತು ಬರೆದಾವೆ ಬೆಲೆ ಮಾಡೆ

ಅವರೀಗಿ ಅವರಣ್ಣ ಅವಲಕ್ಕಿ ಕಳುವ್ಯಾನ
ನಮ್ಮಣ್ಣನೇನ ಬಡವೇನ । ಕ್ಯಾದಿಗಿ
ಗರಿಯೊಳಗ ಫಳಗಿ ಕಳಸ್ಯಾನ

ಕಾಲುಂಗರ ತಂಗಿಯ ಕರೆಯ ಬಂದಿದಾರೆ
ಕಾರ್ಹೊಡ್ಡಿ ಹುಯ್ಯೋ ಮಳೆರಾಯ । ತಂಗೀಯ
ಇಂದೀನ ಪಯಣ ಉಳಿಯಾಲಿ





## ರಾಗಿಕಲ್ಲು

ಬೀಸುವ ಪದ ಚಂದ ಕೂಸಿನಾ ದನಿ ಚಂದ
ನವಿಲಾಡೊ ನಮ್ಮ ವನ ಚಂದ । ಚನ್ನಿಗರ
ಬೆವರೀನ ಗಂಧ ಬಲು ಚಂದ

ಬೀಸಾಕ ಕುಂತರ ಬ್ಯಾಸರಿಕಿ ನಮಗಿಲ್ಲ
ಸೂಸಿ ಹರಿದಾವ ತವರಿಗು । ನಮ್ಮ ಪದ
ಕೂಸಿಗು ಬಂತು ಸವಿ ನಿದ್ದೆ

ಶರಣೆಂಬೆ ಶಿವನಿಗೆ ಶರಣೆಂಬೆ ಗುರುವಿಗೆ
ಶರಣೆಂಬೆ ಶಿವನ ಮಡದೀಗೆ । ಗೌರಮ್ಮಗೆ
ಶರಣೆಂದು ಕಲ್ಲ ಹಿಡಿದೇನ

ಮಂದೇನ ಕೊಟ್ಟೀತ ಮನವೇನ ದಣಿದೀತ
ಮುಂಜಾನದಾಗ ಗಿರಿಮಲ್ಲ । ಕೊಟ್ಟರ
ಮನಿತುಂಬಿ ನಮ್ಮ ಮನ ತುಂಬಿ

ಕಂಡುಗ ರಾಗಿ ಬೀಸೊ ರನ್ನ ಮುತ್ತಿನ ಕಲ್ಲೆ
ದಂಡೆ ತಂದಿವ್ನಿ ಕೊರಳಿಗೆ । ನಮ್ಮನೆಯ
ಕಂಬದ ಸಾಲಲ್ಲಿ ಇರು ಬಾರೊ

ಕಲ್ಲೇ ಬೀಸೋ ಕಲ್ಲೇ ಸಕ್ಕರೆ ಒಡಗಲ್ಲೇ
ಅಪ್ಪನ ಮನೆಯ ರಜಗಲ್ಲೇ । ಪಚ್ಚೆಕಲ್ಲೆ
ಬಿತ್ತರದ ಕಲ್ಲೆ ಕೊಡು ದನಿಯ

ಕಲ್ಲವ್ವ ಮಾತಾಯಿ ಮೆಲ್ಲವ್ವ ರಾಜಣವ
ಜಲ್ಲ ಜಲ್ಲನೆ ಉದುರವ್ವ । ನಾ ನಿನಗೆ
ಬೆಲ್ಲದಾರತಿಯ ಬೆಳಗೇನು

ರಾಗಿಯು ಮುಗಿದಾವು ರಾಜಾಣ ಹೆಚ್ಚಾವು
ನಾನ್ಹಿಡಿದ ಕೆಲಸ ವದಗ್ಯಾವು । ರಾಗಿ ಕಲ್ಲೇ
ನಾ ತೂಗಿ ಬಿಡುವೇನು ಬಲದೋಳ

ಕಲ್ಲು ಬಿಡ್ತೀನೆಂದು ಸಿಟ್ಟಾಕೆ ಸರಸತಿಯೆ
ಕುಕ್ಕೇಲಿ ರಾಗಿ ಬೆಳೆಯಾಲಿ । ತಕ್ಕೊಂಡು
ಮತ್ತ ರಾತ್ರೀಗೆ ಬರುತೀನಿ



ಆದಾವ ನಮ್ಮ ಜೋಳ ಉಳಿದಾವ ನಮ್ಮ ಹಾಡ
ಈಗ ಸಾಕವ್ವ ನಿನ ಕಲ್ಲ । ಕೈಯಾನ
ಹಾಕಿದುಂಗರ ಸವೆದಾವ

ಕಲ್ಲು ಕೊಟ್ಟಮ್ಮಾಗೆ ಎಲ್ಲಾ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ । ಆ ಮನೆಗೆ
ಮಲ್ಲಿಗೆ ಮುಡಿಯೋ ಸೊಸೆ ಬರಲಿ



## ಬಾಸಿಂಗ ತರುವಾಗ

ಸಂಸಾರವೆಂಬುದ ಸಾಗರ ಹೊಳೆಯವ್ವ
ಈಸ ಬಲ್ಲವಗ ಎದೆಯುದ್ದ । ಗಿಳಿರಾಮ
ಓದಬಲ್ಲವಗೆ ಕೈಲಾಸ

ಸತಿಪತಿ ಇದ್ದರ ಹಿತವಂತರಿರಬೇಕ
ಕುಂಬಾರುದ್ದುಳದಂಗ ಸಂಸಾರ । ಸಾಗಿದರ
ಮುಂದೈತಿ ತಂಗಿ ಕೈಲಾಸ

ಸಂಸಾರ ದಂದುಗ ಹಿಂಗದೊ ಶಿವರಾಯ
ಹಿಂಗುದಕ ಶರಣರ ಹಾದಿ । ಹಿಡಕೊಂಡು
ಗೆದಿಬೇಕ ಇದ್ದು ಸಂಸಾರ

ಒಂಬತ್ತು ತಿಂಗಳು ನಿನ್ನ ತುಂಬಿಕೊಂಡು ತಿರುಗೇನ
ಹಂಬಲಿಸಿ ನಿನ್ನ ಹಡದೇನ । ಚಿತ್ತಾರದ
ಗೊಂಬಿ ನಿನಗೊಪ್ಪಿಸಿ ಕೊಡಲ್ಹ್ಯಾಂಗ ?

ಕೋಳಿ ಕೂಗೀತು ಕುಂಬಳದ ಹೂವೀಗೆ
ಬೆಟ್ಟ ಕೂಗೀತು ಬಿದಿರೀಗೆ । ಗೆಣೆಕಾರ
ನಾನು ಕೂಗಿದೆ ನಿನಗಾಗಿ

ಕಮಲಾದ ಹೂ ನಿನ್ನ ಕಾಣದೆ ಇರಲಾರೆ
ಮಲ್ಲಿಗೆ ಮಾಯೆ ಬಿಡಲಾರೆ । ಕೇದಿಗೆ
ಗರಿ ನಿನ್ನನಗಲಿ ಇರಲಾರೆ

ಬಾಸಿಂಗ ತರುವಾಗ ಸೂಸಾಡಿ ಮಳಿಯಾಗಿ
ಬಾಸಿಂಗ ಚಿಗಿತು ಬನವಾಗಿ । ನಮ್ಮೂರ
ಕೂಸ ಬಡವರಿಗೆ ನೆರಳಾಗಿ

ದಂಡೆಯನು ತರುವಾಗ ತೊಂಡಲದ ಮಳೆಯಾಗಿ
ದಂಡೆಲ್ಲಿ ಅರಳಿ ಹೂವಾಗಿ । ಗೊನೆ ಬಿಟ್ಟು
ಪುಂಡ ಮದುಮಗನ ಫಲವಾಗಿ




ದುಂಡುಮಲ್ಲಿಗೆ ಹೂವ ತೊಂಡಲದ ನೆನೆದಂಡೆ
ಇಂಡಿ ಕೊರಳೊಳಗೆ ಬಾಸಿಂಗ । ಹೂವನು
ಕೊಂಡು ಮೆರಸಿದರ ಬೆಳತನಕ

ಹಸೆಯ ಬರೆವರ ಕೈಲಿ ಹನ್ನೆರಡು ಬಿಳಿಯೆಲೆ
ಬಣ್ಣದ ಚಂಚು ಬಲಗೈಲಿ । ಕುಂತಮ್ಮ
ಬಿನ್ನಣದ ಹಸೆಯ ಬರೆದಾಳೊ

ಬೆಲ್ಲದ ಹಸೆಯ ಬಲ್ಲಮ್ಮ ಬರಿದಾಳೊ
ಬೆಲ್ಲದ ಅಚ್ಚು ಕೊರೆದಾಗೆ । ಮಣೆಯ ಮೇಲೆ
ಮಲ್ಲಿಗೆ ಹೂವ್ಯಾರು ಬರೆದೋರು ?

ಬಾಸಿಂಗ ಕೊರೆದವಗೆ ಬಟ್ಟಲ ಹೊನ್ನ ಕೊಡುವೆ
ಕ್ಯಾಸಕ್ಕಿ ಗದ್ದೆ ಬಯಲ ಕೊಡುವೆ । ನನ್ನೂರ
ಬಾಸಿಂಗ ಕೊರೆದ ಬೆಡಗನಿಗೆ

**ಗಂಡ ಹೆಂಡಿರ ಜಗಳಾ ಗಂಧ ತೀಡಿದಾಂಗ**
**ಲಿಂಗಕ ನೀರು ಎರೆದಾಂಗ । ಹಿರಿಹೊಳೆಯ**
**ಗಂಗವ್ವ ಸಾಗಿ ಹರಿದಂಗ**





ನಾನು ನನ್ನ ಗೆಳತಿ ಕೂಡಿ ನೀರಿಗಿ ಹೋಗಿ
ಕುಲವ ಕೇಳ್ಯಾರ ಬಹುಮಂದಿ । ಕೇಳಿದರ
ಕುಲವೆರಡು ನಮ್ಮ ಮನವೊಂದು


# ಆಡಿ ಬಾ ನನಕಂದ

ತೊಟ್ಟಿಲದಾಗೊಂದು ತೊಳೆದ ಮುತ್ತನು ಕಂಡೆ
ಹೊಟ್ಟೆ ಮ್ಯಾಲಾಗಿ ಮಲಗ್ಯಾನ । ಕಂದ್ಯೆಗ
ಮುತ್ತೀನ ದೃಷ್ಟಿ ತೆಗೆದೇನ

ಅತ್ತರೆ ಅಳಲವ್ವ ಈ ಕೂಸು ನನಗಿರಲಿ
ಕೆಟ್ಟಾರೆ ಕೆಡಲಿ ಮನೆಗೆಲಸ । ಕಂದನಂಥ
ಮಕ್ಕಳಿರಲವ್ವ ಮನೆತುಂಬ

ಹಸಿರಂಗಿ ತೊಡಸೀದ ಕಾಲ್ಗಡಗ ಇಡಸೀದ
ಹಳ್ಳಕ ನೀನು ಬರಬ್ಯಾಡ । ನನ ಕಂದ
ಬೆಳ್ಳಕ್ಕಿ ಹಿಂಡು ಬೆದರ್ಯಾವ

ತವರೂರಿಗ್ಹೋದಾಗ ನವಿಲ ಬಣ್ಣದ ಪಕ್ಷಿ
ತಲಬ್ಯಾನಿಯೆದ್ದು ಅಳುತಿತ್ತ । ಕಂದನ
ಚಲುವೀಕಿ ನೋಡಿ ನಗುತಿತ್ತ





ಕಂದಯ್ಯ ಅತ್ತರ ಕಣಗೀಲ ಕಾತಾವ
ಒಣಗಿದ್ದ ಬಾಳೆ ಚಿಗಿತಾವ । ಗೆಳತ್ಯಮ್ಮ
ಬರಡಾಕಳೆಲ್ಲ ಹೈನಾಗಿ

ಬಾಲ ಹನುಮನ ಮುಂದ ಬಾಗಿ ಚೆಂಡಾಡ್ಯಾನ
ಬಾವ್ಹಲಿಗಿವಿಯ ನನ ಕಂದನ । ಕಂಡರ
ಬಾಲೇರು ಬಸಿರ ಬಯಸ್ಯಾರ



ಬೆಟ್ಟಕ್ಕೆ ಬಿದಿರಾಸೆ ಹೆಣ್ಣಿಗೆ ತೌರಾಸೆ
ಬಿತ್ತಿದ ಬೆಳೆಗೆ ಮಳೆಯಾಸೆ । ಎನ್ನಯ್ಯ
ನಿನ್ನಾಸೆ ನನಗೆ ಅನುಗಾಲ

ಅಳುವ ಕಂದನ ತುಟಿಯು ಹವಳದ ಕುಡಿಯಂತೆ
ಕುಡಿ ಹುಬ್ಬು ಬೇವಿನೆಸಳಂತೆ । ಕಣ್ನೋಟ
ಶಿವನ ಕೈಯಲಗು ಹೊಳೆದಂತೆ

ನನ್ನಯ್ಯನಂಥೋರು ಹನ್ನೆರಡು ಮಕ್ಕಳು
ಹೊನ್ನೇಯ ಮರದ ನೆರಳಲ್ಲಿ । ಆಡ್ವಾಗ
ಸನ್ಯಾಸಿ ಜಪವ ಮರೆತಾನು

ಆಡಿ ಬಾ ನನಕಂದ ಅಂಗಾಲ ತೊಳೆದೇನು
ತೆಂಗಿನಕಾಯಿ ತಿಳಿನೀರ । ತಕ್ಕೊಂಡು
ಬಂಗಾರದ ಮುಖವ ತೊಳೆದೇನು

ಸೊಸೆಯು ಗಂಡ್ಹಡೆಯಲಿ ಮಗಳು ಹೆಣ್ಣಡೆಯಲಿ
ಎಳೆಗರು ಎಮ್ಮೆ ಕರೆಯಲಿ । ನಮ್ಮನೆಯ
ಸಡಗರ ನೋಡೋಕೆ ಶಿವ ಬರಲಿ

ನನ್ನಯ್ಯ ನೀ ಬಾಳು ಇನ್ನು ಸಾವಿರ ಕಾಲ
ಹೊನ್ನೇಯ ಬುಡದ ಗರೀಕೆಯ । ಬೇರಂತೆ
ಮೊಮ್ಮಕ್ಕಳ್ಹೆತ್ತಿ ಸುಖಿಯಾಗು

ಜೋಗುಳ ಹಾಡಿದರೆ ಆಗಲೆ ಕೇಳ್ಯಾನು
ಹಾಲ ಹಂಬಲವ ಮರೆತಾನು । ಕಂದ್ಯೆಗೆ
ಜೋಗುಳದಾಗೆ ಅತಿಮುದ್ದು

ಕೂಸು ನನ ಕಂದಯ್ಯ ಕೇಸ ಬಿಟ್ಟಾಡಾಗ
ದೇಶದಿಂದೆರಡು ಗಿಣಿ ಬಂದು । ಕೇಳ್ಯಾವ
ಕೂಸೆ ನೀನಾರ ಮಗನೆಂದು

ಗುಬ್ಬಿ ಗುಬ್ಬಿ ಚೆಂದ ಗುಬ್ಬಿಯ ಮರಿಚಂದ
ಗುಬ್ಬೋಗಿ ಮೇವ ಹೊಳಿಚಂದ । ಬಾಲಯ್ಯನ
ಹುಬ್ಬು ತಿದ್ದಿದ ಮೊಕ ಚಂದ



ಬ್ಯಾನೀಯ ತಿನುವಾಗ ಬ್ಯಾಡವ್ವ ಮಕ್ಕಾಳು
ಬಾಗಿ ಬಚ್ಚಲಕ ಹೋಗಾಗ । ಬಯಸ್ಯಾರ
ನೂರೊಂದು ಫಲವ ಕೊಡು ಶಿವನೆ

ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು । ಕಂದಯ್ಯ
ಜ್ಯೋತಿಯೆ ಆಗು ಜಗಕೆಲ್ಲ

ಯಾರ ಆಶೆಯೆ ನಿನಗೆ ಪಾರಿವಾಳದ ಪಕ್ಷಿ
ನೀರಾಸೆ ಮರದ ನೆರಳಾಸೆ । ಕಂದಯ್ಯ
ನಿನ್ನಾಸೆ ನಮ್ಮ ಮನೆಗೆಲ್ಲ





ಕಾಡಿಗ್ಹಚ್ಚಿದ ಕಣ್ಣು ತೀಡಿ ಮಾಡಿದ ಹುಬ್ಬು
ಮಾವಿನ ಹೋಳು ನಿನ ಕಣ್ಣು । ಕಂದಯ್ಯ
ಮಾವ ಬಣ್ಣಿಸಿ ಕರೆದಾನ

ತೊಟ್ಟಿಲೊಳಗಿನ ಕಂದ ತೋಳ ಬೀಸುವ ಚಂದ
ರಟ್ಟೆ ನೊಂದಾವು ಎಲೆಕಂದ । ನಿಮ್ಮವ್ವ
ದೃಷ್ಟಿ ಮುರಿಲಾಕೆ ಅರಿಯಾಳು

ಕೂಸು ಇದ್ದಾ ಮನಿಗೆ ಬೀಸಣಿಗೆ ಯಾತಾಕೆ ?
ಕೂಸು ಕಂದಯ್ಯ ಒಳಹೊರಗ । ಆಡಿದರೆ
ಬೀಸಣಿಕೆ ಗಾಳಿ ಸುಳಿದಾವ

○

# ಬದುಕು

ಕಲ್ಲು ಮುಳ್ಳಿದ್ದರೆ ಹುಲ್ಲಂತ ತಿಳಿದೇವು
ಸೊಲ್ಲೇರಿಸಿ ಹಾಡಿ ನಡೆದೇವು । ಭಗವಂತ
ಸುಳ್ಳಾಡೆವು ದಾರಿ ಬಿರುಸಂತೆ

ಕತ್ತಲೆ ಕಾಡುಪಾಲು ಸುತ್ತು ಮಾವಿನ ಸಾಲು
ಎತ್ತೆತ್ತಲು ಬೆಳಕು ದವುಡಿಟ್ಟು । ಹಬ್ಯಾವು
ದೀಪದ ದಾರಿ ನೇರಾಗಿ

ಕಿಚ್ಚಿನ ಸುತ್ತ ನುಚ್ಚಕ್ಕಿ ಹಸೆ ಹುಯ್ದು
ಮುತ್ತಿನ ಕಳಸ ನಡುವಿರಿಸಿ । ನಾಗವ್ವನ
ಕಿಚ್ಚೀಗೆ ಧಾರೆ ಎರೆದಾರು






ಮಲ್ಲಿಗೆ ವನದಲ್ಲಿ ಮುದ್ದುಗಂಬಳಿ ಹಾಸಿ
ಮುದ್ದು ಹನುಮಯ್ಯ ಪಗಡೇಯ । ಆಡುತಾನೆ
ಮಲ್ಲಿಗೆ ಮೊಗ್ಗು ಸುರಿದಾವೆ

ಮೇಲುಕೋಟೆ ಚೆಂದ ಮೇಲು ಅಂಗಡಿ ಚೆಂದ
ತೇರಮೇಲಿರುವ ಚಿನಪಿಳ್ಳೆ । ಚೆಲುವಯ್ಯ
ತೋಳ ಬಾಪುರಿ ಮಣಿ ಚೆಂದ

ಪಿಲ್ಲೀಯ ಕಾಲಿನೋಳೆ ಚೆಲ್ಲೀದ ನೆರಿಗೋಳೆ
ಕಲ್ಲ ಮೇಲೆ ಕಾಲ ತೊಳಿಯೋಳೆ । ಹುಚ್ಚಮ್ಮ
ನಿನ್ನ ಪಿಲ್ಲಿ ಸಾವಿರಕೆ ಬೆಲೆಯಾದೊ

ಬೆಳದಿಂಗಳ ಬೆಳಕಿನಲ್ಲೀ ನಮ್ಮಣ್ಣ
ಅವರೇಯ ಕುಯ್ಯಲ್ಹೋದ । ಅವರೇಯ
ಕಾಯೆಲ್ಲ ಸರಮಾಲೆ ಮುತ್ತಾದೊ



ಹಚ್ಚೆ ಹುಯ್ಸಿದಮ್ಮ ಹಾಡು ಕಲಿಸಿದಮ್ಮ
ಹಸು ಮಕ್ಕಳಿಗೆ ಹಾಲು ಎರೆದಮ್ಮ । ಗುರುತಾಳಿ
ಕುಶಲದ ಸತ್ಯರಿಗೆ ನೆರಳಾದೆ

ಭಾಗಾದಿ ಬಲಕಿರಲಿ ವೈರಿ ತಾ ಎಡಕಿರಲಿ
ಛಾಡಿ ನಿನ ಮನಿಯು ಇದಿರಿರಲಿ । ಬಲ ಭೀಮ
ದೇವ ನನ ಮೇಲೆ ದಯವಿರಲಿ


ಗಂಡ ಸತ್ತವ್ವಗ ರಂಡೆ ಮುಂಡೆನ ಬೇಡ
ಕಂದನ ಹಿಡಿದು ತಪಸಾಳ । ಅವಳೀಗಿ
ಗಂಗೆದೇವೆಂದು ಕರಿಬೇಕ

ಮದುವೀಯ ಮಾಡ್ಯುಕೆ ಒಡೆಯ ಕೊಟ್ಟನೊ ಹಣವ
ಮದುವೀಯ ಮಗನು ಮದುಮಗಳು । ಮಕ್ಕಳು
ಮರಿಮಕ್ಕಳೆಲ್ಲ ಸಾಲಗಾರರು

ಎಳೆ ಬಾಲೆ ಬತ್ತವ ಮೆರಿವಾಳು-ಏನಂದ್ರಿ?
ಏಳ್ಲೋಕದೊಡೆಯ ಕೈಮುಗಿವೆ । ಬಡವಿಯ
ನಾಳಿನ ಚಿಂತೆ ನಿಮಗಿರಲಿ

ಬೆಣ್ಣೆ ಬೆಂಕಿಗೆ ವೈರಿ ಸುಣ್ಣ ಕಣ್ಣಿಗೆ ವೈರಿ
ಜೀವಕ್ಕೆ ವೈರಿ ಹಗೆಯೋರು । ತಮ್ಮಯ್ಯ
ಚಿನ್ನಕ್ಕೆ ವೈರಿ ಕಳವೋರು

ಆಕಳಂಥ ಅತ್ತಿ ಗೋಕುಲಂಥಾ ಮಾವ
ಶ್ರೀ ಕೃಷ್ಣರಾಯನಂಥ । ಪತಿರಾಯನಿದ್ದರೆ
ಸಾಕೀದ ತವರ ಮರತೇನ




ಗಟ್ಟಕ್ಕೆ ಹೋಯ್ತೀನಿ ಕಟ್ಟೆಣ್ಣೆ ಬುತ್ತೀಯ
ಕಟ್ಟ್ಯಾಣೆ ಚೆಲುವೆ ಕಡು ಚೆಲುವೆ । ಕಟ್ಟಿದ ಬುತ್ತಿ
ಪಟ್ಟಣಕೆಲ್ಲ ಪರಿಮಳ

ಗಟ್ಟಕ್ಕೆ ಹೋಗೂವ ಎತ್ತೆಲ್ಲ ನಮ್ಮಾವು
ಗಟ್ಟದ ಕೆಳಗಿನ ಕೊಡಗರು । ಹೆಣ್ಮಕ್ಕಳು
ನಮ್ಮೆತ್ತಿಗಾರತಿ ಬೆಳಗ್ಯಾರು

ಹೆಣ್ಣೀನ ಕಾಯಾವ ಮಣ್ಣು ಮಾಡಲಿ ಬೇಕ
ಸುಣ್ಣದಳ್ಳಾಗಿ ಸುಡಬೇಕ । ಈ ಜಲುಮ
ಮಣ್ಣುಮಾಡಿ ಮರ್ತ್ಯವ ಗೆದಿಬೇಕ

ಬಂಗಾರ ಬಳಿಯಿಟ್ಟು ಬೈಬ್ಯಾಡ ಬಡವರನ
ಬಂಗಾರ ನಿನಗೆ ಸ್ಥಿರವಲ್ಲ । ಮಧ್ಯಾಹ್ನದ
ಬಿಸಿಲು ಹೊಳ್ಳುವುದು ತಡವಲ್ಲ

ಲೋಕದಾಗಿರತನಕ ಬೇಕಾಗಿ ಇರಬೇಕ
ಸಾಕಾಗಿ ಶಿವನ ಸದರೀಗಿ । ಹೋಗಾಗ
ಎಲ್ಲಾರು ಬರುತಾರೆ ಕಳಿಸಾಕ



ಬೆಳ್ಳಾನ ಬೆಳಗಾಗಿ ಬೆಳ್ಳಿ ಮೂಡಲವಾಗಿ
ಒಳ್ಳೊಳ್ಳೆ ಮೀನ ಗರಿತೆಗೆದು । ಆಡ್ಯಾವು
ಗರತಿ ಗಂಗಮ್ಮನ ಉಡಿಯಾಗ

ಬಡವರು ಸತ್ತಾರೆ ಸುಡುವುದಕೆ ಸೌದಿಲ್ಲೋ
ಒಡಲ ಬೆಂಕೀಲಿ ಹೆಣ ಬೆಂದೊ । ದೇವರೆ
ಬಡವರಿಗೆ ಸಾವ ಕೊಡಬೇಡ


ಅತ್ತೆ ಮಾವರ ಪಾದ ಮತ್ತೆ ಗುರುವಿನ ಪಾದ
ಸತ್ಯವಂತರ ಪಾದ ಶ್ರೀಪಾದ । ನೆನೆದಾರೆ
ಮಾಡಿದಂಥ ಪಾಪ ಪರಿಹಾರ

ಹೆಣ್ಣೀನ ಗೋಳಟ್ಟಿ ಬನ್ನೀಯ ಮರಬೆಂದೊ
ಅಲ್ಲಿ ಸನ್ಯಾಸಿ ಮಠ ಬೆಂದೊ । ಪಾಪಿಗಳ
ಪಂಚಾಂಗ ಕತ್ತಿ ಉರಿದಾವೆ

ಹಳ್ಳಾದ ದಂಡ್ಯಾಗ ಹಸುರು ಬಣ್ಣದ ಗುಬ್ಬಿ
ಬಿಸಿಲೀಗೆ ಬಾಯಿ ಬಿಡುತಾದ । ಆ ಗುಬ್ಬಿ
ಕುಶಲಾದ ನಗುವ ನಗುತಾದ

ಹತ್ತು ಗಂಡ್ಹಡೆದರೂ ಮತ್ತೆ ಬಂಜೆಂಬುರು
ದಟ್ಟೀಯ ಉಡುವ ಧರಣೀಯ । ಹಡೆದಾರೆ
ಹೆತ್ತ ತಾಯೆಂದು ಕರೆದಾರೆ

ಯೋಗಿ ಶರಣರ ಮಾತ ಗೂಗೇನ ಬಲ್ಲದ
ಕಾಗಿ ದರಾಕ್ಷಿ ಬನದಾಗ । ತಾ ಕುಂತು
ಬೇವಿನ ಹಣ್ಣ ಹುಡುಕಿತ್ತ



ಉತ್ತಮರ ಗೆಳೆತಾನ ಪುತ್ಥಳಿ ಬಂಗಾರ
ಮತ್ತೆ ಹೀನರ ಗೆಳೆತಾನ । ಮಾಡಿದರ
ಹಿತ್ತಾಳಿಗಿಂತ ಬಲು ಹೀನ

ಬೇವಿನ ಆ ಗಿಡಕ ಬೆಲ್ಲದ ಕಟ್ಟೇ ಕಟ್ಟಿ
ಜೇನು ತುಪ್ಪದಲಿ ಹೊಯ್ನೀರ । ಹಾಕಿದರ
ಬೇವು ತನ್ನಿಸುವ ಬಿಡಲಿಲ್ಲ

ಬೆಳಕು ಮನೆ ಮನೆ ಹೊಕ್ಕು ಕಳಕಳಿಯು ಬರುವಂತೆ
ತಿಳಿಸುವುದೊ ಸುದ್ದಿಯೆಂಬಂತೆ । ರವಿಕಿರಣ
ಹೊಳಪಿಳಿದು ಚೆದುರಿ ಚೆಲ್ಲಿದವು

## ಸಂಗಾತಿ

ನೀರಿಗ್ಹೋಗೋ ಹೆಣ್ಣೆ ನಿಲ್ಲೆ ನಾನು ಬರುತೀನಿ
ನಿನ್ನಾಣೆ ನಿನ್ನ ಕೊಡದಾಣೆ । ಕೊರಳೀನ
ಬಣ್ಣಾದ ಸರದಾಣೆ ಬರುತೀನಿ

ಬಣ್ಣದ ಸರದ ಮೇಲ್ ಕಣ್ ಯಾಕೊ ಗಿಣಿರಾಮು ?
ಹಣ್ಣಿಲ್ಲವೇನೊ ಮೆಲುವೋಕೆ । ನಿಮಕುಲದ
ಹೆಣ್ಣಿಲ್ಲವೇನೊ ತರುವೋಕೆ ?

ಚಿನ್ನದ ಚೀಲಕ್ಕೆ ರನ್ನಾದ ಬಾಯ್ದಾರ
ನಿನ್ನಂತೋನೊಬ್ಬ ಗೆಣೆಕಾರ । ನ ಕೂಡಾಡಿ
ನೆನ್ನಿಂದ ನೀರ ತರಲಿಲ್ಲಾ



ಹಾದೀಯ ಮನೆಯೋಳೆ ಗೋದೀಯ ನೆರಿಯೋಳೆ
ನನ ನೋಡಿ ಮೋರೆ ತಿರುವ್ಹೋಳೆ । ಗೆಣಗಾತಿ
ನಾನು ಮಾಡೀದ ಹಗೆಯೇನೆ ?

ಬರುವೇನು ಜಾಣ ಬರುವ ದಾರಿಯ ಕಾಯೊ
ಬತ್ತಿದ ಬಾಯೀಗೆ ಎಳೆನೀರು । ನಿಂಬೆಹಣ್ಣು
ತರುವೇನು ಜಾಣ ತಡಮಾಡೊ

ಆಚೆ ದಡದಲಿ ನೀನು ಈಚೆ ದಡದಲಿ ನಾನು
ಭಾಷೆ ತಾರ್‍ಹೆಣ್ಣೆ ಬಲಗೈಲಿ । ಎಲೆ ಹೆಣ್ಣೆ
ನಾ ಭಾಷೆಗೆ ತಪ್ಪೊಂತ ಮಗನಲ್ಲಾ

ಚೊಳ್ಳೆ ಹೂವಿನಂಗೆ ಜೋಕಾಡಿ ನನನಲ್ಲಾ
ತೆಳ್ಳಗಿದ್ದರೇನು ಗೆಣೆಗಾರ । ಹಾಕೀದ ಕೇಕೆ
ಮುಂಗಾರು ಸಿಡಿಲು ಹೊಡೆದ್ಹಂಗೆ

ಕೇಕೆ ಹಾಕಿದ ಕಂಡು ಬೇಕಾಗಿ ನಾ ಬಂದೆ
ಬಾರೊ ನನ ಗೆಣೆಯ ಬಯಲೀಗೆ । ನಾನೆಂದೂ
ಭಾಷೆ ತಪ್ಪೋಂತ ಮಗಳಲ್ಲಾ

ಕೋಳಿ ಕೂಗೀತು ಕುಂಬಳದ ಹೂವೀಗೆ
ಬೆಟ್ಟ ಕೂಗೀತು ಬಿದಿರೀಗೆ । ಗೆಣೆಗಾರ
ನಾನು ಕೂಗೀದೆ ನಿನಗಾಗಿ

ಎಲ್ಲೆಲ್ಲಿ ನೋಡಿದರೆ ಗೆಳತಿಯಂಥವರಿಲ್ಲಾ
ಹಲ್ಲು ನೋಡಿದರೆ ಹವಳಾವು । ಗೆಳತೀಯ
ಸೊಲ್ಲು ಕೇಳಿದರೆ ಸಮದಾನ



ಕಾಣಾದೆ ಇರಲಾರೆ ಕಾಶಿ ಕರ್ಜೂರಾವ
ಬಾಣಸೂರೀನ ಗೆಣತೀಯ । ಮುಖವನ್ನು
ನಾ ಕಾಣದರಗಳಿಗೆ ಇರಲಾರೆ

ಮುತ್ತಿನೋಲೆ ಬೇಕೆ ? ರತ್ನದೋಲೆ ಬೇಕೆ ?
ಪಟ್ಟೆ, ಬಣ್ಣಾಬೇಕೆ ನಡುವಿಗೆ । ನನ ಹೆಣ್ಣೇ
ನನ್ನ ಪಟ್ಟೆ ಆರತಿ ಪರಿಮಳವೆ



ಹಸನಾದ ಹೆಣ್ಣೇ ಎಸಳೆ ತೋಟಕೆ ಬಾರೆ
ರಸಮೆಟ್ಟಿದೆಲೆಯ ಕುಯಿಸ್ತೇನು । ನನ ಹೆಣ್ಣೇ
ಹಸನಾದ ನಗೆಯ ನಗಿಸ್ತೇನು

ಜಾತ್ರೀಗೆ ಹೊಗ್ತೀನಿ ಜವನಾವ ತತ್ತೀನಿ
ಹೂವು ತತ್ತೀನಿ ತುರುಬಿಗೆ । ನನ ಹೆಣ್ಣೆ
ನಿನಗೆ ಬಂದಿ ತತ್ತೀನಿ ಬಲಗೈಗೆ

ಆಚೇಯ ಕೇರಿಯವನೆ ಚೀಟಿವಸ್ತ್ರಾದವನೆ
ಪಾರಿವಾಳದಂಗೆ ಸುಳಿಯೋನೆ । ನನ ಗೆಣೆಯ
ದೂರು ಬರುತಾದೆ ನಿನಮೇಲೆ

ದೂರು ಬಂದಾರೆ ಬರಲಿ ವೈಯಾರ ನಿನಗಿರಲಿ
ರಾಣಿ ನಿನ್ನ ಮುಖ ಕಳೆಯಿರಲಿ । ಎಲೆ ಹೆಣ್ಣೆ
ನೂರು ಬಿದ್ದಾರು ನನಗಿರಲಿ

ಏರೀಯ ಕೆಳಗೆ ಏಳು ತೆಂಗಿನಮರ
ಬೇರಲಿ ನೀರ ಮೊಗೆಯೋಳೆ । ಎಲೆ ಹೆಣ್ಣೆ
ಕ್ವಾರೆ ನಿನ ಕೈಗೆ ಹಿಡಿ ಹೊನ್ನ

ಹಿಡಿ ಹೊನ್ನ ಕೊಟ್ಟಾರೆ ಗುಣವಿಲ್ಲಾ ಗೆಣೆಗಾರ
ಬಾ ಹೋಗು ನಮ್ಮ ಹೊಲಕಡೆ । ಮನೆಕಡೆ
ನಮ್ಮವರು ಕಂಡು ಬೋದಾರು

ಹದ್ದಿನಕಲ್ಲಲ್ಲಿರುವ ಬೆಟ್ಟಾದ ಹನುಮಂತ
ಬೆಡಗೀನ ಹೆಣ್ಣು ಒಲಿದಾರೆ । ಮಾಸ್ವಾಮಿ
ನಾ ಮುತ್ತ ಬಾಗಿಲ್ಗೆ ಹೆಣೆಸೇನು



ಹಂಬಾಲ ಬಿಟ್ಟು ತಿಂಗಾಳ ಮೇಲಾದೊ
ಕಣ್ಣೀಗೆ ನಿದ್ದೆ ಕವಿಯಾದೋ । ಗೆಣಗಾತಿ
ಮುಖ ತೋರೆ ಬಂದು ಸೊಪುನಾಕೆ

ಇಂಬೀಯ ಹಣ್ಣಿನಂಗೆ ತುಂಬೀತು ಮೈ ಬಣ್ಣ
ಹಂಬಾಲ ಬಿತ್ತು ನಿನಮೇಲೆ । ಗೆಣಗಾತಿ
ನಾ ಮೈಸೂರ ಸಂಬಾಳ ಬಿಟ್ಟು ಬರುತ್ತೀನಿ





ಇಂಬೀಯ ಹಣ್ಣಿನಂಗೆ ತುಂಬೀದ ಮೈಬಾಲೆ
ಕಾಣಾದೆ ನಿನ್ನ ಕೊರಗೇನು । ಗೆಣೆಗಾತಿ
ಕಾಣಲಿನ್ನೆಂಗೆ ಮನೆದೂರ

ಇಂಬೆ ಹಣ್ಣಿಗೆ ಬಂದೆ ತುಂಬೆ ಹೂವಿಗೆ ಬಂದೆ
ಹಂಬಲಿಸಿ ಬಂದೆ ನಿನ ಮನೆಗೆ । ಎಲೆ ಹಣ್ಣೇ
ತಾವೆಲ್ಲಿ ತೋರೆ ತಳುಗಾಕೆ

ಯಾಕೋ ಕಾಣೇ ನನ್ನ ಎಡಭುಜವು ಜುಮ್ಮೆಂತು
ಯಾಕೆನ್ನ ಗೆಣೆಯ ನೆನೆದಾನೊ । ನನ್ನ
ಕಲ್ಲಂತ ಎದೆಯು ಕರಗೀತು

ದನಿಹೆಂಗೆ ತೋರಾಲಿ ಕದಹೆಂಗೆ ತೆಗೆಯಾಲಿ
ಮಗ್ಗುಲಲ್ಲವನೆ ಮನೆಪುರುಷ । ನನ ಗೆಣೆಯ
ಮೊಗ್ಗಾಗಿ ಬಾರೋ ತುರುಬೀಗೆ

ಕಾರೆಂಬೋ ಕತ್ತಲೆ ಭೋರೆಂಬೊ ಮಳೆ ಮೋಡ
ಏನು ಹಿಡಿದಿತ್ತೊ ಬರುವೋಕೆ । ನನ ಗೆಣೆಯ
ನಿನಗೆ ರಾಣೆಲ್ಲವೇನೊ ಮನೆಯಲ್ಲಿ ?

ರಾಣಿದ್ದರೇನೆ ಪ್ರಾಣಕಾಂತೆ ನೀ ಕೇಳೆ
ನೀನೆ ಪಂಜರದ ಅರಗೀಣಿ । ನನ ರಾಣೀ
ನಾನು ಮರತ್ಹಂಗೆ ಇನ್ನು ಬದುಕಾಲಿ

* * *

ಗಂಗೇಗೆ ಮುಂದಾಗಿ ಊರೀಗೆ ಹಿಂದಾಗಿ
ಸೂಯೆಂದು ಸೀರೆ ಒಗೆಯೋನೆ । ಮಡಿವಾಳಿ
ಈ ಊರಲ್ಲೇನಯ್ಯ ಹೊಸ ಸುದ್ದಿ ?

ಮಾಯೂರ ಮಲ್ಲ ಮಡಿದ್ಹೋದ ಸುದ್ದೀ ಕೇಳಿ
ಹೊತ್ತಿದ್ದ ಕೊಡವ ಕೆಳಗ್ಹಾಕಿ । ಆ ನಾರಿ
ದುಃಖ ಮಾಡ್ಯಾಳೆ ಹೊಳೆಯಲ್ಲಿ

ಹೊತ್ತಿದ ಕೊಡವಾನೆ ದೊಪ್ಪಾನೆ ಎತ್ಹಾಕಿ
ಅವಳಿಚ್ಚೆ ಬಂದಂತೆ ಅಳುತ್ತಾಳೆ । ಬಾಲೆಯು
ಹಾಡ್ಹಾಡಿಕೊಂಡು ಅಳುತಾಳೆ

ಚಿನ್ನದ ಕೊಡನಲ್ಲಾ ರನ್ನದ ಕೊಡನಲ್ಲಾ
ಮಣ್ಣೀನ ಕೊಡಕ್ಯಾಕೆ ಕಡುದುಃಖ । ಎಲೆ ಬಾಲೆ
ಪುರುಷಾಗೆ ಹೇಳು ತರುತಾನೆ

ಕೊಡ ಕೊಡ ಎಂದಾರೆ ಈ ಸೀಮೆ ಕೊಡನಲ್ಲಾ
ನಾಗಮಂಗಲದ ಜಗಜೋಡಿ । ಕೊಡವನ್ನು
ನಾ ಹತ್ವರ್ಷದಿಂದ ಬಳಸಿದ್ದೆ



ಅತ್ತೆ ಕಾಣಾದ್ವಾಗೆ ಮಾವ ನೋಡಾದ್ವಾಗೆ
ಒಪ್ಪದಲಿ ನಾನು ಬಳಸಿದ್ದೆ । ಈ ಕೊಡವು
ನುಚ್ಚಾಯ್ತು ನೀರ ಹೊಳೆಯಲ್ಲಿ




## ಗಣನಾಯ್ಕ

ಶರಣು ಶರಣುವಯ್ಯ ಗಣನಾಯ್ಕ
ನಮ್ಮ ಕರುಣದಿಂದಲಿ ಕಾಯೋ ಗಣನಾಯ್ಕ

ಎಳ್ಳುಂಡೆ ಜೇನುತುಪ್ಪ ಗಣನಾಯ್ಕ
ನಮಗೆ ವಿದ್ಯಾವ ಕಲಿಸಯ್ಯ ಗಣನಾಯ್ಕ

ಉದ್ದು ಹೋಳಿಗೆ ತುಪ್ಪ ಗಣನಾಯ್ಕ
ನಿಮಗೆ ತಪ್ಪದೆ ಒಪ್ಪಿಸುವೆ ಗಣನಾಯ್ಕ

ಗೊನೆಮೇಗಳ ಬಾಳೆಹಣ್ಣು ಗಣನಾಯ್ಕ
ನಿಮಗೆ ಕಳಿ ಅಡ್ಕೆ ಚಿಗುರೆಲೆ ಗಣನಾಯ್ಕ



ಕೊಂಬೆಮೇಗ್ಲ ನಿಂಬೆಹಣ್ಣು ಗಣನಾಯ್ಕ
ನಿಮಗೆ ಒಡಗಾಯಿ ಇಡಗಾಯಿ ಗಣನಾಯ್ಕ

ಕರ್ಪೂರ ಸಾಂಬ್ರಾಣಿ ಗಣನಾಯ್ಕ
ನಿಮಗೆ ಮರುಗ ಮಲ್ಲಿಗೆ ಜಾಜಿ ಗಣನಾಯ್ಕ

ಹಸುರಂಗಿ ಕಾಲ್ಗಡಗ ಗಣನಾಯ್ಕ
ನಿಮಗೆ ಕುಶಲದ ಮೇಲ್ಕಟ್ಟು ಗಣನಾಯ್ಕ

ಮೂಷಕವಾಹನ ಗಣನಾಯ್ಕ
ನಮ್ಮ ಶಿವನಕುಮಾರನಯ್ಯ ಗಣನಾಯ್ಕ

ನಿನಗೆ ಹೆಂಡ್ರಿಲ್ಲ ಮಕ್ಕಳಿಲ್ಲ ಗಣನಾಯ್ಕ
ನೀ ಎದ್ದು ಬಾರಯ್ಯ ಸಿದ್ಧಿ ಗಣನಾಯ್ಕ

ಬಿಲ್ಪತ್ರೆ ವನದಲ್ಲಿ ಗಣನಾಯ್ಕ
ನಿನ್ನ ಧ್ಯಾನಮಾಡಿ ನೆನೆದೇವಯ್ಯ ಗಣನಾಯ್ಕ

ಕಂಟಕಹರ ನೀನು ಗಣನಾಯ್ಕ
ನಮಗೆ ವರವನು ಪಾಲಿಸಯ್ಯ ಗಣನಾಯ್ಕ

○

## ಸರಸ್ವತಿ

ಚಂದ್ರಗಾವಿಯನ್ನುಟ್ಟು ಮಲ್ಲಿಗೆ ಹೂ ಮುಡಿದು
ಅಂದಾಲದೊಳಗೆ ಪಗಡೇಯನಾಡುವ । ಸರಸೋತಿ
ತಾಯೇ ನಮ್ಮವ್ವ ಕೊಡು ಮತೀಯ

ಹಾದೀಯ ಮನೆಯೋಳೆ ಪಾದದುಂಗುರದೋಳೆ
ಗೋಧಿಯ ಸೀರೆ ನೆರಿಯೋಳೆ । ಸರಸೋತಿ
ಬೋಧಿಸಮ್ಮಯ್ಯ ಸವಿನುಡಿಯ

ಹಳ್ಳಕೊಳ್ಳಾದಲ್ಲಿ ಮುಳ್ಳಾಜಿ ವನದಲ್ಲಿ
ಒಳ್ಳೋಳೆ ನಿನ್ನ ಅರಸೀದೆ । ಸರಸೋತಿ
ಎಲ್ಲಿ ಹೋದಮ್ಮ ಕೊಡು ಮತಿಯ

ನಗ್ಗಾಲ ಮರದಡಿಯ ನಿದ್ರೇಯ ಮಾಡ್ಹೋಗಿ
ಎಗ್ಗಿಲ್ದೇ ಬಂದೆ ನಿನ ಬಳಿಗೆ । ಸರಸತಿಯೆ
ಚಂದೊಳ್ಳೆ ಹಾಡ ಕಲಿಸಮ್ಮ

ಎಂಟೆಲೆ ಮಾವಿನ ದಂಟಿನಲ್ಲಿರುವೋಳೆ
ಗಂಟೇಯ ಗತಿಗೆ ಕುಣಿಯೋಳೆ । ಶಾರದೆ
ಗಂಟಾಲ ತೊಡರ ಬಿಡಿಸವ್ವ

## ಸೀತೆ

ಜನಕರಾಯನ ಮಗಳು ಸೀತೆ ಋತವನಾದಳು
ಆ ಮಾತ ಕೇಳಿಬಂದ ರಘುರಾಮ ಲಕ್ಷ್ಮಣ


ಹೊಸ ಬಾಚಣಿಗೆ ಕೊಪ್ಪರಿಯಣ್ಣೆ ತಟ್ಟೆಲಿರಿಸಿರಿ
ಕೋಮಲಾಂಗಿ ಸೀತೆಗೀಗ ತಲೆಯ ಬಾಚಿರಿ

ಅರಿಸಿಣ ಕುಂಕುಮ ಮಲ್ಲಿಗೆ ಹೂವ ತಟ್ಟೆಲಿರಿಸಿರಿ
ಕೋಮಲಾಂಗಿ ಸೀತೆಗೀಗ ಹಣೆಗೆ ಧರಿಸಿರಿ

ಹಣ್ಣುಕಾಯಿ ಅರಿಸಿಣ ಕುಂಕುಮ ತಟ್ಟೆಲಿರಿಸಿರಿ
ಕೋಮಲಾಂಗಿ ಸೀತೆಗೀಗ ಹಣೆಗೆ ಧರಿಸಿರಿ

ಚಿಗಳಿ ತಂಬಿಟ್ಟು ಹಣ್ಣುಕಾಯಿ ತಟ್ಟೆಲಿಸಿರಿ
ಕೋಮಲಾಂಗಿ ಸೀತೆಗೀಗ ಮಡಿಲದುಂಬಿರಿ

ಜನಕರಾಯನ ಮಗಳು ಸೀತೆ ಋತವನಾದಳು
ಹದಿನಾಲ್ಕು ಲೋಕವನಾಳುವಂತ ಶ್ರೀರಾಮಚಂದ್ರಗೆ





## ಆರತಿ ಬೆಳಗಿರೆ

ಹಾಲು ಮಾರುತ ಬಂದ ಗೊಲ್ಲರ ಬಾಲೆಗೆ ಮರುಳಾದ
ಹಾಲೀನ ಕೊಡಗಳ ಎಲ್ಲೀಗೆ ತರುಲೆಂದು
ಕಣ್ಣ ಸನ್ನೆಯ ಮಾಡಿ ಕರೆದ ಕೃಷ್ಣಯ್ಯಗೆ
ಮಂಟುಮದಾರುತಿಯ ಬೆಳಗೀರೆ


ಮೊಸರು ಮಾರುತ ಬಂದ ಗೊಲ್ಲರ ನಿಸ್ತ್ರೀಗೆ ಮರುಳಾದ
ಮೊಸರಿನ ಕೊಡಗಳ ಎಲ್ಲೀಗೆ ತರುಲೆಂದು
ಕಣ್ಣು ಸನ್ನೆಯ ಮಾಡಿ ಕರೆದ ಕೃಷ್ಣಯ್ಯಗೆ
ಮೇಲಾದಾರುತಿಯ ಬೆಳಗೀರೆ

ಬೆಣ್ಣೆ ಮಾರುತ ಬಂದ ಗೊಲ್ಲ ನಲ್ಲೆಗೆ ಮರುಳಾದ
ಬೆಣ್ಣೆಯ ಕೊಡಗಳ ಎಲ್ಲೀಗೆ ತರುಲೆಂದು
ಕಾಲು ಸನ್ನೆಯ ಮಾಡಿ ಕರೆದ ಕೃಷ್ಣಯ್ಯಗೆ
ಮೇಲಾದಾರುತಿಯ ಬೆಳಗೀರೆ

ಮಜ್ಜಿಗೆ ಮಾರುತ ಬಂದ ಗೊಲ್ಲರ ಭದ್ರಿಗೆ ಮರುಳಾದ
ಮಜ್ಜೀಗೆ ಕೊಡಗಳ ಎಲ್ಲೀಗೆ ತರುಲೆಂದು
ಕೈಸನ್ನೆ ಮಾಡಿ ಕರೆದ ಕೃಷ್ಣಯ್ಯಗೆ
ಮಂಟುಮದಾರುತಿಯ ಬೆಳಗೀರೆ

ತುಪ್ಪ ಮಾರುತ ಬಂದ ಗೊಲ್ಲರ ನಿಸ್ತ್ರೆಗೆ ಮರುಳಾದ
ತುಪ್ಪಾದ ಕೊಡಗಳ ನಾನೆಲ್ಲಿಗೆ ತರುಲೆಂದು
ಕೈಯಿಸನ್ನೆ ಮಾಡಿ ಕರೆದ ಕೃಷ್ಣಯ್ಯಗೆ
ಮೇಲಾದಾರುತಿಯ ಬೆಳಗೀರೆ

೦





## ಮಳೀ ಹಾಡು

ಬಣ್ಣದ ಗುಬ್ಬ್ಯಾರು ಮಳಿರಾಜಾ । ಅವರು
ಮಣ್ಣಾಗಿ ಹೋದರು ಮಳಿರಾಜಾ
ಬಣ್ಣದ ಗುಬ್ಬ್ಯಾರು ಮಣ್ಣಾಗಿ ಹೋದರು
ಅನ್ಯದ ದಿನ ಬಂದು ಮಳಿರಾಜಾ

ಒಕ್ಕಲಗೇರ್ಯಾಗ ಮಳಿರಾಜಾ । ಅವರು
ಮಕ್ಕಳು ಮಾರ್‍ಯಾರ ಮಳಿರಾಜಾ
ಮಕ್ಕಳ. ಮಾರಿ ರೊಕ್ಕಾ ಹಿಡಕೊಂಡು
ಭತ್ತಂತ ತಿರುಗ್ಯಾರ ಮಳಿರಾಜಾ

ಸೊಲಗಿ ಹಿಟ್ಟಿನಾಗ ಮಳಿರಾಜಾ । ಅವರು
ಸುಣ್ಣನ್ನು ಕೂಡಿಸ್ಯಾರ ಮಳಿರಾಜಾ
ಹಸ್ತು ಬಂದಕೇರಿ ಗಪಗಪ ತಿಂದು
ಒದ್ದಾಡಿ ಸತ್ತಾರ ಮಳಿರಾಜಾ

ಗಿದ್ದನ ಅಕ್ಕ್ಯಾಗ ಮಳಿರಾಜಾ । ಅವರು
ಅಪುವನ್ನು ಕೂಡಿಸ್ಯಾರ ಮಳಿರಾಜಾ
ಸಣ್ಣ ಕೂಸಿಗಿ ಮನ್ನಿಸಿ ಉಣಿಸ್ಯಾರ
ಕಣ್ಣನ್ನೆ ಮುಚ್ಚ್ಯಾವ ಮಳಿರಾಜಾ

ಗಂಡುಳ್ಳ ಬಾಲ್ಯಾರು ಮಳಿರಾಜಾ । ಅವರು
ಭಿಕ್ಷಾಕ ಹೊರಟಾರ ಮಳಿರಾಜಾ
ಗಂಡುಳ್ಳ ಬಾಲ್ಯಾರು ಭಿಕ್ಷಾಕ ಹೋದಾರು
ಅನ್ನದ ದಿನ ಬಂದು ಮಳಿರಾಜಾ

ಸ್ವಾತೀಯ ಮಳಿ ಬಂದು ಮಳಿರಾಜಾ । ಸುತ್ತ
ದೇಶಾಕ ಆಗ್ಯಾದ ಮಳಿರಾಜಾ
ಹಳ್ಳಕೊಳ್ಳ ಹೆಣ ಹರಿದಾಡಿ ಹೋದವು
ಯಾವಾಗ ಬಂದೆಪ್ಪಾ ಮಳಿರಾಜಾ

○



ಭಾಗ್ಯದ ಬಳೆಸೆಟ್ಟಿ, ಹೋಗಿಬಾರಯ್ಯ ನನ್ನ ತವರೀಗೆ

## ಭಾಗ್ಯದ ಬಳೆಗಾರ

ಭಾಗ್ಯದ ಬಳೆಸೆಟ್ಟಿ ಹೋಗಿಬಾರಯ್ಯ ನನ್ನ ತವರೀಗೆ

ಇನ್ನೆಲ್ಲಿ ನೋಡಲಿಂಥ ಬಳೆಯ ಬಳೆಗಾರ ಸೆಟ್ಟಿ
ನಮ್ಮ ನಾಡಲ್ಲಿ ಬಳೆಯಿಲ್ಲ ಬಳೆಗಾರ
ಹೋಗಿ ಬಾರಯ್ಯ ನನ್ನ ತವರೀಗೆ

ನಿನ್ನ ತವರೂರ ನಾನೇನು ಬಲ್ಲೇನು
ಗೊತ್ತಿಲ್ಲ ನನಗೆ ಗುರಿಯಿಲ್ಲ । ಎಲೆಬಾಲೆ
ತೋರೀಸು ನಿನ್ನ ತವರೂರ

ಬಾಳೆ ಬಲಕೆ ಬಿಡು ಸೀಗೆ ಎಡಕೆ ಬಿಡು
ನಟ್ಟನಡುವೆ ಹೊರಟ್ಹೋಗು । ಬಳೆಗಾರ
ಅಲ್ಲಿರುವುದು ನನ್ನ ತವರೂರು

ಹಂಚೀನ ಮನೆ ಕಾಣೊ ಕಂಚೀನ ಕದ ಕಾಣೊ
ನಿಂತಾಡುವೆರೆಡು ಗಿಣಿಕಾಣೊ । ಬಳೆಗಾರ
ಅದೆ ಕಾಣೊ ನನ್ನ ತವರೂರು

ಮುತ್ತೈದೆ ಹಟ್ಟೀಲಿ ಮುತ್ತಿನ ಚಪ್ಪರ ಹೂಡಿ
ನಟ್ಟ ನಡುವೆ ಪಗಡೇಯ । ನಾಡುವಳು
ಅವಳೆ ಕಾಣೋ ನನ್ನ ಹಡೆದವ್ವ

ಅಚ್ಚ ಕೆಂಪೂ ಬಳೆ ಕರಿಯ ಪಟ್ಟೇ ಬಳೆ
ನನ್ನ ಹಡೆದವ್ವಗೆ ಬಲು ಆಸೆ । ಬಳೆಗಾರ
ಕೊಂಡೊಯ್ಯೋ ನನ್ನ ತವರೀಗೆ



## ಹೋಗಿ ನನ್ನ ತವರೀಗೆ

ಜೋಗಿ ಜಂಗಮರೆ ಹೋಗಿ ನನ್ನ ತೌರೀಗೆ
ಸಣ್ಣಕ್ಕಿ ದಾನ ಕೊಡುತಾರೆ । ಅಣ್ಣಯ್ಯ
ಹೊನ್ನಿನ ದಾನ ಕೊಡುತಾರೆ

ನೀರುಳ್ಳಿ ದಾನ ನೀರು ಮಜ್ಜಿಗೆ ದಾನ
ಮತ್ತೆ ಅಂಬಲಿ ದಾನ ಕೊಡುತಾರೆ । ಅಣ್ಣಯ್ಯ
ಅಂಬುಲದ ಮುದ್ದೆ ಕೊಡುತಾರೆ

ಅತ್ತಿಗೆ ಬಸುರಿ ಮನೆ ಮುಂದೆ ಚಪ್ಪಾರ
ಅನ್ನ ಛತ್ರವ ಇಡಿಸೀದೆ । ಅಣ್ಣಯ್ಯ
ಮನೆ ಮುಂದೆ ಇಡಿಸೀದೆ ಅರವಂಟಿಗೆ

○



## ಕಿನ್ನೂರಿ ನುಡಿಸೋನು

ಕಿನ್ನೂರಿ ನುಡಿಸೋನ ದನಿ ಚಂದವೋ
ಕಿನ್ನೂರಿ ನುಡಿಸೋನ ಬೆರಳಿನಂದಾ ಚಂದವೋ

ಬೆಳ್ಳಿಉಂಗ್ರಕ್ಕೆ ನಾರಿ ಮನಸೋತಳೋ
ಎಲ್ಲೋ ಜೋಗಪ್ಪ ನಿನ್ನ ಅರಮನೆ
ಎಲ್ಲೋ ಜೋಗಪ್ಪ ನಿನ್ನ ತಳಮನೆ

ಬೆಟ್ಟ ಹತ್ತೋಗಬೇಕು ಬೆಟ್ಟ ಇಳಿದ್ಹೋಗಬೇಕು
ಅಲ್ಲಾದೆ ಕಣೆ ನನ್ನ ಅರಮನೆ । ನಾರಿ
ಅಲ್ಲಾದೆ ಕಣೆ ನನ್ನ ತಳಮನೆ

ಹಾರ್‍ವಾರ ಕೇರಿಯ ಗಾರೆ ಪಡಸಾಲೆ ಮೇಲೆ
ಲೋಲು ಕಿನ್ನರಿಯಾ ನುಡಿಸೋನೆ । ಜೋಗಿ
ಮೊಗ್ಗಾಗಿ ಬಾರೊ ತುರುಬೀಗೆ


ಎಳ್ಳೀನ ಹೊಲವ ಬಿಟ್ಟೆ ಒಳ್ಳೇ ಗಂಡನ ಬಿಟ್ಟೆ
ಕಳ್ಳಾಟದ ಜೋಗಿ ಕೂಡೆ ಹೋಗಬಹುದೆ । ನಾರಿ
ಸುಳ್ಳಾಟದ ಜೋಗಿ ಕೂಡೆ ಹೋಗಬಹುದೆ ?

ನಿನ್ನ ಕಂಡಾಗಲೆನ್ನ ಕಣ್ಣುರಿ ಕಾಣೊ ಜೋಗಿ
ನಿನ್ನಲ್ಲಿ ನನಗೆ ಮನಸಾದೆ । ಜೋಗಿ
ನಿನ್ನಲ್ಲಿ ನನಗೆ ಮನಸಾದೆ

ಎಲ್ಲಾನು ಬಿಟ್ಟಮ್ಯಾಲೆ ನನ್ನನ್ಯಾಕೆ ಬಿಡುವೊಲ್ಲೆ
ನಿನ್ನಲ್ಲಿ ನನಗೆ ಮನಸಾದೆ । ನಾರಿ
ನಿನ್ನಲ್ಲಿ ನನಗೆ ಮನಸಾದೆ

ನನ್ನ ತೋಳಲ್ಲಿ ನಿನ್ನ ಕಿನ್ನುರಿ ಮಾಡಿಕೊಂಡು
ಚಂದದ ಪದವ ನುಡಿಸೇನು । ನಾರಿ
ನಿನ್ನಲ್ಲಿ ನನಗೆ ಮನಸಾದೆ

○



## ಚೆಲ್ಲಿದರು ಮಲ್ಲಿಗೆಯಾ

ಚೆಲ್ಲಿದರು ಮಲ್ಲಿಗೆಯಾ ಬಾಣಾಸೂರೇರಿ ಮ್ಯಾಲೆ
ಅಂದಾದ ಚೆಂದಾದ ಮಾಯಕಾರ । ಮಾದೇವ್ಗೆ
ಚೆಲ್ಲಿದರೂ ಮಲ್ಲಿಗೆಯಾ

ಏಳು ಮಲೆಯಲ್ಲಿ ಏನಯ್ಯ ಕೆಂದೂಳು ?
ನವಿಲಾಡಿ ನವುಲ ಮರಿಆಡಿ । ಮಾದೇವ್ಗೆ
ಚೆಲ್ಲಿದರು ಮಲ್ಲಿಗೆಯಾ

ಮಲ್ಲಿಗೆ ಹೂವಿನ ಮಂಚ ಮರುಗಾದ ಮೇಲ್ಹೊದುಕೆ
ತಾವರೆ ಹೂವ ತಲೆದಿಂಬು । ಮಾದೇವ್ಗೆ
ಅಲ್ಲೊಂದು ಗಳಿಗೆ ಸುಖನಿದ್ದೆ



ನಾನ್ಯಾರಿಗಲ್ಲಾದವಳು । ಬಿದಿರೂ

ನಾನ್ಯಾರಿಗಲ್ಲದವಳು ?

## ಬಿದಿರು

ನಾನ್ಯಾರಿಗಲ್ಲಾದವಳು ನಾನ್ಯಾರಿಗಲ್ಲಾದವಳು
ನಾನ್ಯಾರಿಗಲ್ಲಾದವಳು । ಬಿದಿರೂ
ನಾನ್ಯಾರಿಗಲ್ಲದವಳು ?


ಹುಟ್ಟೂತ ಹುಲ್ಲಾದೆ ಬೆಳೆಯೂತ ಬಿದುರಾದೆ
ಚಿಕ್ಕಾನು ಜಂಗಮ್ಮಯ್ಯಗೆ । ಬಿದಿರೂ
ಭಿಕ್ಷಾಕೆ ಬೆತ್ತವಾದೆ ।

ಅಪ್ಪಾಗೆ ಬುಟ್ಟಿಯಾದೆ ಅಮ್ಮಾಗೆ ಪಡ್ಲಿಗಾದೆ
ಚೆಂದುಳ್ಳ ನಾರಿಯರಿಗೆ । ಬಿದಿರೂ
ಕೇರೂವ ಮೊರನಾದೆ.

ಹಣ್ಣೀಗೆ ಬುಟ್ಟಿಯಾದೆ ಎಣ್ಣೀಗ ಲಳಿಗಾದೆ
ಕಣ್ಣು ಮೂರುಳ್ಳ ಶಿವಗೆ । ಬಿದಿರೂ
ಪಾಲಿಕೆ ಕೊಂಬಾದೆ.

ಗುಡ್ಡದಲ್ಲಿ ಹುಟ್ಟೂತಿನಿ ಗುಡ್ಡದಲ್ಲಿ ಬೆಳೆಯೂತಿನಿ
ಗಡ್ಡ ಬಂದ ಮುದುಕಾರಿಗೆ । ಬಿದಿರೂ
ಊರುವ ಕೋಲಾದೆ.

○



## ಬಾಡಬ್ಯಾಡ ಮಲ್ಲಿಗೆ

ಮಲ್ಲಿಗೇ ಮಲ್ಲಿಗೇ ಬಾಡಬ್ಯಾಡ ಮಲ್ಲಿಗೆ
ಬಾಡಬ್ಯಾಡ ಮಲ್ಲಿಗೇ ಬತ್ತಬ್ಯಾಡ ಮಲ್ಲಿಗೆ
ಬಾಡಿದರೆ ಶಿವುನ ಪಾದುದಾಣೆ ಮಲ್ಲಿಗೆ

ಮಾಳಿಗೆ ಮ್ಯಾಗಳ ಮಲ್ಲಿಗೇ ಚೆಲ್ಲುಬ್ಯಾಡ ಮಲ್ಲಿಗೆ
ಚೆಲ್ಲಿದರೆ ಶಿವುನ ಪಾದುದಾಣೆ ಮಲ್ಲಿಗೆ

ಅಂಗಳದಾಗಳ ಮಲ್ಲಿಗೇ ಚೆಲ್ಲುಬ್ಯಾಡ ಮಲ್ಲಿಗೆ
ಚೆಲ್ಲಿದರೆ ಶಿವುನ ಪಾದುದಾಣೆ ಮಲ್ಲಿಗೆ

ಕಾಸಿದಡ್ಡಗಳ ಮಲ್ಲಿಗೇ ಬಾಡಬ್ಯಾಡ ಮಲ್ಲಿಗೆ
ಬಾಡಿದರೆ ಶಿವುನ ಪಾದದಾಣೆ ಮಲ್ಲಿಗೆ

ಮಲ್ಲಿಗೇ ಮಲ್ಲಿಗೇ ಬಾಡಬ್ಯಾಡ ಮಲ್ಲಿಗೆ
ಬಾಡಬ್ಯಾಡ ಮಲ್ಲಿಗೆ ಬತ್ತುಬ್ಯಾಡ ಮಲ್ಲಿಗೆ

○



## ಸಣ್ಣಮಲ್ಲಿಗೆ ಉದುರಲಯ್ಯ




ಸೆರಗಬಿಡೊ ಸೆರಗಬಿಡೊ ಚಂದಮಾಮ
ನಿನ್ನ ಬೆಡಗಿನ ಮಾತಿಗ್ವಾಲೆ ಬಿಡುವೆ ಚಂದಮಾಮ

ಗಂಡ ಬತ್ತಾನಂದು ನಾನು ಚಂದಮಾಮ
ಗುಂಡನ್ನತ್ತಿ ನೋಡುತ್ತಿದ್ದೆ ಚಂದಮಾಮ
ಗುಂಡು ಜಾರಿ ರೊಂಡಿ ಮುರ್‍ದ್ಲೊ ಚಂದಮಾಮ
ನಾನು ಗಂಡನ ಮನೆಗೆ ಬರಲಿಲ್ಲ ಚಂದಮಾಮ

ಮಾವ ಬತ್ತಾನಂದು ನಾನು ಚಂದಮಾಮ
ಮಾಳ್ಗೆನ್ನತ್ತಿ ನೋಡುತ್ತಿದ್ದೆ ಚಂದಮಾಮ
ಮಾಳ್ಗೆ ಜಾರಿ ತೋಳು ಮುರ್‍ದ್ಲೋ ಚಂದಮಾಮ
ನಾನು ಮಾವ್ನ ಮನೆಗೆ ಬರಲಿಲ್ಲ ಚಂದಮಾಮ

ಮಾವ ಬರುವ ದಾರಿಯಲ್ಲಿ ಚಂದಮಾಮ
ಸ್ಯಾವಂತ್ಗೆ ಬೆಳೆಯಲಯ್ಯ ಚಂದಮಾಮ
ಗಂಡ ಬರುವ ದಾರಿಯಲ್ಲಿ ಚಂದಮಾಮ
ಗಂಡುಗಾರೆ ಬೆಳೆಯಲ್ಲಯ್ಯ ಚಂದಮಾಮ
ಮಿಂಡ ಬರುವ ದಾರಿಯಲ್ಲಿ ಚಂದಮಾಮ
ಸಣ್ಣಮಲ್ಲಿಗೆ ಉದುರಲಯ್ಯ ಚಂದಮಾಮ



## ರಾಗಾವ ಪಾಡಿತು ನವ್ವಾಲೆ

ನವ್ವಾಲೆ ಬಂತಪ್ಪ ನವ್ವಾಲೇ
ಸೋಗೇಯ ಬಣ್ಣದ ನವ್ವಾಲೇ

ಬತ್ತವ ಮೇಯೋದು ನವ್ವಾಲೆ
ಬತ್ತದ್ ಹೊಟ್ಕೊಂದು ಮೇಯೋದು ನವ್ವಾಲೆ
ಬತ್ತವ ಕಾಯೋರು ಓಡಿಸ ಬಂದರೆ
ಅತ್ತಿತ್ತ ಓಡಿತು ನವ್ವಾಲೆ

ರಾಗಿಯ ಮೇಯೋದು ನವ್ವಾಲೆ
ರಾಗೀ ಹೊಟ್ಕೊಂದು ಮೇಯೋದು ನವ್ವಾಲೆ
ರಾಗೀಯ ಕಾಯೋರು ಓಡಿಸ ಬಂದರೆ
ರಾಗಾವ ಪಾಡಿತು ನವ್ವಾಲೇ

ಸರಸೋತಿ ಏರೋದು ನವ್ವಾಲೇ ಅದು
ಸಾಸಿರ ಕಣ್ಣಿನ ನವ್ವಾಲೇ
ಸರಸೋತಿ ಏರಿಕೊಂಡು ನಲಿದಾಡಿ ಬರುವಾಗ
ಜಾಗರವಾಡಿತು ನವ್ವಾಲೇ

○



## ಕೋಗಿಲೆ

ಕೋಗಿಲೇ ಕೋಗಿಲೇ ಕೋಗಿಲೆ ಮರಿ ಕೋಗಿಲೇ
ಕೋಗಿಲೇ ಕೋಗಿಲಕ್ಕಾ ಕೊಂಬೇಲಿ ಮೊಟ್ಟೇನಿಕ್ಕಿ
ಹೊಂಬಾಳೆಯೊಳಗೆ ಮರಿಮಾಡಿ ಕೋಗಿಲೇ
ಮುಂಗಾರ ಹೊತ್ತಿಗೆ ಧ್ವನಿದೋರು ಕೋಗಿಲೇ

ಓದುವ ಮಠಕ್ಕೆ ಹಾಕಬೇಕು ಕೋಗಿಲೇ
ಓದು ಬರಹವನ್ನು ಕಲಿಯಬೇಕು ಕೋಗಿಲೇ
ಓದೊಂದ್ಹಲಗೆ ಬಲಗೈಲಿ ಹಿಡಕೊಂಡು
ಬರದೋದೆ ಶಿವನ ಪರನಾಮ ಕೋಗಿಲೆ

ಕಂಚೀನ ಬಟ್ಟಲಿಗೆ ಮಿಂಚೆಣ್ಣೆ ಬಿಟ್ಟುಕೊಂಡು
ನಲ್ಲ ನಂಜುಂಡನ ವನದಲ್ಲಿ ಕೋಗಿಲೇ
ಬೆಳ್ಳೀಯ ಬಟ್ಟಲಿಗೆ ಒಳ್ಳೆಣ್ಣೆ ಬಿಟ್ಟುಕೊಂಡು
ನಲ್ಲ ನಂಜುಂಡನ ವನದಲ್ಲಿ ಕೋಗಿಲೇ



## ಮಳೆರಾಯ

ಕೋಲು ಮಲ್ಲಿಗೆ ಕೋಲೆ । ಕೋಲು ಸಂಪಿಗೆ ಕೋಲೆ

ಮಳೆ ಹೋಯ್ತು ಅಂತ ಮಳೆರಾಯ್ನ ಬಯ್ಯದಿರೆ
ನೂರ್‍ಹೆಡೆಯ ಸರುಪನ ಮ್ಯಾಲೆ । ಹತ್ತಿಕೊಂಡು
ಸಾಲಕ್ಹೋಗವನೆ ಮಳೆರಾಯ

ಕರೆದಾರೆ ಬರನಲ್ಲೆ ಕೈಸನ್ನೆ ಮಳೆರಾಯ
ತಂಗ್ಯಮ್ಮ ನೀನ್ಹೋಗಿ ಕರೆತಾರೆ । ಬಾಳೆಯ
ಗೊನೆಯ ಮೇಲವನೆ ಮಳೆರಾಯ

ಎಮ್ಮೇಯ ತೋರಕೆ ಕೆಮ್ಮುಗಿಲು ಎದ್ದಾವೆ
ದಮ್ಮಯ್ಯ ಹುಯ್ಯೋ ಮಳೆರಾಯ । ನಮ್ಮೂರ
ಮುಮ್ಮಾಳಿಗೇಲಿ ತಳುಗಯ್ಯ

ಅಂಬಾರದಲ್ಲಿ ತುಂಬ್ಯಾಡೊ ಮಳೆರಾಯ
ಗೊಂಬೆ ಹಚ್ಚಡದ ದೊರೆಮಗನೆ । ನೀನಿಲ್ಲದೆ
ರಂಬೆ ಹಾಕಿದ ಪೈರು ಒಣಗ್ಹೋದೊ

ಗುಡುಗುಡು ಗುಡುಗೀದ ಗುಬ್ಬೀಲಿ ಮಿಂಚೀದ
ಹೆಬ್ಬೂರಿನ ಮ್ಯಾಲೆ ಮಳೆ ಬಿದ್ದೊ । ನಂಜನಗೂಡ
ಹೆದ್ದೇರಿನ ಮೇಲೆ ಹನಿ ಬಿದ್ದೊ

ಮೂಡಲಾಗಿ ಹುಯ್ಯೋದು ಮುತ್ತಿನ ಸ್ವಾತೀ ಮಳೆ
ಕಗ್ಗಲ್ಲ ನನ್ನ ತವರೀಗೆ । ಹೋಗಯ್ಯ
ಜಗ್ಗೀಸಿ ಹುಯ್ಯೋ ಮಳೆರಾಯ

ಮಳೆರಾಯ ಹುಯ್ಯಾಲಿ ಕೆರೆರಾಯ ತುಂಬಾಲಿ
ಹನ್ನೆರಡು ಕೋಡಿ ಹರಿಯಾಲಿ । ನಮ್ಮೂರ
ಸಣ್ಣಕ್ಕಿ ಬೈಲು ಬೆಳೆಯಾಲಿ

○



## ಜವರಾಯ

ಜವರಾಯ ಬಂದಾರೆ ಬರಿಕೈಲಿ ಬರಲಿಲ್ಲ
ಕುಡುಗೋಲು ಕೊಡಲ್ಯೊಂದು ಹೆಗಲೇರಿ
ಒಳ್ಳೊಳ್ಳೆ ಮರನ ಕಡಿಬಂದ
ಫಲಬಿಟ್ಟ ಮರನ ಕಡಿಬಂದ

ಎಂದೂ ಬಾರದ ಜವರಾಯ ಇಂದೇಕೆ ಬಂದೀರಿ ?
ಕೊಳ್ಳಯ್ಯ ನೀರ ಕುಡಿ ನೀರ
ಕುಡಿಯೋಕೆ ಬಂದಿಲ್ಲ ಕೂರೋಕೆ ಬಂದಿಲ್ಲ
ಗಂಡಾನ ಮಡದಿ ನಡಿ ಮುಂದೆ

ಮನೆ ಮುಂದೆ ಚಪ್ಪರ ಹಬ್ಬಾದ ಸಡಗರ
ಬಿಟ್ಟೆಂಗೆ ಬರಲೋ ಜವರಾಯ
ಹಬ್ಬ ಮಾಡುವಂತ ಪುರಚಲುವೆ ಬರುತಾಳೆ
ಗಂಡಾನ ಮಡದಿ ನಡಿ ಮುಂದೆ

ಮಳಿಮಳಿಗೆ ಹಚ್ಚಾಡಾ ಮಳಿಗೆ ಮುಂಡಾಸಿನ
ಗಂಡಾನ ಬಿಟ್ಟು ಹೇಗೆ ಬರಲೋ ?
ಗಂಡಾಗೆ ತಕ್ಕಂಥ ದುಂಡೀರು ಬರುತಾರೆ
ಗಂಡಾನ ಮಡದಿ ನಡಿ ಮುಂದೆ

ಹಾಲೂ ಬಾನಾ ಉಂಡು ತೋಳಮೇಲಾಡುವ
ಬಾಲನ ಬಿಟ್ಟು ಹೇಗೆ ಬರಲೋ ?
ಬಾಲಾಗೆ ತಕ್ಕಂಥ ಬಾಲೇರು ಬರುತಾರೆ
ಬಾಲಾನ ತಾಯಿ ನಡಿ ಮುಂದೆ

ಕಾಳು ಕಡ್ಡಿ ಮಾರಿ ಕಟ್ಟಾಣಿ ಮಾಡಿಸಿದ್ದೆ
ಕಟ್ಟಾಣೆಂದರಘಳಿಗೆ ಇಡಲಿಲ್ಲವೊ । ಜವರಾಯ
ಬಿಟ್ಹೋಡಿ ಹೋಗೋ ಸಡಗರವೆ ?



ಬಾರಮ್ಮ ಕೊರವಂಜಿ ಬಾರೆ ನಮ್ಮನೆಗೆ

## ಕೊರವಂಜಿ

ಬೀದಿಬೀದಿಯ ಮೇಲೆ ಹೊರಟಾಳು ಕೊರವಂಜಿ
ಕೇರಿಕೇರಿಯ ಮೇಲೆ ಹೊರಟಾಳೊ
ಕಣಿಯೋ ಕಣಿಯೋ ಎಂದು ಸಾರ್‍ಯಾಳು
ಬಾರಮ್ಮ ಕೊರವಂಜಿ ಬಾರೆ ನಮ್ಮನೆಗೆ

ಕಾಸು ಕೊಟ್ಟೇವು ನಾವು ಕಣಿ ಹೇಳೆ ಕೊರವಿ
ಕಾಸು ನಮ್ಮನೆಯ ಮುತ್ತಿನ ರಾಶಿ । ಕಾಣು
ಒಂಟೆ ಕೊಟ್ಟೇವು ನಾವು ಕಣಿ ಹೇಳೆ ಕೊರವಿ
ಒಂಟೆ ನಮ್ಮನೆಯ ಕುಂಟೆಮ್ಮೆ ಹಿಂಡು । ಕಾಣು

ಆನೆ ಕೊಟ್ಟೇವು ನಾವು ಕಣಿ ಹೇಳೆ ಕೊರವಿ
ಆನೆ ನಮ್ಮನೆಯ ಆಡಿನ ಹಿಂಡು । ಕಾಣು
ಇನ್ನೇನು ಬೇಕಮ್ಮ ಬಿನ್ನಾಣಿ ಕೊರವಿ
ಮತ್ತೇನು ಬೇಕಮ್ಮ ಮಾಯಾವಿ ಕೊರವಿ

ತೆಂಗಿನ ದೇಶಕ್ಕೆ ಹೋಗಿದ್ದೆ ಮಗಳೆ
ತೆಂಗಿನ ಮರದಡಿ ಮಲಗಿದ್ದೆ ಮಗಳೆ
ಆ ತೆಂಕಣ ಗಾಳಿಯು ಬೀಸ್ಯಾವೆ ಮಗಳೆ
ತರತರದ ಕಣಿಯನ್ನು ಪೇಳುವೆನು

ಬಡಗಾರ ಸೀಮೆಗೆ ಹೋಗಿದ್ದೆ ಮಗಳೆ
ಬಾಳೇಯ ಮರದಡಿ ಮಲಗಿದ್ದೆ ಮಗಳೆ
ಆ ಬ್ಯಾಡರ ಗಾಳಿಯು ಬೀಸ್ಯಾದೆ ಮಗಳೆ
ತರತರದ ಕಣಿಯ ಪೇಳುವೆನು

○



ಮಲ್ಲಿಗೆ ಹೂವ ಸುತ್ತುತ ಮಲ್ಲಿಗೆ ಎಣ್ಣೆ ಅಜ್ಜುತ
ಬೀಸಿ ಬೀಸಿ ಎಸೆಯುತ ಚೆಂಡನಾಡಿರೇ

## ಚೆಂಡನಾಡೋಣ ಬನ್ನಿರೇ

ಮಲ್ಲಿಗೆ ಹೂವ ಸುತ್ತುತ ಮಲ್ಲಿಗೆ ಎಣ್ಣೆ ಅಜ್ಜುತ
ಬೀಸಿ ಬೀಸಿ ಎಸೆಯುತ ಚೆಂಡನಾಡಿರೇ - ಸಖಿ
ರಾಜಾರುಕ್ಮಿಣಿ ಸೀತಾದೇವಿಗೆ ಚೆಂಡನಾಡಿರೇ

ಸಂಪಿಗೆ ಹೂವ ಸುತ್ತುತ ಸಂಪಿಗೆ ಎಣ್ಣೆ ಅಜ್ಜುತ
ಬೀಸಿ ಬೀಸಿ ಎಸೆಯುತ ಚೆಂಡನಾಡಿರೇ - ಸಖಿ
ರಾಜಾರುಕ್ಮಿಣಿ ಸೀತಾದೇವಿಗೆ ಚೆಂಡನಾಡಿರೇ

ಜಾಜಿಯ ವನದಲ್ಲಿ ಜಾಣೆಯರೆಲ್ಲರೂ ಸೇರಿ
ಜಾಜಿಯ ಹೂವಲ್ಲಿ ಚೆಂಡನ್ನು ಕಟ್ಟಿರೇ - ಸಖಿ
ಚೆಂಡನಾಡೋಣ ಬನ್ನಿರೇ

ಸಂಪೀಗೇ ವನದಲ್ಲಿ ಕೆಂಪೀರು ಎಲ್ಲಾ ಸೇರಿ
ಸಂಪೀಗೆ ಹೂವಲ್ಲಿ ಚೆಂಡ ಕಟ್ಟಿರೇ - ಸಖಿ
ಚೆಂಡನಾಡೋಣ ಬನ್ನೀರೇ

ಬಾಳೆಯ ವನದಲ್ಲಿ ಬಾಲೆಯರೆಲ್ಲರು ಸೇರಿ
ಬಾಳೆಯ ಹೂವಲ್ಲಿ ಚೆಂಡ ಕಟ್ಟಿರೇ - ಸಖಿ
ಚೆಂಡನಾಡೋಣ ಬನ್ನೀರೇ

○



ತನುವಿನೊಳಗೆ ಅನುದಿನವಿದ್ದು
ನನ್ನ ಮನಕೊಂದು ಮಾತ ಹೇಳದೆ ಹೋದೆ ಹಂಸೇ?

## ತನುವಿನೊಳಗೆ ಅನುದಿನವಿದ್ದು

ತನುವಿನೊಳಗೆ ಅನುದಿನವಿದ್ದು
ನನ್ನ ಮನಕೊಂದು ಮಾತ ಹೇಳದೆ ಹೋದೆ ಹಂಸೇ ?

ಹಳ್ಳ ಕೊಳ್ಳದ ಮಧ್ಯೆ ತಂಪೀನ ಬಳ್ಳಿ ಹುಟ್ಟಿ
ಬಳ್ಳೀಯ ಹಣ್ಣು ನೆಲಕುದುರಿ । ಹೋಗುವಾಗ
ತನ್ನ ಬಳ್ಳಿಗೊಂದು ಮಾತ ಹೇಳದೆ ಹೋದೆ ಹಂಸೇ ?

ಕಾಯದ ಕೊಂಬೆ ಮೇಲೆ ಮಾಯಾದ ಗಿಳಿ ಕುಳಿತು
ಕಾಯವ ಬಿಟ್ಟು ಗಿಳಿ ಹಾರಿ । ಹೋಗುವಾಗ
ತನ್ನ ಕಾಯಕೊಂದು ಮಾತ ಹೇಳದೆ ಹೋದೆ ಹಂಸೇ ?

ಗಾಳಿ ಪಂಜರದಂತೆ ಮಾಳಿಗೆಯ ಮನೆ ಮಾಡಿ
ಗಾಳಿಯು ಬೀಸಿ ಎಲೆ ತೂರಿ । ಹೋಗುವಾಗ
ತನ್ನ ತಾಳಿಗೊಂದು ಮಾತ ಹೇಳದೆ ಹೋದೆ ಹಂಸೇ ?

ಕಾರೆಂಬ ಕತ್ತಲಲಿ ಬೋರೆಂಬೊ ಮಳೆ ಸುರಿದು
ಕೆರೆ ಕಟ್ಟೆ ಬಯಲಾಗಿ ಹೋಗುವ ಕಾಲಕ್ಕೆ
ತನ್ನ ಬಯಲಿಗೊಂದು ಮಾತ ಹೇಳದೆ ಹೋದೆ ಹಂಸೇ ?

ಅಡ್ಡ ಗೊಂಡಾರಣ್ಯ ಇಟ್ಟೆಡೆ ಮೆಳೆಯೊಳಗೆ
ಜೇನುತುಪ್ಪವ ಸವಿದುಂಡು । ಹುಳು ಹಾರಿ ಹೋಗುವಾಗ
ತನ್ನ ಹಿಪ್ಪೆಗೊಂದು ಮಾತ ಹೇಳದೆ ಹೋದೆ ಹಂಸೇ ?


○



## ಅಚ್ಚಚ್ಚ ಬೆಳದಿಂಗಳೇ

ಅಚ್ಚಚ್ಚ ಬೆಳದಿಂಗಳೇ । ನಮ್ಮೂರ ಹಾಲಿನಂಥ ಬೆಳದಿಂಗಳೇ

ತಿಂಗ್ಳು ತಿಂಗ್ಳೀಗೆ ತಿಂಗಳುಮಾವನ ಪೂಜೆ
ಗರುಡಾನ ಪೂಜೆ ಘನಪೂಜೆ । ತಿಂಗಳುಮಾವ
ನಿನ ಪೂಜೆ ನಮಗೆ ಅನುಗಾಲ



ಸುಕ್ರ ಸೂಲ್ದಿಗ ಒತ್ತೀಲಿ ಬೆಳ್ಳಿದೇವ
ನಾಲೋರಿಗಿಂತ ಹಿರಿಯೋನು । ತಿಂಗಳುಮಾವ
ನಾರೀರ ಕುರುಹ ಅರಿಯಾನು

ಹತ್ತಿ ಕಡೀಲಿಲ್ಲ ಅಗೆದು ನಿಲ್ಸಾಲಿಲ್ಲ
ನಡು ರಾಜ್ಯದಲ್ಲಿರುವ್ನೋನೆ । ತಿಂಗಳುಮಾವನ
ಹಡೆದಮ್ಮನ್ಯಾರೆ ಧರಿಯೊಳಗೆ ?

ತಿಂಗಳುಮಾವಾಗೆ ತಂಗೇರೇಳು ಮಂದಿ
ತಿಂಗು ತಿಂಗಳಿಗೆ ತವರೀಗೆ । ಹೋಯ್ತೀನೆಂದು
ತಿಂಗಾಳ ಬೆಳಕೆ ಹಗಲಾದೊ

ಆರಾಳುದ್ದ ವಾರೇಲಿ ಸೇದೋ ನೀರಿನ ಬಾವೀ
ವಾರೇಯ ಕಲ್ಲ ಮರಿಮಾಡಿ । ತಿಂಗಳುಮಾವ
ಹೊತ್ತಿನ ಪೂಜೆಗೆ ನಡೆದಾನೆ



ರನ್ನಾದಿ ದೀಪಾಳಿಗೋ
ಚಿನ್ನಾದಿ ದೀಪಾಳಿಗೋ ।

## ದೀಪಾಳೆನ್ನಿರೋ ದೀಪಾಳೆನ್ನಿರೋ

ದೀಪಾಳೆನ್ನಿರೋ ದೀಪಾಳೆನ್ನಿರೋ
ರನ್ನಾದಿ ದೀಪಾಳಿಗೋ
ಚಿನ್ನಾದಿ ದೀಪಾಳಿಗೋ ।


ದೀಪಾಳೆನ್ನಿರೋ ಕಾಲು ದೀಪಾಳಿಗೋ
ಕೋಲು ದೀಪಾಳಿಗೆ ।
ವರುಷಕೊಮ್ಮೆ ಬರುವೋದು
ಹರುಷ ದೀಪಾಳಿಗೆ ।
ಬಿರುಸು ದೀಪಾಳಿಗೋ । ದೀಪಾಳೆನ್ನಿರೋ.....

ಕಂಚೀಯ ಗಿಡನೆಟ್ಟು
ಕನ್ಯೆ ನೀರಿಗೆ ಹೋಗ್ಯಾರೇ
ಕನ್ಯೆ ನೀರು ತರೋತಂಕ
ಕಂಚಿನ ಫಲ ಬಂದೋ

ಹಣ್ಣೆಲ್ಲೋ ತಿಂಬೋಕೆ
ಹೆಣ್ಣೆಲ್ಲೋ ಗೆಲುವೋಕೆ । ದೀಪಾಳೆನ್ನಿರೋ.......

ಹಟ್ಟೀನಾ ರಸವೀಗೆ
ತೊಟ್ಟಿಲಾ ಪುತ್ರಾಗೆ
ತೊಳಸಿ ಮಹಾಲಕ್ಷ್ಮೀಗೆ
ದೀಪಾಳೆನ್ನಿರೋ ದೀಪಾಳೆನ್ನಿರೋ
ರನ್ನಾದಿ ದೀಪಾಳಿಗೋ
ಚಿನ್ನಾದಿ ದೀಪಾಳಿಗೋ

○



## ನಂಜುಂಡನ ತೇರು


ತಿಂಗಾನೆ ತಿಂಗಳಿಗೆ ಚಂದ ನಂಜನಗೂಡು
ಗಂಧ ತುಂಬೀದೆ ಗುಡಿಗೆಲ್ಲ । ನಂಜುಂಡನ
ಕಳಸ ತುಂಬೀದೆ ಹಿಡಿ ಹೊನ್ನು

ಎಪ್ಪತ್ತು ಗಾವುದಕೆ ನೆಪ್ಪು ನಂಜನಗೂಡು
ಹಿಪ್ಪೇಯ ತೋಪು ಹೊಳೆಸಾಲು । ಒಳ್ಳೇದೆಂದು
ಅಪ್ಪ ನಂಜುಂಡ ನೆಲೆಗೊಂಡ

ನಂಜಾನಗೂಡಲ್ಲಿ ನಮಗ್ಯಾರು ನಂಟಾರು ?
ನಂಜಪ್ಪ ಸ್ವಾಮಿ ಹಿರಿಯಣ್ಣ । ಇದ್ದಾಗ
ಮುಂದ್ಹೋಗಿ ಹೊರಜೆ ಹಿಡಿದೇವು

ಎಡದಾಲಯ್ಯನ ತೇರು ಬಲದಾಲಮ್ಮನ ತೇರು
ರಾಟಾಳೆ ತೇರು ಕೈತೇರು । ಗೊಂಬೇ ತೇರು
ಹರಿದೋ ನಂಜಯ್ಯ ಎಡಬಲಕೆ

ನಂಜಾನಗೂಡಲ್ಲಿ ನಾಲ್ಕೈದು ಬಾಗೀಲು
ನಂದಿ ಕೋಲೈದು ಪಟವೈದು । ನಂಜಪ್ಪನ
ಮಂಗಳಾರುತಿ ಹದಿನೈದು



## ಚಂದಕ್ಕಿ ಮಾಮ


ಚಂದಕ್ಕಿ ಮಾಮ
ಚಂದಿರ ಸೋಮ
ಬಿಂದಿಗೆ ತಂಬಿಗೆ
ಕೊಡು ಕೊಡು ಮಾಮ

ನಡುವೆಯೊಳಾಡುವ
ಹುಡುಗರಿಗೆಲ್ಲಾ
ಕುಡಿಕೆಮುತ್ತುಗಳ
ಕೊಡು ಕೊಡು ಮಾಮ

ತಂಡ ತಂಡ
ನಿಂತುಕೊಂಡಿರುವ ಎಮಗೆ
ಚಂಡು ದಾಂಡನು
ಕೊಡು ಕೊಡು ಮಾಮ

ಬಾಲರ ಮಾತ ನೀ
ಆಲಿಸುತ ಆಟಕೆ
ಗೋಲಿ ಗೆಜ್ಜುಗ
ಕೊಡು ಕೊಡು ಮಾಮ

○



## ಗೋವಿನ ಹಾಡು

೧

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುತಿಹ ಕರ್ನಾಟ ದೇಶದೊ
ಳಿರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು ?

ಗಿರಿಗಳೆಡೆಯಲಿ ಅಡವಿ ನಡುವೆ
ತುರುವ ದೊಡ್ಡಿಯ ಮಾಡಿಕೊಂಡು
ಮೆರೆವ ಕಾಳಿಂಗನೆಂಬ ಗೊಲ್ಲನ ಸಿರಿಯ ನಾನೆಂತು ಪೇಳ್ವೆನು ?

ಗೊಲ್ಲದೊಡ್ಡಿಯೊಳಿರುವ ಹಸುಗಳು
ಎಲ್ಲ ಬೆಟ್ಟದ ಮೇಲೆ ಮೇಯುತ
ಹುಲ್ಲುಒಳ್ಳೆಯ ನೀರ ಕುಡಿಯುತ
ಅಲ್ಲಿ ಮೆರೆದುವರಣ್ಯದಿ

ಕರುಗಳನು ನೆನೆನೆನೆದು ಹಸುಗಳು
ಕೊರಳ ಘಂಟೆ ಢಣಿರು ಢಣಿರೆನೆ
ಪರಿದು ಲಂಘಿಸಿ ಚಿಮ್ಮಿ ನೆಗೆಯುತ
ಮರಳಿ ಬಂದುವು ದೊಡ್ಡಿಗೆ

ತಮ್ಮ ತಾಯನು ಕಂಡು ಕರುಗಳು
ಅಮ್ಮಾ ಎಂದು ಕೂಗಿ ನಲಿಯುತ
ಸುಮ್ಮಾನದೊಳು ಮೊಲೆಯನುಂಡು
ನಿರ್ಮಲದೊಳು ಇದ್ದವು

❊ ❊ ❊

ಉದಯಕಾಲದೊಳೆದ್ದು ಗೊಲ್ಲನು
ನದಿಯ ಸ್ನಾನವ ಮಾಡಿಕೊಂಡು
ಮುದದಿ ತಿಲಕವ ಹಣೆಯೊಳಿಟ್ಟು
ಚದುರ ಶಿಖೆಯನು ಹಾಕಿದ



ಎಳೆಯ ಮಾವಿನ ಮರದ ಕೆಳಗೆ
ಕೊಳಲನೂದುತ ಗೊಲ್ಲಗೌಡನು

ಎಳೆಯ ಮಾವಿನ ಮರದ ಕೆಳಗೆ
ಕೊಳಲನೂದುತ ಗೊಲ್ಲಗೌಡನು
ಬಳಸಿ ನಿಂದ ತುರುಗಳನ್ನು
ಬಳಿಗೆ ಕರೆದನು ಹರುಷದಿ.

ಗಂಗೆ ಬಾರೇ ಗೌರಿ ಬಾರೆ
ತುಂಗಭದ್ರೆ ತಾಯಿ ಬಾರೆ
ಕಾಮಧೇನು ನೀನು ಬಾರೆಂದು
ಪ್ರೇಮದಲಿ ಗೊಲ್ಲ ಕರೆದನು.

ಗೊಲ್ಲ ಕರೆದ ಧ್ವನಿಯ ಕೇಳಿ
ಎಲ್ಲ ಹಸುಗಳು ಬಂದು ನಿಂತು
ಚೆಲ್ಲಿ ಸೂಸಿ ಹಾಲು ಕರೆಯಲು
ಅಲ್ಲೆ ತುಂಬಿತು ಬಿಂದಿಗೆ.




೨

ಹಬ್ಬಿದಾ ಮಲೆ ಮಧ್ಯದೊಳಗೆ
ಅರ್ಭುತಾನೆಂದೆಂಬ ವ್ಯಾಘ್ರನು
ಅಬ್ಬರಿಸಿ ಹಸಿ ಹಸಿದು ಬೆಟ್ಟದ
ಕಿಬ್ಬಿಯೊಳು ತಾನಿದ್ದನು.

ಸಿಡಿದು ರೋಷದಿ ಮೊರೆಯುತಾ ಹುಲಿ
ಘುಡುಘುಡಿಸಿ ಭೋರಿಡುತ ಛಂಗನೆ
ತುಡುಕಲೆರಗಿದ ರಭಸಕಂಜಿ
ಚದುರಿ ಹೋದವು ಹಸುಗಳು.

ಪುಣ್ಯಕೋಟಿ ಎಂಬ ಗೋವು
ತನ್ನ ಕಂದನ ನೆನೆದುಕೊಂಡು
ಮುನ್ನ ಹಾಲನು ಕೊಡುವೆನೆನುತ
ಚೆನ್ನಾಗಿ ತಾ ಬರುತಿರೆ.



ಇಂದೆನಗೆ ಆಹಾರ ಸಿಕ್ಕಿತು
ಎಂದು ಬೇಗನೆ ದುಷ್ಟ ವ್ಯಾಘ್ರನು
ಬಂದು ಬಳಸಿ ಅಡ್ಡಗಟ್ಟಿ
ನಿಂದನಾ ಹುಲಿರಾಯನು.

ಮೇಲೆ ಬಿದ್ದು ನಿನ್ನನೀಗಲೆ
ಬೀಳಹೊಯ್ವೆನು ನಿನ್ನ ಹೊಟ್ಟೆಯ
ಸೀಳಿ ಬಿಡುವೆನು ಎನುತ ಕೋಪದಿ
ಖೂಳ ವ್ಯಾಘ್ರನು ಕೂಗಲು.

ಒಂದು ಬಿನ್ನಹ ಹುಲಿಯೆ ಕೇಳು
ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಬಂದು ಸೇರುವೆನಿಲ್ಲಿಗೆ.

ಹಸಿದ ವೇಳೆಗೆ ಸಿಕ್ಕಿದೊಡವೆಯ
ವಶವ ಮಾಡದೆ ಬಿಡಲು ನೀನು
ನುಸುಳಿ ಹೋಗುವೆ ಮತ್ತೆ ಬರುವೆಯ ?
ಹುಸಿಯನಾಡುವೆಯೆಂದಿತು.

ಸತ್ಯವೇ ನಮ್ಮ ತಾಯಿ ತಂದೆ
ಸತ್ಯವೇ ನಮ್ಮ ಸರ್ವ ಬಳಗ
ಸತ್ಯವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು.

೩

ಕೊಂದು ತಿನ್ನುವೆನೆಂಬ ಹುಲಿಗೆ
ಚೆಂದದಿಂದ ಭಾಷೆಯಿತ್ತು
ಕಂದ ನಿನ್ನನು ನೋಡಿ ಹೋಗುವೆ
ನೆಂದು ಬಂದೆನು ದೊಡ್ಡಿಗೆ.

ಅಮ್ಮ ನೀನು ಸಾಯಲೇಕೆ ?
ನಮ್ಮ ತಬ್ಬಲಿ ಮಾಡಲೇಕೆ ?
ಸುಮ್ಮನಿಲ್ಲೆಯೆ ನಿಲ್ಲೆನುತ್ತ
ಅಮ್ಮನಿಗೆ ಕರು ಹೇಳಲು.

ಕೊಟ್ಟ ಭಾಷೆಗೆ ತಪ್ಪಲಾರೆನು
ಕೆಟ್ಟ ಯೋಚನೆ ಮಾಡಲಾರೆನು
ನಿಷ್ಠೆಯಿಂದಲಿ ಪೋಪೆನಲ್ಲಿಗೆ
ಕಟ್ಟಕಡೆಗಿದು ಖಂಡಿತ.

ಆರ ಮೊಲೆಯನು ಕುಡಿಯಲಮ್ಮ
ಆರ ಸೇರಿ ಬದುಕಲಮ್ಮ
ಆರ ಬಳಿಯಲಿ ಮಲಗಲಮ್ಮ
ಆರು ನನಗೆ ಹಿತವರು ?

ಅಮ್ಮಗಳಿರ ಅಕ್ಕಗಳಿರ
ನಮ್ಮತಾಯೊಡಹುಟ್ಟುಗಳಿರ
ನಿಮ್ಮಕಂದನೆಂದು ಕಾಣೆರಿ
ತಬ್ಬಲಿಯನೀ ಕರುವನು.

ಮುಂದೆ ಬಂದರೆ ಹಾಯಬೇಡಿ
ಹಿಂದೆ ಬಂದರೆ ಒದೆಯಬೇಡಿ
ಕಂದ ನಿಮ್ಮವನೆಂದು ಕಾಣೆರಿ
ತಬ್ಬಲಿಯನೀ ಕರುವನು.



ಕಟ್ಟಕಡೆಯಲಿ ಮೇಯಬೇಡ
ಬೆಟ್ಟದೊತ್ತಿಗೆ ಹೋಗಬೇಡ
ದುಷ್ಟವ್ಯಾಘ್ರನು ಹೊಂಚುತಿರುವನು
ನಟ್ಟನಡುವಿರು ಕಂದನೆ

ತಬ್ಬಲಿಯು ನೀನಾದೆ ಮಗನೆ
ಹೆಬ್ಬುಲಿಯ ಬಾಯನ್ನು ಹೊಗುವೆನು
ಇಬ್ಬರಾ ಋಣ ತೀರಿತೆಂದು
ತಬ್ಬಿಕೊಂಡಿತು ಕಂದನ.

೪

ಗೋವು ಕರುವನು ಬಿಟ್ಟು ಬಂದು
ಸಾವಕಾಶವ ಮಾಡದಂತೆ
ಗವಿಯ ಬಾಗಿಲ ಸೇರಿ ನಿಂತು
ತವಕದಲಿ ಹುಲಿಗೆಂದಿತು.



ಖಂಡವಿದೆಕೋ ಮಾಂಸವಿದೆಕೋ
ಗುಂಡಿಗೆಯ ಬಿಸಿ ರಕ್ತವಿದೆಕೋ
ಚಂಡ ವ್ಯಾಘ್ರನೆ ನೀನಿದೆಲ್ಲವ -
ನುಂಡು ಸಂತಸದಿಂದಿರು.

ಪುಣ್ಯಕೋಟಿಯ ಮಾತ ಕೇಳಿ
ಕಣ್ಣನೀರನು ಸುರಿಸಿ ನೊಂದು
ಕನ್ನೆಯಿವಳನು ಕೊಂದು ತಿಂದರೆ
ಮೆಚ್ಚನಾ ಪರಮಾತ್ಮನು.

ಎನ್ನ ಒಡಹುಟ್ಟಕ್ಕ ನೀನು
ನಿನ್ನ ಕೊಂದು ನಾನೇನ ಪಡೆವೆನು
ಎನ್ನುತಾ ಹುಲಿ ಹಾರಿ ನೆಗೆದು
ತನ್ನ ಪ್ರಾಣವ ಬಿಟ್ಟಿತು !

೦



## ಕೆರೆಗೆ ಹಾರ

೧

ಕಲ್ಲನಕೇರಿ ಮಲ್ಲನಗೌಡಾ ಕೆರೆಯೊಂದ ಕಟ್ಟಿಸ್ಯಾನು
ಕೆರೆಯೊಂದ ಕಟ್ಟಿಸ್ಯಾನು ಸೆರೆಮುಕ್ಕ ನೀರಿಲ್ಲ
ಸೆರೆಮುಕ್ಕ ನೀರಿಲ್ಲ ಹೊತ್ತಿಗಿ ತಗಸ್ಯಾರು
ಹೊತ್ತಿಗೆ ತಗಸ್ಯಾರು ಜೋಯಿಸ ಕೇಳ್ಯಾರು
“ದೇವರಲ್ಲ ದಿಂಡ್ರಲ್ಲ ದೆವ್ವಲ್ಲ ಭೂತಲ್ಲ”



"ಹಿರಿ ಸೊಸಿ ಮಲ್ಲವ್ವನ ಹಾರವ ಕೊಡಬೇಕು"
ಹಾರವ ಕೊಟ್ಟರ ನೀರು ಬೀಳೂವಂದ್ರೂ
"ಹಿರಿ ಸೊಸಿನ್ನ ಕೊಟ್ಟರೆ ಹಿರಿತನಕ ಯಾರಿಲ್ಲ"
"ಕಡೆ ಸೊಸಿ ಭಾಗೀರತಿನ್ನ ಹಾರವ ಕೊಡಬೇಕು"
ಹಾರ ಕೊಡಬೇಕಂತ ಮಾತಾತು ಮನೆಯಾಗ.

೨

ಸಣ್ಣ ಸೊಸಿ ಭಾಗೀರತಿ ತವರಮನೆಗೆ ಹೊಂಟಾಳು,
"ಅತ್ತೆವ್ವಾ ನಾ ನಮ್ಮ ತವರ ಮನೆಗೆ ಹೋಗತೀನು"
"ಸರ್ರನೆ ಹೋಗವ್ವಾ ಭರ್‍ರನೆ ಬಾರವ್ವ"

ಸಣ್ಣ ಸೊಸಿ ಭಾಗೀರತಿ ತವರಮನೆಗೆ ಹೋದಾಳು
ಮನೆಮುಂದೆ ಹೋಗುದಕ ಅವರಪ್ಪ ಬಂದಾನು
"ಎಂದಿಲ್ಲದೆ ಭಾಗೀರತಿ ಇಂದ್ಯಾಕ ಬಂದೆವ್ವ?
ಬಾಡಿದ ಮಾರ್‍ಯಾಕ ಕಣ್ಣಾಗ ನೀರ್‍ಯಾಕ"
"ನಮ್ಮಾವ ನಮ್ಮತ್ತೆ ಬ್ಯಾರೆ ಇಡುತಾರಂತೆ ?"
"ಇಟ್ಟರ ಇಡಲೇಳು ಹೊಲಮನೀ ಕೊಡತೇನು"
"ಹೊಲಮನಿ ಒಯ್ದು ಹೊಳೆ ದಂಡ್ಯಾಗ್ಹಾಕಪ್ಪ"



ಅತ್ತತ್ತ ಹೋಗುತಲೆ ಅವರವ್ವ ಬಂದಾಳು
"ಎಂದಿಲ್ಲದೆ ಭಾಗೀರತಿ ಇಂದ್ಯಾಕಳುತಾ ಬಂದೆ ?"
"ನಮ್ಮತ್ತೆ ನಮ್ಮಾವ ಬ್ಯಾರೆ ಇಡುತಾರಂತೆ"
"ಇಟ್ಟರೆ ಇಡಲೇಳು ವಾಲಿಜೋಡು ಕೊಡುತೇನೆ"
"ವಾಲಿಯ ಜೋಡೊಯ್ದು ಒಲಿಯಾಗ ಹಾಕವ್ವ"

ಮುಂದಕತ್ತ ಹೋಗುತಲೆ ಅವರಕ್ಕ ಬಂದಾಳು
ಅವರಕ್ಕ ಬಂದ್ಯಾಳು ಭಾಗೀರತೀನ ಕೇಳ್ಯಾಳು
"ಎಂದಿಲ್ಲದೆ ಭಾಗೀರತಿ ಇಂದ್ಯಾಕ ಈ ದುಕ್ಕ ?"
"ನಮ್ಮತ್ತೆ ನಮ್ಮಾವ ಬ್ಯಾರೆ ಇಡುತಾರಂತೆ"
"ಇಟ್ಟಾರೆ ಇಡಲೇಳ ಮಕ್ಕಳ ಜೋಡಿಗೆ ಕಳವತೇನೆ"
"ಮಕ್ಕಳಿದ್ದರೇನಕ್ಕ ದುಕ್ಕ ಕಳೆದಾವೇನ ?"

ಸಣ್ಣ ಸೊಸಿ ಭಾಗೀರತಿ ತವರ ಮನೆಯ ಬಿಟ್ಟು
ತವರಮನಿಯ ಬಿಟ್ಟು ಗೆಣತಿ ಮನೆಗೆ ನಡೆದಳು.
ತಲಬಾಗಿಲದಾಗ ಗೆಳತಿನ್ನ ಕಂಡಳು.
"ಎಂದಿಲ್ಲದೆ ಭಾಗೀರತಿ ಇಂದ್ಯಾಕ ಈ ಅಳುವು ?"
"ಅಂಜಿ ಹೇಳಲೆ ಗೆಳತಿ ಅಳುಕಿ ಹೇಳಲೆ ಗೆಳತಿ"
"ಅಂಜಬ್ಯಾಡ ಗೆಳತಿ ಅಳುಕಬ್ಯಾಡ ಗೆಳತಿ"
"ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡುತಾರಂತ"
"ಕೊಟ್ಟರೆ ಕೊಡಲೇಳು ಇಟ್ಹಾಂಗ ಇರಬೇಕುಃ!"
ಸರ್‍ರನೆ ಹೋದಳು ಬರ್‍ರನೆ ಬಂದಳು.

೩

ಬ್ಯಾಳಿಯ ಹಸಮಾಡ್ತ ಬಿಟ್ಟಳು ಕಣ್ಣೀರ,
"ಎಂದಿಲ್ಲದೆ ಭಾಗೀರತಿ ಇಂದಾಕಃ ಕಣ್ಣೀರು ?"

"ಬ್ಯಾಳ್ಯಾಗಿನ ಹಳ್ಳು ಬಂದು ಕಣ್ಣಾಗೆರಚಿದವು ಮಾವಾ"
ಅಕ್ಕಿಯ ಹಸಮಾಡ್ತ ಉಕ್ಯಾವು ಕಣ್ಣೀರು
"ಎಂದಿಲ್ಲದೆ ಭಾಗೀರತಿ ಇಂದ್ಯಾಕ ಕಣ್ಣೀರು ?"
"ಅಕ್ಯಾಗಿನ ಹಳ್ಳೊಂದ ಕಣ್ಣಾಗ ಬಿತ್ತ"
ಉಕ್ಕುವ ನೀರಾಗ ಅಕ್ಕಿಯ ಸುರುವ್ಯಾರ
ಹತ್ತು ಕೊಪ್ಪರಿಗೆ ನೀರು ಉಕ್ಕಿ ಮಳ್ಳತಿತ್ತು
"ನಿಂಗವ್ವ ಜಳಕ ಮಾಡs ನೀಲವ್ವ ಜಳಕ ಮಾಡ"
ನಿಂಗವ್ವ "ನಾವೊಲ್ಲೆ" ನೀಲವ್ವ "ನಾವೊಲ್ಲೆ"
"ಗಂಗವ್ವ ಜಳಕ ಮಾಡs ಗವರವ್ವ ಜಳಕ ಮಾಡ"
ಗಂಗವ್ವ "ನಾವೊಲ್ಲೆ" ಗವರವ್ವ "ನಾವೊಲ್ಲೆ"

ಸಣ್ಣ ಸೊಸಿ ಭಾಗೀರತಿ ಜಳಕನ ಮಾಡ್ಯಾಳು
ಜಳಕನ ಮಾಡ್ಯಾಳು ಬಂಗಾರ ಬುಟ್ಟಿ ತುಂಬ್ಯಾಳು
ಸಿಂಗಾರ ಸಿಂಬಿ ಮಾಡ್ಯಾಳು ಮುಂದ ಮುಂದ ಹೊಂಟಾಳು
ಮುಂದ ಮುಂದ ಭಾಗೀರತಿ ಹಿಂದ್ಹಿಂದ ಎಲ್ಲಾರೂ
ಗಂಗಿ ಪೂಜೆ ಮಾಡ್ಯಾರ ಬೆಲಪತ್ರಿ ಏರಿಸ್ಯಾರ
ಬೆಲಪತ್ರಿ ಏರಿಸ್ಯಾರ ಊಬತೀ ಧರಿಸ್ಯಾರ
ಸೀರಿ ಕುಬಸಾ ಏರಿಸ್ಯಾರ ಹೂವಿನ ದಂಡಿ ಮುಡಿಸ್ಯಾರ
ಹೂವಿನ ದಂಡಿ ಮುಡಿಸ್ಯಾರ ನೇವದಿ ಮಾಡ್ಯಾರ
ನೇವದಿ ಮಾಡ್ಯಾರು ಎಲ್ಲರೂ ಉಂಡಾರು
ಎಲ್ಲಾರು ಉಂಡಾರು ಉಳಿದದ್ದು ತುಂಬ್ಯಾರು
ಉಳಿದದ್ದು ತುಂಬ್ಯಾರು ಬಂಗಾರ ಬುಟ್ಟಿ ಹೊತ್ತಾರು
ಬುಟ್ಟಿ ಹೊತ್ತು ನಡೆದಾರು ಬಂಗಾರ ಬಟ್ಲ ಮರೆತರು
"ಗಂಗವ್ವ ನೀ ಹೋಗ ! ಗವರವ್ವ ನೀ ಹೋಗ !"
ಗಂಗವ್ವ "ನಾವೊಲ್ಲೆ" ಗವರವ್ವ "ನಾವೊಲ್ಲೆ"



"ನಿಂಗವ್ವ ನೀ ಹೋಗ ನೀಲವ್ವ ನೀ ಹೋಗ"
ನಿಂಗವ್ವ "ನಾವೊಲ್ಲೆ" ನೀಲವ್ವ "ನಾವೊಲ್ಲೆ"
"ಸಣ್ಣ ಸೊಸಿ ಭಾಗೀರತಿ ನೀ ತರಹೋಗವ್ವ"
ಸಣ್ಣ ಸೊಸಿ ಭಾಗೀರತಿ ಬಿರಿ ಬಿರಿ ನಡೆದಾಳು

ಬಿರಿಬಿರಿ ಹೋದಳು ಬಂಗಾರ ಬಟ್ಲ ತೊಗೊಂಡಾಳು
ಒಂದು ಮೆಟ್ಲೇರುದಕ ಪಾದಕ ಬಂದಾಳು ಗಂಗಿ
ಎರಡು ಮೆಟ್ಲೇರುದಕ ಪಾದ ಮುಣಗಿಸ್ಯಾಳು ಗಂಗಿ
ಮೂರು ಮೆಟ್ಲೇರುದಕ ಮೊಣಕಾಲಿಗೆ ಬಂದಾಳು ಗಂಗಿ



ನಾಕು ಮೆಟ್ಲೇರುದಕ ನಡಮಟ ಬಂದಾಳು ಗಂಗಿ
ಐದು ಮೆಟ್ಲೇರುದಕ ತುಂಬಿ ಹರಿದಾಳು ಗಂಗಿ
ಸಣ್ಣ ಸೊಸಿ ಭಾಗೀರತಿ ಕೆರೆಗ್ಹಾರವಾದಾಳು.

೪

ಗಂಡ ಮಾದೇವರಾಯ ದಂಡಿನಾಗೈದಾನು
ದಂಡಿನಾಗೈದಾನು ಕಂಡಾನು ಕೆಟ್ಟ ಕನಸ
ಸೆಲ್ಯ ಸುಟ್ಹಾಂಗಾತು ಕೋಲು ಮುರಿದ್ಹಾಂಗಾತು,
ಕಟ್ಟಿಸಿದ ಮಾಲೆಲ್ಲ ತಟ್ಟನೆ ಬಿದ್ಹಾಂಗಾತು,

ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಒತ್ತಾರ ಬಂದಾನ ಮನೆಗೆ
ಬಂದ ಮಾದೇವನ ತಂದೆ – ತಾಯಿ ನೋಡಿದರು.
"ಗಂಗವ್ವ ನೀರ ಕೊಡs ಗವರವ್ವ ನೀರ ಕೊಡs"
"ಗಂಗವ್ವ ನೀರ ಕೊಡುದ್ಯಾಕ ? ಗವರವ್ವ ನೀರ ಕೊಡುದ್ಯಾಕ ?
ನನ ಮಡದಿ ಭಾಗೀರತಿ ಎಲ್ಲಿಗೋಗ್ಯಾಳವ್ವ?"
"ನಿನ ಮಡದಿ ಭಾಗೀರತಿ ತವರಿಗೆ ಹೋಗ್ಯಾಳಪ್ಪ"

೫

ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಹೊಂಟಾನತ್ತೆಯ ಮನೆಗೆ.



ಬಂದಿರು ಅಳಿಯನ ನೋಡಿ ಅಂದಳು ಅತ್ತೆವ್ವ
"ನಿಂಬೆವ್ವ ನೀರ್ ಕೊಡs ನೀಲವ್ವ ನೀರ್ ಕೊಡs !"
"ನಿಂಬೆವ್ವ ನೀರ್ ಕೊಡುದ್ಯಾಕ ? ನೀಲವ್ವ ನೀರ್ ಕೊಡುದ್ಯಾಕ?
ನನ ಮಡದಿ ಭಾಗೀರತಿ ಎಲ್ಲಿಗ್ಹೋಗ್ಯಾಳತ್ತೀ"
"ನಿನ ಮಡದಿ ಭಾಗೀರತಿ ಗೆಣತಿ ಮನೆಗೆ ಹೋಗ್ಯಾಳಪ್ಪ! "
ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಗೆಣತಿ ಮನೆಗೆ ಸ್ವಾರಿ.
ಬಂದಿರೊ ಮಾದೇವನ ಕಂಡಾಳು ಗೆಣತವ್ವ
"ಬಾಳವ್ವ ನೀರ್ ಕೊಡ ಬsಸವ್ವ ನೀರ್ ಕೊಡ"
"ಬಾಳವ್ವ ನೀರ್ ಕೊಡುದ್ಯಾಕs?ಬsಸವ್ವ ನೀರ್ ಕೊಡುದ್ಯಾಕ?"
ನನ ಮಡದಿ ಭಾಗೀರತಿ ಎಲ್ಲಿಗೋಗ್ಯಾಳಕ್ಕ?"
"ನಿನ್ನ ಮಡದಿ ಭಾಗೀರತಿದು ಏನು ಹೇಳಲಿ ಸೂರಿ ?
ನಿಮ್ಮಪ್ಪ ನಿಮ್ಮವ್ವ ಕೆರಿಗ್ಹಾರ ಕೊಟ್ಟರಂತs"
ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಹೊಂಟಾನು ಹೌಹಾರಿ ;
ಕೆರೆಯ ದಂಡೆಗೆ ಬಂದು ಕಣ್ಣೀರು ಇಟ್ಟಾನು
ಕಣ್ಣೀರು ಇಟ್ಟಾನು ನಿಟ್ಟುಸಿರು ಬಿಟ್ಟಾನು ;
"ಸಾವಿರ ವರಹ ಕೊಟ್ಟರೂ ಸಿಗಲಾರದ ಸತಿ ನೀನು
ಸಿಗಲಾರದ ಸತಿ ನೀನು ನನ ಬಿಟ್ಟು ಎಲ್ಲಿ ಹೋದೆ ?"
ಮುನ್ನೂರು ವರಹ ಕೊಟ್ಟು ಮುತ್ತಿನೋಲೆ ಮಾಡಿಸಿದ್ದೆ
ಮುತ್ತಿನೋಲೆ ಇಟ್ಟುಗೊಳ್ಳೊ ಮುತ್ತೈದೆ ಎಲ್ಲಿಗ್ಹೋದೆ"
ಇಷ್ಟು ಮಾತಾಡಿ ಮಾದೇವ ಬಿಟ್ಟಾನು ಕಣ್ಣೀರು
ಬಿಟ್ಟನು ಕಣ್ಣೀರs ಹಾರೀದ ಕೆರೆ ನೀರಾಗ



ಸೋಬಕ್ಕಿ ಸೋಬಾನ
ಗಿರಿಜೆ ಕಲ್ಯಾಣ ॥

## ಮದುವೆಯ ಹಾಡು


ಗಂಗಿಟ್ಟ ಸಾಸೇವು । ಗೌರಿಟ್ಟ ಸಾಸೇವು
ಸೀತಿಟ್ಟ ಸಾಸೇವು
ಸಿರಿರಾಮರು ಕೊಟ್ಟ ಬಾಸೆ
ನಾವಿಟ್ಟ ಸಾಸೇವು । ಚಿರವಾಗಲೆಂದು

ಸೋಬಕ್ಕಿ ಸೋಬಾನ
ಗಿರಿಜೆ ಕಲ್ಯಾಣ ॥

ಬಲದೇಲೇನ ಕಂಡೆ? ಬಸವನ ಕಂಡೆ
ಎಡದೇಲೇನ ಕಂಡೆ? ರಾಮದೇವರ ಕಂಡೆ
ಕನ್ನಡಿ ಕಳಸಾಕೊಂದು ಹೆಣ್ಣಾಗಲೆಂದು
ಎತ್ತಿ ಮುದ್ದಾಡುಕೊಬ್ಬ ಮಗನಾಗಲೆಂದು

ಸೋಬಕ್ಕಿ ಸೋಬಾನ
ಗಿರಿಜೆ ಕಲ್ಯಾಣ ॥





ಅಣ್ಣಾ ತಮ್ಮರಿಬ್ಬರು ಗೊಬ್ಬರ ಚೆಲ್ಲೊಕೋದ್ರು-
ಗೊಬ್ಬರ ಚೆಲ್ಲೊ ಹೊತ್ತಿಗೆ ಚಲ್ಲಣೆ ಬಂದೊ
ಚಲ್ಲಣೆ ಹೊತ್ತಿಗೆ ಅರಗಣೆ ಬಂದೊ
ಅರಗಣೆ ಹೊತ್ತಿಗೆ ಕುಯ್ಯಣೆ ಬಂದೊ
ಕುಯ್ಯಣೆ ಮುಂದಕೆ ಕಟ್ಟಣೆ ಬಂದೊ

ಕಬ್ಬಾಳ್ ದುರ್ಗದಂಗೆ ಬಿದ್ವಲ್ಲೆ ಅರಿಗಳು
ಅಬ್ಬೂರ ಗುಡ್ಡೆಯಂಗೆ ಎದ್ವಲ್ಲೆ ಮೆದೆಗಳು

ಸೋಬಕ್ಕಿ ಸೋಬಾನ
ಗಿರಿಜೆ ಕಲ್ಯಾಣ ||



ಒಂದಡಕೆ ಒಂದೆಲೆ ಒಂದೇ ಗಂಧಾದುಂಡೆ
ಒಂದ್ವಾರಕೊಂದ ರವೆರತ್ನ । ಗಂಬಳಿ ಮ್ಯಾಲೆ
ಬಂದಿ ಕುಂತವರೆ ಕುಲದೋರು । ಅಣ್ಣಯ್ಯದೀರು
ಗಂಧಾದಿಳ್ಳೆಕೆ ಇದಿರಾಗಿ

ಆನೆಮ್ಯಾಲೆ ಬಂದೊ ಆರು ಸಾವಿರ ಬಿಳಿಯೆಲೆ
ನಾರಿಲ್ಲದೆಲೆ ಬಿಳಿಯೆಲೆ । ನನ್ನೂರ
ರಾಯ್‌ಗೋಳು ಮೆಲ್ಲೋದು ಚಿಗುರೆಲೆ

ಅಡಕ್ಕಿಲ್ಲ ಅಂದರೆ ಅಡಕೆಲ್ಲಿ ದೊರತಾವು ?
ಅಡಕೆ ಬೆಳುವೋದು ನಿಡಗಟ್ಟ ।- ದ ದೊರೆಗೋಳು
ಅಡಕೇಯ ರಥವ ಕಳುಗವರೆ

ಹಣ್ಣಿಲ್ಲೆಂದರೆ ಹಣ್ಣೆಲ್ಲಿ ದೊರೆತಾವು ?
ಹಣ್ಣು ಬೆಳುವೋದು ಬೆಂಗಳೂರು । ನಾರಾಯಣಸ್ವಾಮಿ
ಹಣ್ಣೀನ ರಥವ ಕಳುಗವರೆ


ಹೂವಿಲ್ಲೆಂದರೆ ಹೂವೆಲ್ಲಿ ದೊರೆತಾವು ?
ಹೂವ ಬೆಳುವೋದು ಚನ್ನಪಟ್ಟಣ । ದ ದೊರೆಗೋಳು
ಹೂವಿನ ರಥವ ಕಳುಗವರೆ

○



# ಗಾದೆಗಳು





# ಗಾದೆಗಳು

ಅಕ್ಕರೆ ಇಲ್ಲದ ಅರಮನೆಗಿಂತ
ಅಕ್ಕರೆ ಇರುವ ಚಿಕ್ಕ ಮನೆ ಲೇಸು

* * *

ಅಂಗೈ ಹಾಗೆ ಹೊಲ ಮಾಡಿದರೆ
ಮುಂಗೈ ತುಂಬ ತುಪ್ಪ

* * *

ಅಕ್ಕಿ ಮ್ಯಾಗಳ ಆಸೆ
ನೆಂಟರ ಮ್ಯಾಗಳ ಪ್ರೀತಿ

* * *

ಅಜ್ಜಿ ಇಲ್ಲದ ಮನೆ
ಮಜ್ಜಿಗೆ ಇಲ್ಲದ ಊಟ

* * *

ಅಟ್ಟದಿಂದ ಬಿದ್ದೋನ
ದಡಿಯಿಂದ ಚಚ್ಚಿದರು

* * *

ಅಡಕೆ ಕದ್ದರೂ ಕಳ್ಳ
ಆನೆ ಕದ್ದರೂ ಕಳ್ಳ

❊ ❊ ❊

ಅಡಿಗೆ ಮಾಡಿ ಕಲಿ
ಉಡುಗೆ ನೋಡಿ ಕಲಿ

❊ ❊ ❊

ಅಡ್ಡಗೋಡೆ ಮೇಲೆ ದೀಪ ಇಟ್ಟಂಗೆ

❊ ❊ ❊

ಅಂಗೈ ಹುಣ್ಣಿಗೆ ಕನ್ನಡಿ ಏಕೆ?

❊ ❊ ❊

ಅತ್ತಿಮರ ಹಾಕಿ
ಹೊತ್ತಿದ್ದ ಪಾಪ ಕಳಿ

❊ ❊ ❊

ಅನಾಥರ ಬದುಕಿಗೆ ಆಕಾಶವೇ ಕಾವಲು

❊ ❊ ❊

ಅನ್ಯಾಯ ತನ್ನ ಬೆನ್ನು ಬಿಡೋದಿಲ್ಲ

❊ ❊ ❊

ಅನ್ಯಾಯದ ಗಳಿಕೆ ಅಡವಿ ಪಾಲು

❊ ❊ ❊

ಅಪ್ಪ-ಅವ್ವರಂಥ ನೆಂಟರು ಇಲ್ಲ
ಅಣ್ಣೇಸೊಪ್ಪಿನಂಥ ಊಟ ಇಲ್ಲ

* * *


ಆಕಾಶಕ್ಕೆ ಏಣಿ ಹಾಕಬ್ಯಾಡ
ಬೆಟ್ಟಕ್ಕೆ ಸೀರೆ ಉಡಿಸಬ್ಯಾಡ

* * *

ಆಕಾಶದ ಮಳೆ
ಭೂಮಿತಾಯಿ ಬೆಳೆ
ಯಾರ ಹಂಗು ನಮಗೇನು ?

* * *





ಆಕಳು ಕಪ್ಪಾದರೆ ಹಾಲು ಕಪ್ಪೆ?

* * *

ಆಡಿ ತಪ್ಪಬೇಡ? ಓಡಿ ಸಿಕ್ಕಬೇಡ

* * *

ಆನೆ ಹೋಗ್ತದೆ ನಾಯಿ ಬೊಗಳ್ತದೆ

* * *

ಆಯ ನೋಡಿ ಪಾಯ ಹಾಕು

* * *

ಆಲಕ್ಕೆ ಹೂವಿಲ್ಲ
ಸಾಲಕ್ಕೆ ಕೊನೆಯಿಲ್ಲ

* * *

ಆರಂಭದ ಬುಡ ಕಷ್ಟ
ಅಧಿಕಾರದ ತುದಿ ಕಷ್ಟ

* * *

ಆರಿದ್ರ ಮಳೆ ಗುಡುಗಿದರೆ

ಆರು ಮಳೆ ಹೋಯ್ತು !

❋ ❋ ❋

ಆಶೆಗೆ ಅಂತ್ಯವಿಲ್ಲ

ಪಾಶಕ್ಕೆ ಕೊನೆಯಿಲ್ಲ

❋ ❋ ❋

ಆಳಾಗಿ ದುಡಿ ಅರಸಾಗಿ ಉಣ್ಣು

❋ ❋ ❋

ಆಪತ್ತಿಗಾದೋನು ನಂಟ

ಸಮಯಕ್ಕಾದೋನು ಬಂಟ

❋ ❋ ❋

ಆಳು ನೋಡಿದರೆ ಅಲಂಕಾರ

ತಾಳು ನೋಡಿದರೆ ಸೋಗೆರೋಗ

❋ ❋ ❋

ಇಕ್ಕಲಾರದವಳು ಹಿತ್ತಲಿಗೆ ಹೋದಳು

❋ ❋ ❋

ಕೊಡಲಾರದವಳು ಕೋಣೆಗೆ ಹೋದಳು

❋ ❋ ❋



ಇಂಗು ತೆಂಗು ಇದ್ರೆ
ಮಂಗನೂ ಅಡಿಗೆ ಮಾಡ್ತದೆ !

* * *

ಇದ್ದುದ್ದ ಇದ್ದಂಗೆ ಹೇಳಿದರೆ
ಸಿದ್ದಪ್ಪಂಗೆ ಸಿಡಿಲು ಬಡೀತು

* * *

ಇಲಿ ಆಡಿದ ಕಣಜ ಹಾಳು
ಪಡಿ ಆಡಿದ ಮನೆ ಹಾಳು

* * *

ಇಬ್ಬರಿದ್ದರೆ ಏಕಾಂತ
ಮೂವರಿದ್ದರೆ ಲೋಕಾಂತ

* * *

ಇರೋಗಂಟ ಹಿರಿಹಬ್ಬ
ಇಲ್ದೇ ಇದ್ದಾಗ ತಿರಿಹಬ್ಬ !

* * *

ಇಲ್ಲದವನಿಗೆ ಒಂದು ಚಿಂತೆಯಾದರೆ
ಇದ್ದವನಿಗೆ ನಾನಾ ಚಿಂತೆ !

* * *

ಇಲ್ಲದ್ದ ಆಡಿ
ಇದ್ದ ಗೌರವವೂ ಹೋಯ್ತು

* * *

ಈಜು ಮರೀಬ್ಯಾಡ
ಜೂಜು ಕಲಿಬ್ಯಾಡ

* * *



ಈತನಾಗಲಿ ಆತನಾಗಲಿ
ಮಾತು ಒಂದಿರಬೇಕು

✻ ✻ ✻

ಈಚೆ ಕೇರೀಲಿ ಉಗುದರೆ
ಆಚೆ ಕೇರೀಲಿ ಹೊಸಾಳು !

✻ ✻ ✻

ಈರುಳ್ಳಿ ನೀರಲ್ಲಿ ತೊಳೆದರೆ
ನಾರೋದು ತಪ್ಪೀತೆ?

✻ ✻ ✻



ಉತ್ತಲ್ಲದೆ ಮಣ್ಣಲ್ಲ
ಹೆತ್ತಲ್ಲದೆ ಹೆಣ್ಣಲ್ಲ !

✻ ✻ ✻

ಉತ್ತು ಬಾಳುವವನ ಬದುಕು
ಎತ್ತಲೂ ಲೇಸು !

✻ ✻ ✻

ಉಗುರಲ್ಲಿ ಹೋಗೋದಕ್ಕೆ
ಕೊಡಲಿ ತಗೊಂಡ್ರಂತೆ

✻ ✻ ✻

ಉಗಳು ನುಂಗಿದರೆ ಹೊಟ್ಟೆ ತುಂಬೀತಾ?

✻ ✻ ✻



ಉಡಕಿಲ್ಲದವ ಮೈಲಿಗೆಗೆ ಹೇಸ
ಉಂಬಕ್ಕಿಲ್ಲದವ ತಂಗಳಿಗೆ ಹೇಸ

❊ ❊ ❊

ಉಣ್ಣೋಕೆ ಹುಡುಗರು ಚಂದ
ಮಾತಾಡೋಕೆ ಮುದುಕರು ಚಂದ !

❊ ❊ ❊



ಉಪ್ಪು ಇಕ್ಕಿದವನ ಮುಪ್ಪಿನ ತನಕ ನೆನಿ

* * *

ಉಳಿ ಸಣ್ಣದಾದರೂ ಬೆಟ್ಟ ಸೀಳ್ತದೆ

* * *

ಉಂಡದ್ದೇ ಉಗಾದಿ
ಮಿಂದದ್ದೇ ದೀಪಾವಳಿ

* * *

ಉಂಡ ಮನೆಗೆ ಎರಡು ಬಗೆಯ ಬೇಡ

* * *

ಊಟಕ್ಕೆ ಮುಂದಿರು ಜಗಳಕ್ಕೆ ಹಿಂದಿರು

* * *

ಊರ ನೋಡಿ ಬಾ ಅಂದ್ರೆ
ತೋರಣ ಕಟ್ಟಿ ಬಂದ್ರಂತೆ

* * *

ಊರಿಗೆ ಅರಸಾದರೂ ತಾಯಿಗೆ ಮಗ !

* * *

ಊರಿಗೆ ಊಟದ ಚಿಂತೆ
ನಾಯಿಗೆ ಎಂಜಲೆಲೆ ಚಿಂತೆ

* * *

ಊರಿಗೆ ನೂರು ಹಂದಿ ಇರಬೇಕು
ಕೇರಿಗೆ ಒಬ್ಬ ನಿಂದಕರಿರಬೇಕು

* * *

ಊರು ಹೋಗು ಅಂತದೆ
ಕಾಡು ಬಾ ಅಂತದೆ

* * *

ಊಟ ಕೌರವರ ಕಡೆ
ಕೂಟ ಪಾಂಡವರ ಕಡೆ

* * *

ಊರನ್ನೇ ಬಿಟ್ಟವನಿಗೆ
ನೀರಿನ ಹಂಗೇನು ?

* * *

ಋಜುಮಾರ್ಗಕ್ಕೆ ಋಗ್ವೇದ ಓದಬೇಕಾಗಿಲ್ಲ !

* * *

ಎಣ್ಣೆ ಬಂದಾಗ
ಕಣ್‌ಮುಚ್ಚಿಕೊಂಡಹಾಗೆ

* * *

ಎಡವಿದ ಕಾಲೇ ಎಡವೋದು ಹೆಚ್ಚು

* * *

ಎಕ್ಕಡ ಕಾಲು ಕಚ್ಚಿತು ಅಂತ ನಾವು
ಕಚ್ಚಕಾದೀತೆ?

* * *

ಎತ್ತು ಏರಿಗೆ ಎಳೀತು
ಕೋಣ ನೀರಿಗೆ ಎಳೀತು


* * *

ಎತ್ತಿಗೆ ಜ್ವರ ಬಂದ್ರೆ
ಎಮ್ಮೆಗೆ ಬರೆ ಹಾಕ್ದ

* * *

ಎದೆಗಾರ ಗೊಣಗಲ್ಲ
ಹದಗಾರ ಮುಣಗಲ್ಲ

* * *



ಎದ್ದಾಗ ಜುಟ್ಟು ಹಿಡಿ
ಬಿದ್ದಾಗ ಕಾಲು ಹಿಡಿ

❊ ❊ ❊

ಎತ್ತು ಉತ್ತಮೇಲೆ ತಿಳೀತು
ಹೆಣ್ಣು ಹೆತ್ತ ಮೇಲೆ ತಿಳೀತು

❊ ❊ ❊

ಎಲ್ಲಾ ಬಿಟ್ಟ
ಭಂಗಿ ನೆಟ್ಟ

❊ ❊ ❊

ಎಷ್ಟೋ ನೀವಿದರೂ ನಾಯಿ ಬಾಲ ಡೊಂಕೇ !

❊ ❊ ❊

ಏಕಾದಶಿ ಮನೆಗೆ ಶಿವರಾತ್ರಿ ಬಂದಂಗೆ

❊ ❊ ❊

ಏಡಿ ಇದ್ದ ಕೆರೆ ಹಾಳು
ಕೋಡುಗ ಇದ್ದ ವನ ಹಾಳು

❊ ❊ ❊

ಏನೂ ಇಲ್ಲದವ ಯಾವುದಕೂ ಹೇಸುವುದಿಲ್ಲ

❊ ❊ ❊

ಏಳು ಪಡಿ ಅಕ್ಕಿ ಕೊಟ್ಟರೂ
ಎಂಜಲಿಗೆ ಕೈ ಒಡ್ಡಿದಂಗೆ

❊ ❊ ❊



ಒಣ ಮರ ಗಿಣಿ ಕಾದಂಗೆ

❊ ❊ ❊

ಒಳಗೆಲ್ಲ ಹುಳುಕು
ಮೇಲೆಲ್ಲ ತಳುಕು

❊ ❊ ❊

ಒಬ್ಬರಿಗೆ ಇಬ್ಬರು ಲೇಸು
ಹಬ್ಬಕ್ಕೆ ಮದುವೆ ಲೇಸು

❊ ❊ ❊



ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು

* * *

ಓತಿಕ್ಯಾತನಿಗೆ ಬೇಲಿಯೇ ಸಾಕ್ಷಿ

* * *

ಓದೋದು ಶಾಸ್ತ್ರ: ಹಾಕೋದು ಗಾಳ !

* * *

ಹೋಮ ಮಾಡಿದರೆ ಕ್ಷಾಮ ಹೋದೀತೆ !

* * *

ಕಡ ತಂದು ಬಡವ ಕೆಟ್ಟ

* * *

ಕಟಪಟೆ ದೇವರಿಗೆ ಕಾಯಿಬಾಳೇ ಹಣ್ಣು

* * *

ಕಟುಕನ ಮುಂದೆ ಕುರಿಮರಿ ಕಷ್ಟ ಹೇಳಿಕೊಂಡಂಗೆ

* * *

ಕಡುಕೋಪ ಬಂದಾಗ ತಡಕೊಂಡವನೆ ಜಾಣ

* * *

ಕಣ್ಣು ಇರೋತನಕ ನೋಡಬೇಕು
ಕೈ ಇರೋತನಕ ನೀಡಬೇಕು

* * *



ಕಳ್ಳನಿಗೆ ಕಳ್ಳ ನಂಟು
ಹುಳಿಗೆ ಮೆಣಸು ನಂಟು

* * *

ಕಾಸಿಗೆ ಹೋಗಿ ತಂಗಿದರೂ
ಕಾಸಿನ ಆಸೆ ಬಿಡಲಿಲ್ಲ

* * *

ಕಿರಿದಾಗಿ ಬಿತ್ತಿ ಹಿರಿದಾಗಿ ಬೆಳೆ

* * *

ಕಿವುಡಿ ಆದರೇನು ?
ಬುಗುಡಿ ಇಡಬಾರದ ?

❊ ❊ ❊

ಕುಟುಕು ಮಳೆ ಬೇಡ
ಲೊಟಕೊ ಗಂಡ ಬೇಡ

❊ ❊ ❊

ಕುದುರೆಗೆ ಕಡಿವಾಣ ಸನ್ನೆ
ಕತ್ತೆಗೆ ದೊಣ್ಣೆ ಸನ್ನೆ

❊ ❊ ❊

ಕೆರೆ ನೀರಿಗೆ ದೊರೆ ಅಪ್ಪಣೆಯೇ ?

❊ ❊ ❊

ಕೋಪದಲ್ಲಿ ಕೂದ ಮೂಗು
ಶಾಂತಿಯಲ್ಲಿ ಬಂದೀತೆ ?

❊ ❊ ❊

ಖಂಡಿತವಾದಿ ಲೋಕ ವಿರೋಧಿ


❊ ❊ ❊


ಖೂನಿ ಮಾಡೋನಿಗೆ ಕತ್ತಲೇನು ಬೆಳಕೇನು ?

❊ ❊ ❊

ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಿದಂತೆ

❊ ❊ ❊





ಗುಡ್ಡಕ್ಕೆ ಕಲ್ಲು ಹೊತ್ತಂತೆ
ಸಮುದ್ರಕೆ ನೀರು ಹೊತ್ತಂತೆ

* * *

ಗಿಣಿ ಸಾಕಿ ಗಿಡುಗನ ಕೈಗೆ ಕೊಟ್ಟಹಾಗೆ !

* * *

ಗಂಗೆಗೆ ಭೇದವಿಲ್ಲ
ಲಿಂಗಕ್ಕೆ ಹೊಲೆಯಿಲ್ಲ !

* * *

ಗಂಡಸಿನ ಕೈಲಿ ಕೂಸಿರಲ್ಲ
ಹೆಂಗಸಿನ ಕೈಲಿ ಕಾಸಿರಲ್ಲ

* * *

ಗೊಂಬೆಗೆ ಕೈ ಮುಗಿದರೂ ನಂಬಿಕೆ ಇರಬೇಕು

* * *

ಚಪ್ಪರಕ್ಕೆ ಗತಿ ಇಲ್ಲದವ ಉಪ್ಪರಿಗೆ ಬೇಡಿದ

* * *

ಚಾಡಿ ಮಾತಿನಿಂದ ಚಾವಡಿ ಹಾಳಾಯ್ತು !

* * *

ಚಿಂತೆ ಮುಪ್ಪು
ಸಂತೋಷ ಹರೆಯ !

* * *



ಛಲವಾದಿ ಸಂಗಡ ಹಠವಾದಿ ಸೇರಿದ ಹಾಗೆ

❊ ❊ ❊

ಜಟ್ಟಿ ಜಾರಿ ಬಿದ್ದರೆ
ಅದೂ ಒಂದು ಪಟ್ಟು

❊ ❊ ❊

ಜನ ನೋಡಿ ಬೇಡಬೇಕು
ಜಾಗ ನೋಡಿ ಉಗಳಬೇಕು

❊ ❊ ❊

ಜಗಲಿ ಹಾರದವ ಗಗನ ಹಾರ್‍ಯಾನೆ ?

❊ ❊ ❊



ಜ್ಯೋತಿ ಇದ್ದಲ್ಲಿ ಭೀತಿ ಇಲ್ಲ

❊ ❊ ❊

ಜಾಣನಿಗೆ ಜಗಳವಿಲ್ಲ
ರಾಗಿ ಉಂಡೋನಿಗೆ ರೋಗವಿಲ್ಲ !

❊ ❊ ❊

ತಗ್ಗಿ ಇದ್ದವ ನಾಳೆ ಎದ್ದು ಬಾಳಿಯಾನು

❊ ❊ ❊

ತಣಿಗೆ ಹೋಯಿತು ಅಂತ
ಚಂಬು ಕೊಟ್ಟು ಕಣಿ ಕೇಳಿದಂಗೆ

❊ ❊ ❊

ತನ್ನ ಬೆನ್ನು ತನಗೆ ಕಾಣದು
ಕನ್ಯೆ ಕನಸ ಅನ್ಯರು ಕಾಣರು ?

❊ ❊ ❊

ತನುವು ಇದ್ದ ಕಡೆ ತಾವರೆ
ಮನವು ಇದ್ದ ಕಡೆ ದೇವರು !


❊ ❊ ❊

ತುಂಬಿದ ಕೆರೆಯನ್ನೂ
ನಂಬಿದ ಮನೆಯನ್ನು ಒಡೆಯಬಾರದು

❊ ❊ ❊

ತಪ್ಪು ಮಾಡದವರಿಲ್ಲ
ತುಪ್ಪ ಉಣ್ಣದವರಿಲ್ಲ

❊ ❊ ❊



ತಾಯಿಗಿಂತ ಬಂಧುವಿಲ್ಲ
ಉಪ್ಪಿಗಿಂತ ರುಚಿ ಇಲ್ಲ

* * *



ತೋಡಿದ ಬಾವಿಗೆ ಜಲವೇ ಸಾಕ್ಷಿ
ಮಾಡಿದ ಪಾಪಕ್ಕೆ ಮನವೇ ಸಾಕ್ಷಿ !

* * *

ದಕ್ಕೀತು ಎಂದು ತಕ್ಕದಲ್ಲದ ಮಾಡಬಾರದು

* * *



ದನದ ಮನಸ್ಸೂ
ದಾಯಾದಿ ಮನಸ್ಸು ಯಾರು ಬಲ್ಲರು ?

* * *

ದಂಡಿನಲ್ಲಿ ಸೋದರ ಮಾವನೆ ?

* * *



ದಾನ ದಾನಕ್ಕಿಂತ ಅನ್ನದಾನ ಮೇಲು

* * *

ದುಡಿತವೇ ದುಡ್ಡಿನ ತಾಯಿ

* * *

ದುರುಳನ ಕಂಡಾಗ ಸುಮ್ಮನೆ ತೆರಳಬೇಕು

* * *

ದೂರದ ಬೆಟ್ಟ ನುಣ್ಣಗೆ !

❊ ❊ ❊

ಧಾನ್ಯ ಹೆಚ್ಚಿದವನಿಗೆ ಮಾನ್ಯ ಬರುವುದು

❊ ❊ ❊

ನಮ್ಮನೆ ರಾಗಿ ಕಲ್ಲು ತಿರುಗಿದರೆ ಊರೆಲ್ಲ ನೆಂಟರು !

❊ ❊ ❊

ನರಕದಲ್ಲಿ ಬಿದ್ದವನಿಗೆ
ಹರಕು ಬಟ್ಟೆಯಾದರೇನು?

❊ ❊ ❊




ನಷ್ಟವಾದರೂ
ಭ್ರಷ್ಟನಾಗಬಾರದು

* * *

ನಾದವಿದ್ದರೆ ಗಂಟೆ
ವಾದವಿದ್ದರೆ ತಂಟೆ

* * *



ನಾಲಗೆ ಚೆನ್ನಾಗಿದ್ದರೆ
ನಾಡೆಲ್ಲ ನೆಂಟ


* * *

ನೀರಲ್ಲಿ ವಾಸ
ಮೊಸಳೆ ಜೊತೆ ದ್ವೇಷ

* * *

ನೆರೆ ನೆಚ್ಚಿ
ತೊರೆ ಹಾಯಬೇಡ

* * *



ನೆಲದಲ್ಲಿ ಉಣ್ಣುವವನ ಸಂಗಡ
ಎಲೆ ಕೇಳಿದ ಹಾಗೆ

* * *

ನೆಲದ ಗುಣ ನೀರಿಗೆ
ನಾಡಿನ ಗುಣ ಜನರಿಗೆ

* * *




ಪಂಚಾಂಗ ಹೋದರೆ
ನಕ್ಷತ್ರ ಹೋಯಿತೆ ?

* * *

ಪಂಜರದಲ್ಲಿ ಕಾಗೆ ಇಟ್ಟರೆ
ಪಂಚಮ ಸ್ವರ ಹಾಡೀತೆ ?

* * *



ಪಿತೂರಿ ಮಾಡುವವನಿಗೆ
ಪಿತೃವೇನು? ಮಾತೃವೇನು?

* * *

ಪುಣ್ಯವಂತ ಮಾಡಿದ್ದೇ ಯಾಗ
ವೈದ್ಯ ಹೇಳಿದ್ದೇ ರೋಗ


* * *

ಪುರಾಣ ಹೇಳಿದರೆ
ಪುಷ್ಪ ಬಿದ್ದಾವೇ ?

* * *

ಪೇಟೆಯಲ್ಲಿರುವವನಿಗೆ
ಬೇಟೆ ಸುದ್ದಿಯಾಕೆ ?

* * *



ಬಡತನ ಬಂದರೂ
ದೊಡ್ಡತನ ಹೋಗಬಾರದು

* * *

ಬತ್ತಿದ ಕೆರೆಯಲ್ಲಿ ಬದನೆ ಹಾಕಿದರೆ
ಕದನಕ್ಕೆ ಮೂಲ

* * *

ಬೈದು ಹೇಳೋರು ಬದುಕೋಕ್ಕೆ ಹೇಳಿದರು
ನಗುತ್ತಾ ಹೇಳೋರು ಕೆಡೋಕ್ಕೆ ಹೇಳಿದರು !

* * *

ಬಲಗಾರ ಬಡವನ್ನ ಕೆಡಿಸಿದ್ರೆ
ಭಗವಂತ ಬಲಗಾರ್ನ ಕೆಡಿಸ್‌ತಾನೆ


* * *

ಬಸಿರೀಲಿ ಗೇದು ಉಣ್ಣು
ಬಾಣಂತೀಲಿ ಕೂತು ಉಣ್ಣು

* * *

ಬಿಕ್ಕಿ ಬಿಕ್ಕಿ ಅತ್ತರೆ
ಬೀಸುವ ಕಲ್ಲು ತಿರುಗೀತೆ ?

* * *



ಬೇಸಾಯ :
ನೀ ಸಾಯ
ನಾ ಸಾಯ
ನಂಬಿದೋರೆಲ್ಲ ಸಾಯ !

* * *

ಮಣದಷ್ಟು ಮಾತಿಗಿಂತ
ಕಣದಷ್ಟು ಕೆಲಸ ಲೇಸು

* * *

ಮನದಲ್ಲಿ ನೆನಿಯೋನಿಗೆ
ಮನೆಯೇನು ಮಠವೇನು?

* * *

ಮಣ್ಣ ಬಿಟ್ಟು ಮಡಕೆ ಇಲ್ಲ
ತನ್ನ ಬಿಟ್ಟು ದೇವರಿಲ್ಲ !

* * *

ಮನೆ ಮುರಿದರೆ ಕಟ್ಟಬಹುದು
ಮನ ಮುರಿದರೆ ಕಟ್ಟಬಹುದೇ?

* * *

ಮಾಡಿದುಣ್ಣೋ ಮಾರಾಯ

* * *

ಮಾತಿಗೆ ಮೊದಲು ಗಾದೆ
ಊಟಕ್ಕೆ ಮೊದಲು ಉಪ್ಪಿನಕಾಯಿ

* * *

ಮಂಜಿನ ಹಿಂದೆ ಮಳೆ
ಗಂಜಿ ಹಿಂದೆ ಅನ್ನ

* * *

ಯಜಮಾನನಿಲ್ಲದ ಮನೆ
ಮೇಟಿಯಿಲ್ಲದ ಕಣ ಒಂದೇ !

* * *

ಯಾರೂ ಇಲ್ಲದ ಊರಿಗೆ ಹೋಗಿ
ಮಜ್ಜಿಗೆ ಬಯಸಿದಂತೆ


* * *


ಯುಕ್ತಿಯ ಮಾತು
ಮಕ್ಕಳಿಂದಾದರೂ ತಿಳಿದುಕೋ

* * *

ರಾಮ ರಾಜ್ಯ ಆಳಿದರೂ
ರಾಗಿ ಬೀಸೋದು ತಪ್ಪಲ್ಲ

* * *






ರಟ್ಟೆ ಮುರಿದು ರೊಟ್ಟಿ ತಿನ್ನು

* * *

ಕಟ್ಟೆ ಹಾಕಿ ಅನ್ನ ಉಣ್ಣು

* * *

ರೋಹಿಣಿ ಮಳೇಲಿ
ಓಣೆಲ್ಲ ಜೋಳ

* * *

ಲೋಕ ತಿಳೀಬೇಕು
ಲೆಕ್ಕ ಕಲೀಬೇಕು

* * *

ವ್ಯಾಪಾರಕ್ಕೆ ನಿಮಿಷ
ಬೇಸಾಯಕ್ಕೆ ವರುಷ

* * *

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು

* * *

ಶಂಖದ ಹಿಂದೆ ಜಾಗಟೆ
ತೀರ್ಥದ ಹಿಂದೆ ಪ್ರಸಾದ

* * *

ಸತ್ತವರಿಗೆ ಸಂಗವಿಲ್ಲ
ಕೆಟ್ಟವರಿಗೆ ನಂಟರಿಲ್ಲ

❊ ❊ ❊

ಸತ್ಯಕ್ಕೆ ಸಾವಿಲ್ಲ
ಸುಳ್ಳಿಗೆ ಸುಖವಿಲ್ಲ

❊ ❊ ❊

ಸಂತೆ ಬಂತು ಅಂದರೆ
ಬಡವರಿಗೆ ಚಿಂತೆ

❊ ❊ ❊

ಸಾಯದ ಮನೆಯಿಲ್ಲ
ಬೇಯದ ಕಾಳಿಲ್ಲ

❊ ❊ ❊

ಹಣ್ಣು ತಿಂದವನು ತಪ್ಪಿಸಿಕೊಂಡ
ಸಿಪ್ಪೆ ತಿಂದವನು ಸಿಕ್ಕಿಕೊಂಡ !


❊ ❊ ❊

ಹಾಸಿಗೆ ಇದ್ದಷ್ಟು ಕಾಲು ಚಾಚು
ಕಾವಲಿ ಇದ್ದಷ್ಟು ದೋಸೆ ಬಿಡು

❊ ❊ ❊

ಹೆಣ್ಣುಮಕ್ಕಳು ಇದ್ದ ಮನೆ
ಕನ್ನಡಿಯಂತೆ.

❊ ❊ ❊





# ಜನಪದ ಕಥೆಗಳು








## ಒಟ್ಟಿಗೆ ಬಾಳುವ ಆನಂದ

ಒಂದು ಹಳ್ಳಿ. ಅಲ್ಲಿ ರೈತನೊಬ್ಬನ ಹೊಲ ಇತ್ತು. ಅಲ್ಲಿ ಒಂದು ಬೇವಿನ ಮರವಿತ್ತು. ಹೇಗೋ ಏನೋ ಅದರ ಕೆಳಗೆ ಒಂದು ಗುಂಡನೆಯ ಕಲ್ಲು ಬಂದು ನಿಂತುಕೊಂಡಿತು. ಮರದ ಮೇಲೆ ಕುಳಿತುಕೊಳ್ಳುತ್ತಿದ್ದ ಹಕ್ಕಿಗಳ ಹಿಕ್ಕೆ ಕಲ್ಲಿನ ಮೇಲೆ ಬಿದ್ದು ಬಿದ್ದು, ಆ ಕಲ್ಲು ಬೆಳ್ಳಗಾಗಿ, ವಿಭೂತಿ ಬಳಿದಂತೆ ಕಾಣಿಸುತ್ತಿತ್ತು.

ಇದರಿಂದಗಾಗಿ ಆ ಬಿಳಿಯ ಕಲ್ಲು ಎಲ್ಲರಿಗೂ ಅಮ್ಮನ ಕಲ್ಲಿನಂತೆ ಕಾಣಿಸುತ್ತಿತ್ತು. ಆದ್ದರಿಂದ, ಬೇವಿನ ಮರವನ್ನು ಜನ "ಅಮ್ಮನ ಮರ" ಎಂದು ಕರೆಯುತ್ತಿದ್ದರು. ಆ ಕಲ್ಲು ಬೇವಿನ ಮರದ ಕೆಳಗಿದ್ದುದರಿಂದ ಅದಕ್ಕೆ "ಅಮ್ಮನ ಕಲ್ಲು" ಎಂಬ ಹೆಸರು ರೂಢಿಗೆ ಬಂದಿತ್ತು. ಹೀಗೆ ಒಂದರಿಂದ ಇನ್ನೊಂದು ಹೆಸರು ಪಡೆದುಕೊಂಡು ಎರಡೂ ಸುಖವಾಗಿದ್ದವು. "ಅಮ್ಮನ ಮರ", "ಅಮ್ಮನ ಕಲ್ಲು" ಎಂದು ಊರಿನ ಜನಗಳು ಅವುಗಳ ತಂಟೆಗೆ ಹೋಗುತ್ತಿರಲಿಲ್ಲ.

ಒಂದು ಸಲ, ತನ್ನಿಂದ ಇನ್ನೊಂದು ಸುಖವಾಗಿದೆ ಎಂದು ಎರಡಕ್ಕೂ ಜಂಬ ಬಂತು. ಬೇವಿನ ಮರ -"ನಾನು ಅಮ್ಮನ ಮರ, ನೀನು ನನ್ನ ಕೆಳಗಿರುವುದರಿಂದ ನಿನ್ನನ್ನು ಅಮ್ಮನ ಕಲ್ಲು ಎಂದು ಜನ ಕರೆಯುತ್ತಾರೆ" ಎಂದು ಹೇಳಿತು. ಅದಕ್ಕೆ ಕಲ್ಲು "ನಾನು ಅಮ್ಮನ ಕಲ್ಲು, ನನ್ನ ಪಕ್ಕದಲ್ಲಿ ನೀನಿರುವುದರಿಂದ ನಿನ್ನನ್ನು ಅಮ್ಮನ ಮರ ಎಂದು ಕರೆಯುತ್ತಾರೆ" ಎಂದಿತು. ಹೀಗೆ ಎರಡೂ ಜಗಳ ಮಾಡಿದವು. ಕೊನೆಗೆ ಕಲ್ಲು ಕೋಪದಿಂದ ಉರುಳಿ ಉರುಳಿ ಬೇವಿನ ಮರದಿಂದ ದೂರ ಹೋಗಿ



ನಿಂತಿತು. 'ನಾನಿಲ್ಲದಿದ್ದರೆ ಮರವನ್ನು ಕಡಿದುಹಾಕುತ್ತಾರೆ' ಎಂದು ಕಲ್ಲು, 'ನನ್ನ ಕೆಳಗಿರದಿದ್ದರೆ ಕಲ್ಲನ್ನು ಒಡೆದು ಹಾಕುತ್ತಾರೆ' ಎಂದು ಮರ–ಹೀಗೆ ಎರಡೂ ತಮ್ಮೊಳಗೆ ಆಲೋಚಿಸುತ್ತಿದ್ದವು.

ಒಂದು ದಿನ ಹೊಲವನ್ನು ಉಳಲಿಕ್ಕೆ ಆ ಹಳ್ಳಿಯ ರೈತ ತನ್ನ ಮಕ್ಕಳ ಜೊತೆ ಬಂದ. ಅಮ್ಮನ ಕಲ್ಲು ಇಲ್ಲದ ಆ ಬೇವಿನ ಮರವನ್ನು ನೋಡಿ-"ಇದನ್ನು ನಾಳೆ ಕಡಿಸಿ, ನೇಗಿಲು, ಚಕ್ರ ಮಾಡಿಸಿ" ಎಂದು ತನ್ನ ಮಕ್ಕಳಿಗೆ ಹೇಳಿದ. ಬೇವಿನ ಮರದಿಂದ ದೂರ ಬಿದ್ದಿದ್ದ ಕಲ್ಲನ್ನು ನೋಡಿ– "ಇದನ್ನು ನಾಳೆ ಒಡ್ಡರಿಂದ ಒಡೆಸಿದರೆ, ನೇಗಿಲಿಗೆ ಕಟ್ಟಿ ಉಳಲು ಬರುತ್ತದೆ" ಎಂದು ತನ್ನ ಮಕ್ಕಳಿಗೆ ಹೇಳಿದ. ಇದನ್ನು ಕೇಳಿ ಮರ ಮತ್ತು ಕಲ್ಲು ಎರಡೂ ಭಯದಿಂದ ನಡುಗಿದವು. ನಾವಿಬ್ಬರೂ ಒಬ್ಬರಿಂದ ಒಬ್ಬರು ದೂರವಾಗಿದ್ದರೆ ಜನರು ನಮ್ಮಿಬ್ಬರನ್ನು ನಾಶಮಾಡುತ್ತಾರೆ. ಆದ್ದರಿಂದ ನಾವಿಬ್ಬರೂ ಉಳಿಯುವುದಿಲ್ಲ ಎಂಬ ತಿಳುವಳಿಕೆ ಮರ ಮತ್ತು ಕಲ್ಲಿಗೆ ಬಂದಿತು. ರೈತ ಮತ್ತು ರೈತನ ಮಕ್ಕಳು ಅತ್ತ ಹೋಗುವುದನ್ನೇ ಕಾದಿದ್ದು, ಕಲ್ಲು "ಬರಲಾ" ಎಂದು ಬೇವಿನ ಮರವನ್ನು ಕೇಳಿತು. ಮರ "ಬೇಗ ಬಾ" ಎಂದು ಕಲ್ಲಿಗೆ ಹೇಳಿತು. ತಾನು ಇನ್ನೊಂದರಿಂದ ಸುಖವಾಗಿರುವುದು ಎಂದು ಈಗ ಎರಡಕ್ಕೂ ತಿಳಿಯಿತು. ಬೇವಿನ ಮರ ಮತ್ತು ಕಲ್ಲು ಮತ್ತೆ ಸ್ನೇಹಿತರಾದವು.

ಮಾರನೆಯ ದಿನ ಬಡಗಿಗಳು ಬಂದು ನೋಡಿದರು. ಕಲ್ಲು ಮರದ ಕೆಳಗೆ ಮೊದಲಿನಂತೆ ನಿಂತಿತ್ತು. ಅವರಿಗೆ ಮರ ಮತ್ತು ಕಲ್ಲಿನ ಬಗೆಗೆ ಭಯ-ಭಕ್ತಿ ಉಂಟಾಯಿತು. "ಇದು ಅಮ್ಮನ ಮರ, ಕಡಿಯುವುದು ಬೇಡ" ಎಂದು ಹೊರಟು ಹೋದರು. ಒಡ್ಡರು ಬಂದು "ಇದು ಅಮ್ಮನ ಕಲ್ಲು, ಒಡೆಯುವುದು ಬೇಡ" ಎಂದು ಅವರೂ ಹೊರಟು ಹೋದರು.

ಬೇವಿನ ಮರ ಮತ್ತು ಕಲ್ಲು ಕಂಟಕದಿಂದ ಪಾರಾಗಿದ್ದವು. ಈಗ ಎರಡೂ ಯಾರ ಭಯವಿಲ್ಲದೆ ಸುಖವಾಗಿದ್ದವು.

ಹೀಗೆ ಎಲ್ಲರೂ ಒಟ್ಟಾಗಿ ಬಾಳಿದರೆ, ಎಲ್ಲರೂ ಸುಖವಾಗಿ ಇರಬಹುದು.

○



## ನಾಮದ ಮಹಿಮೆ !

ಒಂದೂರಿನಲ್ಲಿ ಒಬ್ಬನಿದ್ದ. ಅವನು ತುಂಬಾ ಬಡವ. ಅವನ ಬಡತನ ದಿನದಿನಕ್ಕೆ ಹೆಚ್ಚಾಯಿತು. ಒಂದು ದಿನ ಆ ಊರಿಗೆ ಒಬ್ಬ ದಾಸರು ಹರಿಕಥೆ ಮಾಡಲು ಬಂದರು. ಬಡವ ಹರಿಕಥೆ ಕೇಳಿ, ಬೆಳಿಗ್ಗೆ ದಾಸರ ಬಳಿಗೆ ಹೋದ.

"ಸ್ವಾಮಿ ನನ್ನ ಬಡತನ ಹೋಗುವ ಹಾಗೆ ಒಂದು ಉಪಾಯ ಹೇಳಿ" ಎಂದ. ಆಗ ದಾಸರು "ನೀನು ದಿನಕ್ಕೆ ಎಷ್ಟು ಸಲ ದೇವರನ್ನು ನೆನೆಯುತ್ತೀಯಾ ?" ಎಂದು ಕೇಳಿದರು.

"ಎಷ್ಟು ಸಾರಿಯೂ ಇಲ್ಲ ಸ್ವಾಮಿ" ಅಂದ ಬಡವ.

"ಹಾಗಾದರೆ ಒಂದು ಕೆಲಸ ಮಾಡು. ದಿನಕ್ಕೊಂದು ಸಾರಿ ಹಣ್ಣು-ಕಾಯಿ, ಗಂಧದ ಕಡ್ಡಿ, ಕರ್ಪೂರ ತೆಗೆದುಕೊಂಡು ನಿಮ್ಮ ಊರಿನ ದೇವಸ್ಥಾನದಲ್ಲಿ-ಪೂಜೆ ಮಾಡಿಸು" ಎಂದು ದಾಸರು ಅವನಿಗೆ ಹೇಳಿದರು. ಆಗ ಬಡವ, "ಸ್ವಾಮಿ ಇದರಿಂದ

ದಿನಕ್ಕೆ ಹೆಚ್ಚು ದುಡ್ಡು ಖರ್ಚಾಗುತ್ತದೆ. ಆದ್ದರಿಂದ ಸುಲಭವಾದ ಕೆಲಸ ಹೇಳಿ" ಅಂದ. "ಹಾಗಾದರೆ ದಿನವೂ ದೇವಸ್ಥಾನಕ್ಕೆ ಹೋಗಿ ದೇವರ ಮುಖ ನೋಡಿಕೊಂಡು ಬಾ" ಎಂದರು ದಾಸರು. ಬಡವನಿಗೆ ಅದೂ ಕಷ್ಟವಾಗಿ ಕಂಡಿತು.

"ಏನು ಸ್ವಾಮಿ, ಹೊಲದಲ್ಲಿ ಆರು ಕಟ್ಟುವುದನ್ನು ಬಿಟ್ಟು ದಿನ ದೇವಸ್ಥಾನಕ್ಕೆ ಹೋಗಲೆ! ಅದು ಸಾಧ್ಯವಿಲ್ಲ" ಅಂದ. ಆಗ ದಾಸರು, "ಒಂದು ಕೆಲಸ ಮಾಡು, ನಿಮ್ಮ ಊರಿನಲ್ಲಿ ಯಾರಾದರೂ ನಾಮ ಇಡುವವರು ಇದ್ದಾರೆಯೇ?" ಎಂದು ಕೇಳಿದರು.

"ಇದ್ದಾರೆ" ಎಂದ ಬಡವ.

"ಹಾಗಾದರೆ ದಿನ ಬೆಳಗ್ಗೆ ಎದ್ದು ಅವನ ಹಣೆ ಮೇಲಿನ ನಾಮ ನೋಡು" ಎಂದರು.

"ನೋಡಿ ಸ್ವಾಮಿ, ಅದು ಬೇಕಾದರೆ ಮಾಡುತ್ತೇನೆ!" ಎಂದು ಬಡವ ಹಿಗ್ಗಿನಿಂದ ನುಡಿದ. "ನಮ್ಮ ಮನೆ ಎದುರಿಗೆ ಒಬ್ಬ ಕುಂಬಾರರ ಮುದುಕ ಇದ್ದಾನೆ. ನಾನು ಏಳುವ ಹೊತ್ತಿಗೆ ಅವನು ಹಣೆಯಲ್ಲಿ ನಾಮ ಹಾಕಿಕೊಂಡು ಬಾಗಿಲಲ್ಲಿ ಕುಳಿತಿರುತ್ತಾನೆ; ಇನ್ನು ಮೇಲೆ ನಾನು ದಿನವೂ ಬೆಳಗ್ಗೆ ಅವನ ಹಣೆಯ ಮೇಲಿನ ನಾಮ ನೋಡುತ್ತೇನೆ"ಎಂದು ಹೇಳಿದ.

ಬಡವ ಅಂದಿನಿಂದ ತಪ್ಪದೇ ಕುಂಬಾರ ಮುದುಕನ ನಾಮ ನೋಡಿ ಹೊಲದ ಕೆಲಸಕ್ಕೆ ಹೋಗುತ್ತಿದ್ದ. ಹೀಗೆಯೇ ಕೆಲವು ತಿಂಗಳು ಕಳೆಯಿತು. ಒಂದು ದಿನ ಆ ನಾಮದ ಮುದುಕ ಮುಂಜಾನೆ ಬೇಗ ಎದ್ದು, ಮಡಕೆ ಮಾಡಲು ಮಣ್ಣು ತರುವುದಕ್ಕೆ ತನ್ನ ಮಗನೊಂದಿಗೆ ಕೆರೆಗೆ ಹೋದ. ಎಂದಿನಂತೆ ಎದ್ದು ಬಂದ ಬಡವನು ಮನೆಯ ಮುಂದೆ ಮುದುಕನನ್ನು ಕಾಣದೆ ನಿರಾಶನಾದ. "ಅಜ್ಜಾ" ಎಂದು ಅವರ ಮನೆಗೆ ಹೋಗಿ ಕೂಗಿದ. ಅಜ್ಜ ಎಲ್ಲೂ ಕಾಣಲಿಲ್ಲ. ಅಜ್ಜ ಮಣ್ಣು ತರಲು ಕೆರೆಗೆ ಹೋದ ವಿಷಯವನ್ನು ತಿಳಿದುಕೊಂಡ. ಬಡವ ನಿಯಮ ತಪ್ಪದಂತೆ ಕುಂಬಾರ ಮುದುಕನ ನಾಮವನ್ನು ನೋಡಲು ಕೆರೆಯ ಕಡೆಯೇ ಹೋದ.




ಕೆರೆಯಲ್ಲಿ ಮುದುಕ ಮಣ್ಣನ್ನು ಅಗೆಯುತ್ತಿದ್ದ. ಅಗೆಯುವಾಗ ಅಜ್ಜನಿಗೆ ಕೆರೆಯಲ್ಲಿ ಮೂರು ಬಿಂದಿಗೆ ಹಣ ಸಿಕ್ಕಿತು. ಹಣ ನೋಡಿ ಅವನಿಗೆ ಸಂತೋಷವಾಯಿತು. ಮುದುಕ ತನ್ನ ಮಗನಿಗೆ, "ಮಗ, ಮೂರು ಬಿಂದಿಗೆಗಳನ್ನು ಮೇಲಕ್ಕೆ ಎತ್ತೋ, ಇಷ್ಟು ಹೊತ್ತಿನಲ್ಲಿ ಯಾರೂ ನೋಡುವುದಿಲ್ಲ. ಯಾರಿಗೂ ತಿಳಿಯದ ಹಾಗೆ ಬೇಗ ಬೇಗ ಬಿಂದಿಗೆಗಳನ್ನು ಮನೆಗೆ ಸಾಗಿಸೋಣ" ಎಂದ. ಮಗ

ಬಿಂದಿಗೆಯನ್ನು ಬೇಗನೆ ಮೇಲಕ್ಕೆ ಎತ್ತಲು ಮುಂದಾದ. ಅದೇ ವೇಳೆಗೆ ಏರಿಯನ್ನು ಹತ್ತಿ ಬಡವನೂ ಅಲ್ಲಿಗೆ ಬಂದ. ಮುದುಕನಿಗೆ ಬಿಂದಿಗೆಯಲ್ಲಿ ಹಣ ಸಿಕ್ಕಿರುವುದು ಅವನಿಗೆ ಗೊತ್ತಿರಲಿಲ್ಲ. ಮುದುಕನನ್ನು ಕಂಡಕೂಡಲೇ ಅವನಿಗೆ ಆನಂದವಾಯಿತು. ಕೊನೆಗೂ ನಾಮವನ್ನು ನೋಡಿದೆನಲ್ಲಾ ಎನ್ನುವ ಸಂತೋಷದಲ್ಲಿ, "ನೋಡಿದೆ!" ಎಂದು ಜೋರಾಗಿ ಕೂಗಿದ. ಮುದುಕ ಮತ್ತು ಅವನ ಮಗ ಇಬ್ಬರೂ ಬೆಚ್ಚಿದರು. ತಮ್ಮ ಗುಟ್ಟು ಬಯಲಾಯಿತು ಎಂದು ಹೆದರಿ, "ಸ್ವಲ್ಪ ಬಾರಪ್ಪ ಇಲ್ಲಿ, ನಿನಗೊಂದು ಮಾತನ್ನು ಹೇಳುತ್ತೀನಿ!" ಎಂದು ಮುದುಕ ಕೂಗಿದ. "ಇಲ್ಲ ಇಲ್ಲ ಬಿಡಯ್ಯ, ಮೂರನ್ನೂ ನೋಡಿಕೊಂಡೆ" ಎಂದು ಬಡವ ನಿಂತಕಡೆಯಲ್ಲೇ ಉತ್ತರಿಸಿದ. ಮುದುಕನಿಗೆ ಇನ್ನೂ ಭಯವಾಯಿತು.! ಬಡವನ ಬಳಿಗೆ ಓಡಿಹೋಗಿ, "ಯಾರಿಗೂ ಹೇಳಬೇಡ, ನಮಗೆ ಸಿಕ್ಕಿರುವ ಹಣದಲ್ಲಿ ನಿನಗೂ ಅರ್ಧ ಕೊಡುತ್ತೇವೆ" ಎಂದು ಬೇಡಿದ. ಬಡವನಿಗೆ ಅರ್ಥವಾಗಲಿಲ್ಲ. ಕೊನೆಗೆ ಮುದುಕನಿಂದ ತನಗೆ ಅರ್ಧ ಹಣ ಸಿಕ್ಕಿದಮೇಲೆ "ಎಲ್ಲಾ ನಾಮದ ಮಹಿಮೆ!" ಎಂದುಕೊಂಡ.

ಅಷ್ಟೂ ಹಣವನ್ನೂ ತಂದು ತನ್ನ ಹೆಂಡತಿಗೆ ಕೊಟ್ಟ. "ಬರಿಯ ನಾಮ ನೋಡಿದ್ದಕ್ಕೇ ಇಷ್ಟೊಂದು ಹಣ ಸಿಕ್ಕಿತು ; ನಿಜವಾಗಿ ದೇವರ ಪೂಜೆಯನ್ನೇ ಮಾಡಿದರೆ ಇನ್ನೆಷ್ಟು ಸಿಕ್ಕುತ್ತದೊ!" ಎಂದು ಅಂದಿನಿಂದ ನಿತ್ಯ ದೇವರಿಗೆ ಪೂಜೆ ಮಾಡುವುದನ್ನು ಆರಂಭಿಸಿದ. ಸಿಕ್ಕ ಹಣದಲ್ಲಿ ಅವರು ಸುಖವಾಗಿ ಇದ್ದರು.

○





## ಕೋತಿ ತಂದ ಭಾಗ್ಯ

ಒಂದು ಊರಿನಲ್ಲಿ ಲಿಂಗಕ್ಕ ಅಂತ ಒಬ್ಬ ಹೆಂಗಸಿದ್ದಳು. ಆ ದಿನ ಸೋಮವಾರ ಊರಿನಲ್ಲಿ ಸಂತೆ ಇತ್ತು. ಅದೇ ಊರಿನ ರಂಗಕ್ಕನ ಜೊತೆಯಲ್ಲಿ ಲಿಂಗಕ್ಕ ಕುಕ್ಕೆಯನ್ನು ಹೊತ್ತುಕೊಂಡು ಸಂತೆಗೆ ಹೊರಟಳು. ದಾರಿಯಲ್ಲಿ ಒಬ್ಬ ಕೋತಿ ಆಡಿಸುವವನು ಸಿಕ್ಕ. ಲಿಂಗಕ್ಕ ಆತನಿಗೆ ಕೇಳಿಸದಂತೆ, "ಯಕ್ಕ, ಇವನ ಸುಳಿಹಾಳಾಗ, ನಮ್ಮ ಊರಿಗೆ ಇವನು ಎಲ್ಲಿಹೋಗುತ್ತಾನೋ ಕಣವ್ವ!" ಎಂದಳು.

"ಯಾಕೆ ?" ಎಂದಳು ರಂಗಕ್ಕ. "ಅಲ್ಲ, ನಮ್ಮ ಪುಟ್ಟಿ ಮನೇಲಿ ಒಬ್ಬಳೇ ಇದ್ದಾಳೆ. ಹಿಟ್ಟಿನ ಮಡಕೆಯಲ್ಲಿ ಮೂರು ಮುದ್ದೆ ಹಿಟ್ಟು ಇಟ್ಟಿದ್ದೀನಿ. ಅಸೀಕಲ್ಲಿನ ಕೆಳಗೆ ಒಂದು ಕುಡುಕೆ ಹೊನ್ನು ಇಟ್ಟಿದ್ದೇನೆ. ಏನಾದರೂ ಮಾಡಿ ಕದ್ದಾನು" ಎಂದಳು. "ಅಯ್ಯೋ ನಡಿ, ನಮ್ಮೂರು ಅವನಿಗೇನು ಗೊತ್ತು!" ಎಂದು ರಂಗಕ್ಕ ಸಮಾಧಾನ ಹೇಳಿದಳು. ಇಬ್ಬರೂ ಮುಂದೆ ಹೋದರು.

ಕೋತಿ ಆಡಿಸುವವನು ಇವರಿಬ್ಬರ ಮಾತನ್ನು ಹೇಗೋ ಕೇಳಿಸಿಕೊಂಡ. ಲಿಂಗಕ್ಕನ ಮನೆಯನ್ನು ಹುಡುಕಿಕೊಂಡು ಬಂದ. ಅಲ್ಲಿ ಕೋತಿಯನ್ನು ಕುಣಿಸಿದ. ಕೋತಿ ಆಟವನ್ನು ನೋಡಲು ಊರಿನ ಮಕ್ಕಳೆಲ್ಲಾ ಬಂದವು. ಲಿಂಗಕ್ಕನ ಮಗಳು ಪುಟ್ಟಿಯೂ ಅಲ್ಲಿಗೆ ಬಂದು ನಿಂತಳು. ಆಟವೆಲ್ಲಾ ಆದಮೇಲೆ ಕೋತಿಯವನು "ಲಿಂಗಕ್ಕನ ಮನೆ ಎಲ್ಲಿ? ಎಂದು ಅಲ್ಲಿ ನಿಂತಿದ್ದವರನ್ನು ಕೇಳಿಕೊಂಡು ಬಂದ. ಪುಟ್ಟಿ ಮನೆ ಬಾಗಿಲಲ್ಲೇ ನಿಂತಿದ್ದಳು. "ಲಿಂಗಕ್ಕನ ಮಗಳು ಪುಟ್ಟಿ ನೀನೆ ಏನವ್ವ?" ಎಂದು ಕೋತಿ ಆಡಿಸುವವನು ಕೇಳಿದ. "ಯಾಕಯ್ಯಾ ?" ಎಂದಳು ಪುಟ್ಟಿ. "ನೋಡವ್ವ, ಸಂತೆಗೆ ಹೋಗೋ ದಾರೀಲಿ ನಿಮ್ಮವ್ವ ಸಿಕ್ಕಿದ್ದಳು. ಮಡಕೆಯಲ್ಲಿ ಮೂರು ಮುದ್ದೆ ಹಿಟ್ಟು ಇಟ್ಟವಳಂತೆ, ಅಸಿಕಲ್ಲು ಕೆಳಗೆ ಒಂದು ಕುಡಿಕೆ ಹೊನ್ನು ಇದೆಯಂತೆ. ಕುಡಿಕೆ ಹೊನ್ನನ್ನು ತೆಗೆದುಕೊಂಡು, ಈ ಕೋತಿಯನ್ನು ಪುಟ್ಟಿಗೆ ಕೊಟ್ಟು ಬಾ ಎಂದಳು" ಎಂದ. ಪುಟ್ಟಿ ಅವನ ಮಾತನ್ನು ನಿಜ ಎಂದು ನಂಬಿ ಮೂರು ಮುದ್ದೆ ಹಿಟ್ಟನ್ನೂ, ಒಂದು ಕುಡಿಕೆ ಹೊನ್ನನ್ನೂ ಅವನಿಗೆ ಕೊಟ್ಟು ಕೋತಿಯನ್ನು ಹಿಡಿದುಕೊಂಡಳು. ಕೋತಿಯನ್ನು ಮನೆಯಲ್ಲಿ ರಾಗಿಕಲ್ಲು ಗೂಟಕ್ಕೆ ಕಟ್ಟಿದಳು.

ಸಂಜೆಯಾಯಿತು : ಲಿಂಗಕ್ಕ ಸಂತೆಯಿಂದ ಬಂದಳು. ರಾಗಿಕಲ್ಲಿಗೆ ಕಟ್ಟಿದ್ದ ಕೋತಿಯನ್ನು ನೋಡಿದಳು. ಏಕೋ ಅನುಮಾನವಾಯಿತು. ಪುಟ್ಟಿಯನ್ನು ಕರೆದು ಕೇಳಿದಳು. ಪುಟ್ಟಿ "ನೀನೇ ಹೇಳಿ ಕಳುಹಿಸಿದ್ದೆ, ಮೂರು ಮುದ್ದೆ ಹಿಟ್ಟು, ಒಂದು ಕುಡಿಕೆ ಹೊನ್ನು ಕೊಟ್ಟು ಕೋತಿಯನ್ನು ಕೊಂಡುಕೋ ಅಂತ ನೀನೆ ಹೇಳಿ ಕಳುಹಿಸಿದ್ದೆ. ಅದಕ್ಕೆ ಕೊಂಡುಕೊಂಡಿದ್ದೇನೆ" ಎಂದಳು. ಲಿಂಗಕ್ಕನಿಗೆ ಸಿಟ್ಟು ಬಂತು !"ಮುದ್ದೆ ಹೋದರೂ ಹೋಗಲಿ, ಹೊನ್ನೂ ಹೋಯಿತು!" ಎಂದು ಸಂಕಟಪಟ್ಟಳು. ಮಗಳನ್ನು ಹಿಡಿದು ಹೊಡೆದಳು. ರಾತ್ರಿಯೆಲ್ಲಾ ಪುಟ್ಟಿಯನ್ನು ಉಪವಾಸ ಇರಿಸಿದಳು.

ಮರುದಿನ ಪುಟ್ಟಿ ತನ್ನ ಜೊತೆಯ ಹುಡುಗಿಯರೊಡನೆ ಸಗಣಿತೊಪ್ಪೆ ಎತ್ತಲು ಹೊರಟಳು. ಕೋತಿ, "ಅಕ್ಕಾ ನಾನೂ ಬರುತ್ತೇನೆ ತೊಪ್ಪೆ ಎತ್ತೋಕೆ" ಎಂದಿತು. ಪುಟ್ಟಿಗೆ ಇನ್ನೂ ಸಿಟ್ಟು ಹೋಗಿರಲಿಲ್ಲ. ಕೋತಿಯನ್ನೇ ಬೈದಳು. ಆಗ ಲಿಂಗಕ್ಕನೂ ಹೊರಗೆ ಬಂದು, "ನಿನ್ನ ತೊಪ್ಪೆಯೂ ಬೇಡ, ಏನೂ ಬೇಡ, ನಮ್ಮ ಮನೆ ಬಿಟ್ಟು ಹೊರಟುಹೋಗು" ಎಂದು ಕೋತಿಯನ್ನು ಬಿಚ್ಚಿಬಿಟ್ಟಳು. ಆಗ ಕೋತಿ ತಾನೂ ಒಂದು ಮಂಕರಿ ತೆಗೆದುಕೊಂಡು ಹೊರಟಿತು. ಹುಡುಗಿಯರೆಲ್ಲಾ ಒಂದು ಕಡೆ ಹೋದರೆ, ಕೋತಿ ಇನ್ನೊಂದು ಕಡೆಗೆ ಹೋಯಿತು. ಅಲ್ಲೊಂದು ಗುಡ್ಡ ಇತ್ತು. ಅದರಲ್ಲಿ ಒಂದು ಗುಹೆ. ಆ ಗುಹೆಯಲ್ಲಿ ಒಬ್ಬ ಕಳ್ಳ ವಾಸವಾಗಿದ್ದ. ತಾನು ಕದ್ದು ತಂದ ಹಣವನ್ನೆಲ್ಲಾ ಅಲ್ಲಿ ರಾಶಿ ಹಾಕಿದ್ದ. ಕೋತಿ ಬೆಟ್ಟದ ಮೇಲೆಲ್ಲಾ ಆಡಿಕೊಂಡು ಆ ಗುಹೆ ಹತ್ತಿರ ಬಂದಿತು. ಕಳ್ಳ ಎಲ್ಲೋ ಹೊರಗೆ ಹೋಗಿದ್ದ. ಅಲ್ಲಿ ರಾಶಿ ಬಿದ್ದಿದ್ದ ಹಣದಲ್ಲಿ ಸ್ವಲ್ಪವನ್ನು ಮಂಕರಿಗೆ ತುಂಬಿಕೊಂಡಿತು. ಅದನ್ನು ತಲೆಮೇಲೆ ಹೊತ್ತುಕೊಂಡು ಮನೆಕಡೆ ಹೊರಟಿತು. ಪುಟ್ಟಿ ಮೊದಲೇ ಮನೆಗೆ ಬಂದಿದ್ದಳು. ಲಿಂಗಕ್ಕ "ಎಲ್ಲೇ ಆ ಸುಳಿಹಾಳಾದ ಕೋತಿ!" ಎಂದು ಕೇಳಿದಳು. "ಆ ಗುಡ್ಡದ ಮೇಲೆ ನೆಗೆದಾಡುತ್ತಿತ್ತು!" ಎಂದಳು ಪುಟ್ಟಿ.

"ಬರಲಿ ತಾಳು, ಚೆನ್ನಾಗಿ ಬಾರಿಸ್ತೀನಿ" ಎಂದು ಕದವನ್ನು ಬಿಗಿಯಾಗಿ ಹಾಕಿದಳು ಲಿಂಗಕ್ಕ. ಕೋತಿ ಮಂಕರಿಯಲ್ಲಿ ಹಣವನ್ನು ಹೊತ್ತುಕೊಂಡು ಮನೆಗೆ ಬಂದಿತು. ಬಾಗಿಲು ಮುಚ್ಚಿತ್ತು. "ಯಮ್ಮಾ ಕದ ತೆಗಿಯೇ, ಕದ ತೆಗಿಯೇ" ಎಂದು ಕೂಗಿತು. ಲಿಂಗಕ್ಕ "ತೆಗೀತೀನಿ ತಾಳು, ನಿನ್ನ ಹೂಣ್ತೇನಿ" ಎಂದು ಅಬ್ಬರಿಸಿದಳು. ಕೋತಿ ಹಣದ ಮಕ್ಕರಿಯ ಭಾರವನ್ನು ತಾಳಲಾರದೆ ದೊಪ್ಪನೆ ಕೆಳಗೆ ಹಾಕಿತು. ದುಡ್ಡೆಲ್ಲಾ ಲೊಳ್ಳೆಂದು ನೆಲದ ಮೇಲೆ ಚೆಲ್ಲಿಕೊಂಡಿತು. ದುಡ್ಡು ಚೆಲ್ಲಿದ ಶಬ್ದ ಕೇಳಿ ಲಿಂಗಕ್ಕನ ಕಿವಿ ನೆಟ್ಟಗಾಯಿತು. ಬಾಗಿಲನ್ನು ತೆರೆದು ನೋಡುತ್ತಾಳೆ! ನೆಲದ ಮೇಲೆ ದುಡ್ಡು ಇಟ್ಟಾಡಿದೆ! ಅವಳಿಗೆ ಸಂತೋಷವಾಯಿತು. "ಯವ್ವೀ ನನ್ನ ಕಂದ ದುಡ್ಡು ಎಲ್ಲಿಂದ ತಂದಪ್ಪ? ಪುಟ್ಟಿ, ಬೇಗ-ಬೇಗ ಬಾಚಿಕೊಳ್ಳೇ, ರಂಗಕ್ಕ ನೋಡಿದರೆ ಬಿಡ್ತಾಳಾ!" ಎಂದು ಎಲ್ಲವನ್ನೂ ಬಾಚಿ ತುಂಬಿಕೊಂಡಳು. ಕೋತಿಗೆ ಚೆನ್ನಾಗಿ ಊಟ ಕೊಟ್ಟು, ಮೈಕೈ ಸವರಿ "ನನ್ನ ಮುದ್ದು ಮಗನೇ, ದುಡ್ಡು ಎಲ್ಲಿಂದ ತಂದಪ್ಪ?"

ಎಂದು ಕೇಳಿದಳು. "ಬೆಳಿಗ್ಗೆ ತೋರಿಸುತ್ತೀನಿ ಸುಮ್ಮನೇ ಇರಮ್ಮ, ಅಲ್ಲಿ ದುಡ್ಡು ಇನ್ನೂ ಬೇಕಾದಷ್ಟು ರಾಶಿ ಇದೆ" ಎಂದಿತು ಕೋತಿ.

ಮರುದಿನ ಲಿಂಗಕ್ಕ ಮಂಕರಿ ತೆಗೆದುಕೊಂಡು ಗಂಡನನ್ನೂ ಕರೆದುಕೊಂಡು ಪುಟ್ಟಿಯನ್ನು ಮನೆಯಲ್ಲೇ ಬಿಟ್ಟು ಕೋತಿ ಜೊತೆಯಲ್ಲಿ ಗುಡ್ಡಕ್ಕೆ ಹೊರಟಳು. ಗುಡ್ಡದ ಮೇಲಿನ ಕಳ್ಳನ ಗುಹೆಯಿಂದ ಬೇಕಾದಷ್ಟು ಹಣವನ್ನು ತುಂಬಿಕೊಂಡು ಎಲ್ಲರೂ ಮನೆಗೆ ಬಂದರು. ಅಲ್ಲಿ ಇನ್ನೂ ಸ್ವಲ್ಪ ದುಡ್ಡು ಉಳಿದಿತ್ತು. ಕೋತಿ "ನಾನೇ ತರುತ್ತೇನೆ, ನೀವು ಮನೆಗೆ ಹೋಗಿ" ಎಂದು ಅವರಿಗೆ ಹೇಳಿಕಳುಹಿಸಿತು. ಅಷ್ಟರಲ್ಲಿ ಕಳ್ಳ ತನ್ನ ಗುಹೆಗೆ ಬಂದು ನೋಡಿದ. "ಯಾರೋ ಬಂದು ನನ್ನ ದುಡ್ಡನ್ನೆಲ್ಲಾ ಕದ್ದುಕೊಂಡು ಹೋಗಿದ್ದಾರೆ!" ಎಂದು ಯೋಚಿಸುತ್ತಾ ಕುಳಿತ. ಅಲ್ಲೇ ಬರುತ್ತಿದ್ದ  ಕೋತಿ ಅವನ ಕಣ್ಣಿಗೆ ಬಿದ್ದಿತು. ಅದನ್ನು ಹಿಡಿದುಕೊಂಡು "ಏನ್ಲಾ ಕೋತಿ, ನನ್ನ ಹಣವನ್ನೆಲ್ಲಾ ನೀನೇ ಕದ್ದಿದ್ದೀಯಾ, ನಿನ್ನ ಸಾಯಿಸಿಬಿಡ್ತೀನಿ" ಎಂದು ಗದರಿಸಿದ. ಕೋತಿ, "ಮಾವ ಮಾವ, ನನ್ನ ಬಿಟ್ಟುಬಿಡು, ನಿನಗೆ ನಮ್ಮ ಪುಟ್ಟಿ ಅಕ್ಕನನ್ನು ಕೊಡುತ್ತೇನೆ" ಎಂದಿತು. ಕಳ್ಳ "ಹಾಗಾದರೆ ನಾಳೆ ಕರೆದುಕೊಂಡು ಬರುತ್ತೀಯಾ?" ಎಂದ. "ಹ್ಞೂ ಕರೆದುಕೊಂಡು ಬರುತ್ತೀನಿ" ಎಂದು ಹೇಳಿ ಕೋತಿ ಮನೆಗೆ ಬಂದಿತು.

ಲಿಂಗಕ್ಕನಿಗೆ ನಡೆದ ವಿಷಯವನ್ನೆಲ್ಲಾ ಹೇಳಿತು. ಒಂದು ಹೆಣ್ಣು- ಬೊಂಬೆಯನ್ನು ಮಾಡಲು ಬೇಕಾದ ಸಾಮಾನನ್ನೆಲ್ಲಾ ಲಿಂಗಕ್ಕನಿಂದ ತರಿಸಿಕೊಂಡಿತು. ಒಂದು ಹೆಣ್ಣು-ಬೊಂಬೆ ಮಾಡಿ ಅದಕ್ಕೆ ಸೀರೆ ಉಡಿಸಿ, ರವಿಕೆ ತೊಡಿಸಿ ಒಂದು ಪೆಟ್ಟಿಗೆಯಲ್ಲಿ ಅದನ್ನು ಮಲಗಿಸಿ ಕಳ್ಳನ ಬಳಿಗೆ ಹೊತ್ತುಕೊಂಡು ಹೊರಟಿತು. ದಾರಿ ಕಾಯುತ್ತಿದ್ದ ಕಳ್ಳ ಕೋತಿಯನ್ನು ನೋಡಿ "ಪುಟ್ಟಿಯನ್ನು ಕರೆದುಕೊಂಡು ಬಂದೆಯಾ?" ಎಂದು ಆತುರದಿಂದ ಪೆಟ್ಟಿಗೆಯನ್ನು ಮುಟ್ಟುವುದಕ್ಕೆ ಹೋದ. ಆಗ ಕೋತಿ, "ಮುಟ್ಟ ಬೇಡ! ನಮ್ಮ ಪುಟ್ಟಿ ಕಳ್ಳನಿಗೆ ನನ್ನನ್ನು ಕೊಡುತ್ತಾರೆ ಅಂತ ಮುನಿಸಿಕೊಂಡವಳೆ. ನಾನು ಆ ಕಡೆ ಹೋದ ಮೇಲೆ ಹೇಗಾದರೂ ಮಾಡಿಕೋ" ಎಂದಿತು. ಪೆಟ್ಟಿಗೆಯನ್ನು ಅಲ್ಲೇ ಬಿಟ್ಟು ಊರಿಗೆ ಬಂದಿತು. ಕಳ್ಳ ಪೆಟ್ಟಿಗೆಯನ್ನು ತೆರೆದು ನೋಡಿದ! ಬರಿಯ ಬೊಂಬೆ! ಕಳ್ಳನಿಗೆ ಸಿಟ್ಟು ಬಂತು. ಕೋತಿಯನ್ನು ಬಯ್ದುಕೊಂಡು

ರಾತ್ರೋರಾತ್ರಿಯಲ್ಲಿ ಪೆಟ್ಟಿಗೆಯನ್ನು ತಂದು ಒಂದು ತಿಪ್ಪೆಗೆ ಎಸೆದುಹೋದ. ಆ ಗೊಂಬೆ ಮುಖ ಮೇಲೆ ಮಾಡಿಕೊಂಡು ಬಿದ್ದಿತ್ತು.

ಆ ರಾತ್ರಿ ಶಿವ-ಪಾರ್ವತಿಯರು ಲೋಕಸಂಚಾರ ಮಾಡಿಕೊಂಡು ಆ ದಾರಿಯಲ್ಲಿ ಬಂದರು. ಯಾರೋ ಹೆಂಗಸು ಬಿದ್ದಿದ್ದಾಳೆ ನೋಡಿಕೊಂಡು ಬರೋಣ ಎಂದು ಇಬ್ಬರೂ ಅತ್ತ ಬಂದರು. ಅಲ್ಲಿದ್ದುದು ಒಂದು ಬೊಂಬೆ ಮಾತ್ರ. ಅವರಿಗೆ ನಗು ಬಂತು. ಇರಲಿ ನೋಡೋಣ ಎಂದು 'ನಿನ್ನನ್ನು ಯಾರು ಗೊಂಬೆಯನ್ನಾಗಿ ಮಾಡಿದನೋ ಅವನೇ ನಿನಗೆ ಗಂಡನಾಗಲಿ" ಎಂದು ಹರಸಿ ಕೈಲಾಸಕ್ಕೆ ಹೊರಟುಹೋದರು. ಆ ಹೆಣ್ಣು ಎದ್ದು ಕುಳಿತುಕೊಂಡಿತು. ಕಳ್ಳ ಯಾವುದೋ ಊರಿಗೆ ಹೋಗಿದ್ದವನು ಮತ್ತೆ ಅದೇ ದಾರಿಯಲ್ಲಿ ಬಂದ. ಬೊಂಬೆಯ ಜಾಗದಲ್ಲಿ ಒಂದು ಸುಂದರವಾದ ಹೆಣ್ಣು ಎದ್ದು ಕುಳಿತಿತ್ತು. ಹೆಣ್ಣನ್ನು ಕರೆದುಕೊಂಡು ತನ್ನ ಗುಹೆಗೆ ಬಂದ.

ಕೋತಿ ಮರುದಿನ ಬೊಂಬೆ ಏನಾಯಿತು ನೋಡಬೇಕು ಎಂದು ಗುಹೆಯ ಕಡೆ ಬಂತು. ಬೊಂಬೆ ನಿಜವಾದ ಹೆಣ್ಣಾಗಿತ್ತು. ಅದಕ್ಕೆ ಎಲ್ಲಿಲ್ಲದ ಆಶ್ಚರ್ಯವಾಯಿತು. ಕಳ್ಳನ ಹತ್ತಿರ ಬಂದು- "ಮಾವ, ಅಕ್ಕನನ್ನು ಅಮ್ಮ ನೋಡಬೇಕಂತೆ, ನಿನ್ನನ್ನು-ಅಕ್ಕನನ್ನು ಕರೆದುಕೊಂಡು ಮನೆಗೆ ಬಾ ಎಂದು ಕಳುಹಿಸಿದ್ದಾರೆ" ಎಂದಿತು. ಕಳ್ಳನಿಗೂ ಸಂತೋಷವಾಯಿತು. ಅತ್ತೆಯ ಮನೆಗೆ ಹೆಣ್ಣನ್ನು ಕರೆದುಕೊಂಡು ಹೊರಟ. ಬರುತ್ತಾ ದಾರಿಯಲ್ಲಿ ಒಂದು ಸುಣ್ಣದ ಗೂಡು ಸಿಕ್ಕಿತು. ಆ ಗೂಡಿಗೆ ಆಗತಾನೆ ಸುಣ್ಣ ತುಂಬಿ ಬೆಂಕಿ ಹಚ್ಚಿದ್ದರು. ಭಗಭಗನೆ ಉರಿಯುತ್ತಿತ್ತು. ಸುಣ್ಣದ ಗೂಡಿನ ನೇರಕ್ಕೆ ಬಂದಾಗ ಕಳ್ಳ, "ಇದೇನು ಸುಣ್ಣದ ಗೂಡಲ್ವ" ಎಂದನು. ಅಯ್ಯೋ "ನಿನಗೆ ಗೊತ್ತಿಲ್ಲವಾ; ಅದರೊಳಗೆ ಬಹಳ ಚೆನ್ನಾಗಿದೆ ನೋಡು ಬಾ" ಎಂದಿತು ಕೋತಿ. "ಅಯ್ಯೋ ಅದರಲ್ಲೇನಿದೆ ನೋಡೋದು ಬಾ" ಎಂದ ಕಳ್ಳ. "ಇಲ್ಲಿಯ ತನಕ ಬಂದು ನೋಡದೆ ಹೋಗುತ್ತಾರ? ಬಾ ಮಾವ" ಎಂದು ಕಳ್ಳನನ್ನು ಕೋತಿ ಸುಣ್ಣದ ಗೂಡಿನ ಹತ್ತಿರ ಕರೆತಂದಿತು. ಕಳ್ಳ ಕೋತಿಯ ಮಾತಿನಂತೆ ಸುಣ್ಣದ ಗೂಡನ್ನು ನೋಡುವುದಕ್ಕೆ ಬಗ್ಗಿದ. ಕೂಡಲೇ ಕೋತಿಯು

ಕೆಳಗಿನಿಂದ ಕಾಲು ಹಿಡಿದು ಕಳ್ಳನನ್ನು ಸುಣ್ಣದ ಗೂಡಿನೊಳಕ್ಕೆ ನೂಕಿಬಿಟ್ಟಿತು. ಕಳ್ಳ ಸತ್ತುಹೋದ. ಕೋತಿ ಹೆಣ್ಣನ್ನು ಕರೆದುಕೊಂಡು ಲಿಂಗಕ್ಕನಿಗೆ ತೋರಿಸಿ ತಾನೇ ಮದುವೆಯಾಯಿತು.

ಕೈಲಾಸದಲ್ಲಿದ್ದ ಶಿವ-ಪಾರ್ವತಿಯರು, ಇಬ್ಬರೂ ಕೂಡಿ ಬಾಳುವುದ್ನು ನೋಡಿ ಸಂತೋಷಪಟ್ಟು, ಇಬ್ಬರನ್ನೂ ಹರಸಿದರು. ಶಿವ-ಪಾರ್ವತಿಯರ ಅನುಗ್ರಹದಿಂದ ಕೋತಿಯು ಸುಂದರ ಯುವಕನಾಯಿತು.

ಎಲ್ಲರೂ ಸುಖವಾಗಿ ಬಾಳಿದರು.

○



## ಮಾದಯ್ಯ

ಒಂದೂರಿನಲ್ಲಿ ಮೂರು ಜನ ಅಣ್ಣ ತಮ್ಮಂದಿರು ಇದ್ದರು. ಕೊನೆಯವನೇ ಮಾದಯ್ಯ. ಅವನು ಹುಚ್ಚನಾಗಿದ್ದುದರಿಂದ ಜನ ಅವನನ್ನು ಹುಚ್ಚಯ್ಯನೆಂದು ಕರೆಯುತ್ತಿದ್ದರು. ಹೀಗಾಗಿ ಅವನ ಮೂಲ ಹೆಸರು ಎಲ್ಲರಿಗೂ ಮರೆತುಹೋಗಿತ್ತು. ಹಾಗೆಂದು ಕರೆದರೆ ಅವನಿಗೂ ಸಿಟ್ಟಿಲ್ಲ: ಹುಚ್ಚಯ್ಯ ಸುಳ್ಳು ಹೇಳುವವನಲ್ಲ. ಮುಚ್ಚಿ ಮಾತನಾಡುವ ಮನುಷ್ಯನಲ್ಲ. ರಹಸ್ಯವೆಂಬುದು ಅವನಿಗೆ ಗೊತ್ತೇ ಇಲ್ಲ. ಕೆಲವರು ಊರಲ್ಲಿ ಹರಡಬೇಕಾದ ರಹಸ್ಯ ಸುದ್ಧಿಗಳನ್ನು ಹುಚ್ಚಯ್ಯನಿಗೆ ಹೇಳಿ "ಯಾರ ಮುಂದೂ ಹೇಳಬೇಡ ಹುಚ್ಚಯ್ಯ" ಎಂದು ಹೇಳುತ್ತಿದ್ದರು. ಹುಚ್ಚಯ್ಯ ಊರಿನ ಎಲ್ಲರಿಗೂ ಆ ಸುದ್ದಿ ಹೇಳಿ "ಯಾರ ಮುಂದೂ ಹೇಳಬೇಡ" ಎಂದು ಹೇಳುತ್ತಿದ್ದ.

ಅವನ ಅಣ್ಣಂದಿರಿಗೆಲ್ಲಾ ಮದುವೆಯಾಗಿತ್ತು. ಆದ್ದರಿಂದ ಹುಚ್ಚಯ್ಯನ ಇಬ್ಬರೂ ಅಣ್ಣಂದಿರು ಬೇರೆ ಬೇರೆ ಆಗಿ ಆಸ್ತಿಯನ್ನು ಸಮನಾಗಿ ಹಂಚಿಕೊಂಡರು. ಮದುವೆ ಆಗಿರದ ಈ ಹುಚ್ಚಯ್ಯ ಇಬ್ಬರಲ್ಲಿಯೂ ಉಂಡಾಡಿಕೊಂಡಿರಲಿ ಎಂದುಕೊಂಡರು. ಆದರೆ ಹುಚ್ಚಯ್ಯ ಬಿಡಬೇಕಲ್ಲ, 'ಅಣ್ಣಗಳಿರಾ, ಅನ್ಯಾಯ ಮಾಡುತ್ತಿದ್ದೀರಿ. ನಾನೂ ನಮ್ಮಪ್ಪನಿಗೆ ಹುಟ್ಟಿದವನು. ನನಗೂ ಆಸ್ತಿಯಲ್ಲಿ ಪಾಲು ಬೇಕು' ಎಂದು ಹಠ ಹಿಡಿದ. ಅವನ ಅಣ್ಣಂದಿರೂ 'ಆಗಲಿ, ನಿನಗೆ ಏನು ಬೇಕು ಹೇಳು ಹುಚ್ಚಯ್ಯ ?' ಎಂದರು. ಹುಚ್ಚಯ್ಯನಿಗೆ ಈಗ ಮಾತ್ರ ಪೀಕಲಾಟಕ್ಕೆ ಇಟ್ಟುಕೊಂಡಿತು. ಕೊನೆಗೆ ಏನೂ ತಿಳಿಯದೆ 'ನನಗೆ ಒಂದು ಎತ್ತು ಬೇಕು' ಎಂದು ಕೇಳಿದ. ಅವರ ಮನೆಯಲ್ಲೊಂದು ದುಡಿಯಲಾರದ ಎತ್ತು ಇತ್ತು. ಅವನಿಗೆ ಅದನ್ನು ಸಂತೋಷವಾಗಿ ಕೊಟ್ಟರು. ತಾನು ಅಣ್ಣಂದಿರ ಮನೆಯಲ್ಲಿ ಊಟಮಾಡಿದರೂ

ತಾನು ಬೇರೆ ಇದ್ದೇನೆಂದೇ ಹುಚ್ಚಯ್ಯನ ತರ್ಕ. ಯಾಕೆಂದರೆ ಅಂದಿನಿಂದ ತನ್ನ ಎತ್ತಿನೊಂದಿಗೆ ಹಿತ್ತಲಲ್ಲಿಯೇ ಇರತೊಡಗಿದ. ಅದರ ಮೈ ತಿಕ್ಕುವುದೇನು! ಮೇವು ತಿನ್ನಿಸುವುದೇನು! ನೀರು ಕುಡಿಸುವುದೇನು! ಒಂದು ಕೂಸಿನ್ನು ನೋಡಿಕೊಳ್ಳುವಂತೆ ಅದರ ಆರೈಕೆ ಮಾಡುತ್ತಿದ್ದ. ಸಾಲದ್ದಕ್ಕೆ ಅದರೊಂದಿಗೆ ಮಾತು-ಕತೆಯಾಡುತ್ತಿದ್ದ. ಇವನು ಹೇಳಿಕೇಳಿದ್ದಕ್ಕೆ ಅದು ಕತ್ತು ಅಲುಗಿಸಿದರೆ, ಕಿವಿಯಿಂದ ನೊಣ ಹೊಡೆದುಕೊಂಡರೆ, ಬಾಲ ಅಲುಗಿದರೆ ಅದಕ್ಕೊಂದು ಅರ್ಥ ಹಚ್ಚಿ, ಅದನ್ನೂ ತಾನೇ ಹೇಳುತ್ತಿದ್ದ. ಆ ಎತ್ತು ಮೇವು ಇಲ್ಲದ್ದಕ್ಕೆ ಅವನ ಮೈ ನೆಕ್ಕಿದರೆ 'ಎಂಥಾ ಎತ್ತು! ಎಷ್ಟೊಂದು ಪ್ರೀತಿ!' ಎಂದು ಹೋಗುಬರುವವರಿಗೆಲ್ಲಾ ಹೇಳುತ್ತಿದ್ದ. ಸಾಲದ್ದಕ್ಕೆ ಬಸವಕುಮಾರ ಎಂದು ಅದಕ್ಕೆ ಹೆಸರು ಇಟ್ಟಿದ್ದ. ಒಂದೆಂಟು ದಿನಗಳಂತೂ 'ನಮ್ಮ ಬಸವಕುಮಾರ ಯಾಕೋ ನೀರು ಕುಡಿಯಲಿಲ್ಲ. ಇಂದು ಯಾಕೋ ಬಾಲವನ್ನೇ ಅಲುಗಿಸಲಿಲ್ಲ. ಈ ಹೊತ್ತು ಒದರಲಿಲ್ಲ' ಎಂದು ಅದರ ತಾಯಿಯ ಹಾಗೆ ಎಲ್ಲರಿಗೂ ಹೇಳುತ್ತಿದ್ದ. ಮುದಿ ಎತ್ತಿಗೆ ಇವನ ಭಾಷೆ ತಿಳಿಯುತ್ತಿರಲಿಲ್ಲ. ಒಂದು ಸಲ ಹುಚ್ಚಯ್ಯ ಅದರ ಬಾಲ ಹಿಡಿದು 'ಬಸವಕುಮಾರ ಬಾಲವನ್ನೇಕೆ ಅಲುಗಿಸುತ್ತಿಲ್ಲ?' ಎನ್ನುತ್ತ ಕೈಯಾಡಿಸಿದ. ಎತ್ತು ಅವನನ್ನು ಒದ್ದುಬಿಟ್ಟಿತು. ಹುಚ್ಚಯ್ಯನಿಗೆ ಆ ಕ್ಷಣವೇ ಎತ್ತಿನ ಬಗ್ಗೆ ವೈರಾಗ್ಯ ಹುಟ್ಟಿತು.

ಅಣ್ಣಂದಿರ ಬಳಿ ಎರಡು ಆಕಳಿದ್ದವು. ಅವುಗಳನ್ನು ಸಾಕಲು ತೊಂದರೆ ಇದ್ದುದರಿಂದ, ಆಕಳುಗಳನ್ನು ಪಕ್ಕದ ಊರಿಗೆ ಹೊಡೆದುಕೊಂಡು ಹೋಗಿ ಮಾರಿಬಂದರು. ಹುಚ್ಚಯ್ಯ ಇದನ್ನು ನೋಡಿದ. ತಾನೂ ತನ್ನ ಮುದಿ ಎತ್ತನ್ನು ಮಾರಬೇಕೆಂದು ಪಕ್ಕದ ಊರಿಗೆ ಹೋದ. ಅಂದು ಸಂತೆ ಕೂಡಿದ ದಿನ. ಅದರಲ್ಲಿ ಇವನದು ಮುದಿ ಎತ್ತು! ಯಾರು ಕೊಳ್ಳುತ್ತಾರೆ? ಸಾಯಂಕಾಲದ ತನಕ ನಿಲ್ಲಿಸಿಕೊಂಡು ಮಾರಲಾಗದೆ ಮನೆಗೆ ವಾಪಸ್ಸು ಬರುತ್ತಿದ್ದ. ದಾರಿಯಲ್ಲಿ ಒಂದು ಒಣಗಿದ ಮರ ಗಾಳಿಗೆ ಅಲುಗಿ 'ಗಿರಕ್ ಗಿರಕ್' ಎಂದು ಶಬ್ದ ಮಾಡಿತು. ಇವನು ಹೇಳಿ ಕೇಳಿ ಹುಚ್ಚಯ್ಯ. ಅಷ್ಟೇ ಸಾಕು: "ಏನು ಮರಪ್ಪ, ಈ ಎತ್ತಿಗೆ ಏನುಬೆಲೆ ಎಂದು ಕೇಳಿದೆಯೋ?" ಎಂದ. ಮರ ಮತ್ತೆ ಹಾಗೆ ಸಪ್ಪಳ ಮಾಡಿತು. ಹುಚ್ಚಯ್ಯ ಹೇಳಿದ: "ಇದಕ್ಕೆ ಕೊನೇಪಕ್ಷ ಇಪ್ಪತ್ತೈದು ರೂಪಾಯಿ ಇಲ್ಲದೆ ಕೊಡೋದಿಲ್ಲ

ನೋಡು" ಅಂದ. ಮರ 'ಗಿರಕ್ ಗಿರಕ್' ಎಂದು ಗಾಳಿ ಬೀಸಿದಕ್ಕೆ ಸಪ್ಪಳ ಮಾಡಿತು. ಹುಚ್ಚಯ್ಯ "ಏನು ಇಪ್ಪತ್ತೈದು ರೂಪಾಯಿ ಕೊಡುತ್ತೇನೆ ಎಂದೆಯಾ?" ಎಂದ. ಮರ 'ಗಿರಕ್ ಗಿರಕ್'ಎಂದು ಸಪ್ಪಳ ಮಾಡಿತು.

"ಸರಿ ಅಂದೆಯಾ? ತಗೊ ಹಾಗಾದರೆ, ನನ್ನ ಇಪ್ಪತ್ತೈದು ರೂಪಾಯಿ ಕೊಡು"ಎಂದ. ಮರ ಮತ್ತೆ 'ಗಿರಕ್ ಗಿರಕ್' ಎಂದು ಸಪ್ಪಳ ಮಾಡಿತು. ಹುಚ್ಚಯ್ಯ "ಆಯಿತು ಬಿಡು" ಅಂದವನೇ ಹೋಗಿ ತನ್ನ ಮುದಿ ಎತ್ತನ್ನು ಆ ಮರಕ್ಕೆ ಕಟ್ಟಿಹಾಕಿದ. ಮರ ಮತ್ತೆ 'ಗಿರಕ್ ಗಿರಕ್' ಎಂದಿತು. "ಏನಂದೀ ರೊಕ್ಕ ನಾಳೆ ಕೊಡ್ತೀಯಾ? ಕೊಡು. ಹಾಗೇ ಆಗಲಿ" ಎಂದು ಹೇಳಿ ಮನೆಗೆ ಬಂದ.

ಮನೆಯಲ್ಲಿ ಊಟಕ್ಕೆ ಕೂತಾಗ ಅಣ್ಣಂದಿರು "ನಿನ್ನ ಎತ್ತು ಎಲ್ಲಿ ಹುಚ್ಚಯ್ಯ?" ಎಂದು ಕೇಳಿದರು.

"ಮಾರಿ ಬಂದೆನಲ್ಲ"

"ಎಷ್ಟಕ್ಕೆ?"

"ಇಪ್ಪತ್ತೈದು ರೂಪಾಯಿಗೆ"

ತಮ್ಮ ಪರವಾಗಿಲ್ಲ. ಆ ಮುದಿ ಎತ್ತನ್ನೂ ಇಪ್ಪತ್ತೈದಕ್ಕೆ ಮಾರಿದನಲ್ಲಾ ಎಂದುಕೊಂಡರು. "ರೂಪಾಯಿ ಎಲ್ಲಿ?' ಎಂದು ಅವನ ಅಣ್ಣಂದಿರು ಹುಚ್ಚಯ್ಯನನ್ನು ಕೇಳಿದರು. " ಆ ಮರಪ್ಪ ನಾಳೆ ಕೊಡುತ್ತೇನಂದ" ಎಂದು ಹುಚ್ಚಯ್ಯ ಅಣ್ಣಂದಿರಿಗೆ ಹೇಳಿ ಊಟ ಮುಗಿಸಿ ಎದ್ದ. ಇದ್ದರೂ ಇರಬಹುದೆಂದು ಅವರೂ ಸುಮ್ಮನಾದರು.

ಮಾರನೇ ದಿನ ಹುಚ್ಚಯ್ಯ ಆ ಮರದ ಬಳಿಗೆ ಹೋದ; ಮರಕ್ಕೆ ಕಟ್ಟಿದ್ದ ಎತ್ತನ್ನು ಹಿಂದಿನ ರಾತ್ರಿ ಯಾರೋ ಕಳ್ಳರು ಬಿಚ್ಚಿಕೊಂಡು ಹೋಗಿದ್ದರು.

"ಏನಪ್ಪಾ ಮರಪ್ಪ, ಕೊಡು ನನ್ನ ಹಣ" ಅಂದ. ಮರ ಮಾತ್ರ 'ಗಿರಕ್ ಗಿರಕ್' ಎಂದೇ ಧ್ವನಿಮಾಡಿತು. "ಏನೆಂದೆ ? ನಾಳೆ ಬಾ ಅಂದೆಯಾ! ಆಯಿತು ನಾಳೆ ತಪ್ಪಿಸಬೇಡ. ಮತ್ತೆ ನಾಳೆ ಬಾ, ನಾಡಿದ್ದು ಬಾ ಎಂದು ಹೇಳಬೇಡ. ಇಂಥಾದೆಲ್ಲಾ ವ್ಯವಹಾರವೇ ಅಲ್ಲ. ಏನೋ ಬಾಯಿ ಬಿಟ್ಟು ಕೇಳಿದ್ದೀಯ, ಇದೊಮ್ಮೆ

ಆಗಲಿ" ಎಂದು ಮರಕ್ಕೆ ಹೇಳಿ ಮನೆಗೆ ಬಂದ. ಆ ದಿನವೂ ಅಣ್ಣಂದಿರು ಹಣ ಎಲ್ಲಿ ಎಂದು ಕೇಳಿದರು. "ಇಲ್ಲ, ನಾಳೆ ಕೊಡುತ್ತಾನಂತೆ".ಎಂದು ಹುಚ್ಚಯ್ಯ ಹೇಳಿದ. "ಹೋಗಲಿ ಮಾರಾಯ, ಯಾರಿಗೆ ಮಾರಿದೆ ಹೇಳು" ಎಂದರು. "ದಾರಿ ಬದಿಯ ಮರಕ್ಕೆ ಮಾರಿದ್ದೇನೆ" ಅಂದ. ಅಣ್ಣಂದಿರು ಇದನ್ನು ಕೇಳಿ " ನಿನಗೆ ಎಂದಿಗೆ ಬುದ್ಧಿ ಬಂದಿತೋ?" ಎಂದು ಹುಚ್ಚಯ್ಯನನ್ನು ಬೈದರು. "ಪಾಪ! ಬಹಳ ಒತ್ತಾಯ ಮಾಡಿದ, ಮನಸ್ಸು ಕರಗೋಹಾಗೆ ಕೇಳಿಕೊಂಡ. ಅದಕ್ಕೆ ಕೊಟ್ಟೆ" ಎಂದು ಹುಚ್ಚಯ್ಯ ಅಣ್ಣಂದಿರ ಮುಂದೆ ಹೇಳಿದ. ಅದು ಮೊದಲೇ ಮುದಿ ಎತ್ತಾದ್ದರಿಂದ ಅದಕ್ಕೆ ಹುಲ್ಲು-ನೀರು ಹಾಕುವ ತೊಂದರೆ ತಪ್ಪಿತು ಎಂದು ಅವರೂ ಸುಮ್ಮನಾದರು.

ಮಾರನೇ ದಿನ ಹುಚ್ಚಯ್ಯ ಸಿಟ್ಟಿನಿಂದ ಕೊಡಲಿ ಹಿಡಿದುಕೊಂಡೇ ಮರದ ಬಳಿ ಬಂದ. "ಈ ದಿನವಾದರೂ ದುಡ್ಡು ಕೊಡುತ್ತೀಯೋ? ಇಲ್ಲವೋ?" ಎಂದ. ಮರ ಎಂದಿನಂತೆ 'ಗಿರಕ್ ಗಿರಕ್' ಎಂದಿತು. "ನಿನ್ನ ಗಿರಕ್ಕು ಇಲ್ಲಾ, ಪರಕ್ಕೂ ಇಲ್ಲ. ನಾ ಕೇಳೋದಿಲ್ಲ. ನನ್ನ ಇಪ್ಪತ್ತೈದು ರೂಪಾಯಿ ಕೊಡಬೇಕು ; ಇಲ್ಲ ಇಪ್ಪತ್ತೈದು ಸಲ ಈ ಕೊಡಲಿಯಿಂದ ಏಟು ತಿನ್ನಬೇಕು, ಏನಂತೀ?" ಎಂದ. ಮರ 'ಗಿರಕ್ ಗಿರಕ್' ಎಂದಿತು. ಹುಚ್ಚಯ್ಯ ಸಿಟ್ಟಿಗೆದ್ದು 'ಒಂದು, ಎರಡು, ಮೂರು" ಎಣಿಸುತ್ತಾ ಕೊಡಲಿಯಿಂದ ಮರಕ್ಕೆ ಏಟು ಹಾಕಲಾರಂಭಿಸಿದ. ಅದು ಮೊದಲೇ ಒಣಗಿದ ಮರ, ಇವನು ಹತ್ತೆಂಟು ಏಟು ಹಾಕುವುದರಲ್ಲಿ ನೆಲಕ್ಕೆ ಬಿದ್ದಿತು. ಯಾರೋ ಕಳ್ಳರು ತಾವು ಕದ್ದು ತಂದ ಬೆಳ್ಳಿ-ಬಂಗಾರವನ್ನು ಅದರ ಪೊಟರೆಯೊಳಗೆ ಸಂಗ್ರಹಿಸಿ ಇಟ್ಟಿದ್ದರು. ಮರ ಬಿದ್ದುದ್ದರಿಂದ ಅವೆಲ್ಲವೂ ಈಗ ಹೊರಗೆ ಚೆಲ್ಲಾಡಿ ಬಿದ್ದಿತು. ಹುಚ್ಚಯ್ಯ ಕೆಳಗೆ ಬಿದ್ದಿದ್ದ ಬೆಳ್ಳಿ-ಬಂಗಾರವನ್ನು ಬಾಚಿ ಕಟ್ಟಿಕೊಂಡು ಮನೆಗೆ ಓಡಿಹೋಗಿ ಊಟಕ್ಕೆ ಕುಳಿತಿದ್ದ ಅಣ್ಣಂದಿರ ಮುಂದೆ ಸುರಿದ. ಇಬ್ಬರೂ ಅಣ್ಣಂದಿರಿಗೆ ಅವೆಲ್ಲವನ್ನೂ ನೋಡಿ ಸಂತೋಷ-ಆಶ್ಚರ್ಯ ಉಂಟಾಯಿತು.

"ಈ ಬೆಳ್ಳಿ-ಬಂಗಾರವನ್ನೆಲ್ಲಾ ಎಲ್ಲಿಂದ ತಂದೆಯೋ ಹುಚ್ಚಯ್ಯ?" ಎಂದು ಕೇಳಿದರು.

"ನಾನು ಹೇಳಿರಲಿಲ್ಲವೇ, ಮರಕ್ಕೆ ಎತ್ತು ಮಾರಿದ್ದೇನೆ ಅಂತ ? ಅದು ರೂಪಾಯಿ ಕೊಡಲಿಲ್ಲ. ಬೆಳ್ಳಿ-ಬಂಗಾರ ಕೊಟ್ಟಿತು. ಇನ್ನೂ ಅದರ ಹತ್ತಿರ ಬಹಳ ಬೆಳ್ಳಿ-ಬಂಗಾರ ಬಿದ್ದಿದೆ" ಅಂದ ಹುಚ್ಚಯ್ಯ. "ನಡೆ ಹಾಗಾದರೆ" ಎಂದು ಇಬ್ಬರೂ ಅಣ್ಣಂದಿರು ಅವನೊಂದಿಗೆ ಮರದ ಬಳಿ ಬಿದ್ದಿದ್ದ ಬೆಳ್ಳಿ-ಬಂಗಾರವನ್ನು ತರಲು ಓಡಿದರು. ಹುಚ್ಚಯ್ಯನ ಮಾತಿನಂತೆ ಅಲ್ಲಿ ಬೆಳ್ಳಿ-ಬಂಗಾರದ ಹೇರಳ ರಾಶಿ ಬಿದ್ದಿತ್ತು. ಅಷ್ಟೂ ಬಳಿದು ಕಟ್ಟಿಕೊಂಡರು. ಹುಚ್ಚಯ್ಯನ ಮೇಲೆ ಸಣ್ಣದೊಂದು ಗಂಟು ಹೊರಿಸಿದರು. "ನಮಗೆ ಬೆಳ್ಳಿ-ಬಂಗಾರ ಸಿಕ್ಕಿದ್ದು ಬೇರೆಯವರಿಗೆ ಹೇಳಬೇಡಪ್ಪಾ" ಎಂದರು. ಹುಚ್ಚಯ್ಯ ಆಗಲಿ ಎಂದ.

ಮೂವರೂ ಅವಸರದಿಂದ ಮನೆಯ ಕಡೆಗೆ ಬರುತ್ತಿರುವಾಗ ದಾರಿಯಲ್ಲಿ ಯಾವುದೋ ಊರಿಗೆ ಹೋಗಿದ್ದ, ಆ ಊರಿನ ಪುರೋಹಿತರು ಅವರಿಗೆ ಎದುರಾದರು. "ಏನ್ರಯ್ಯಾ ತಲೆಯ ಮೇಲೆ? ಏನು ಹೊತ್ತುಕೊಂಡು ಹೊರಟಿದ್ದೀರಾ ?" ಅಂದರು. ಹಿರಿಯಣ್ಣ "ಏನಿಲ್ಲ ಜೋಳ, ಕಾಳು ಹೊತ್ತುಕೊಂಡು ಮನೆಗೆ ಹೊರಟಿದ್ದೇವೆ" ಅಂದ. ಹುಚ್ಚಯ್ಯಾ "ಏ ಅಣ್ಣಾ, ಪುರೋಹಿತರ ಮುಂದೆ ಸುಳ್ಳು ಹೇಳೋದೇ? ಪುರೋಹಿತರೇ, ಬೆಳ್ಳಿ-ಬಂಗಾರ ಹೊತ್ತುಕೊಂಡು ಹೊರಟಿದ್ದೀವಿ. ಬೇಕಾದರೆ ನೋಡಿರಿ" ಎಂದು ಗಂಟು ಬಿಚ್ಚಿ ತೋರಿಸಿಯೇಬಿಟ್ಟ. ಪುರೋಹಿತರು ಅದೆಲ್ಲವನ್ನೂ ನೋಡಿ ಜೊಲ್ಲು ಸುರಿಸುತ್ತಾ "ಹೌದಲ್ಲಾ" ಎಂದು ಹೇಳುತ್ತಲೇ ಒಂದು ಬೊಗಸೆಯಷ್ಟು ಬಂಗಾರವನ್ನು ತಮ್ಮ ಜೋಳಿಗೆಗೆ ಇಳಿಸಿದರು. ಹುಚ್ಚಯ್ಯ ರೇಗಿ 'ಎಲಾ' ಎಂದು ಹೇಳಿ ಕೈಯಲ್ಲಿಯ ಸನಿಕೆಯಿಂದ ಪುರೋಹಿತರ ತಲೆಗೆ ಬಲವಾಗಿ ಹೊಡೆದ. ಆ ಏಟನ್ನು ತಾಳಲಾರದೆ ಪುರೋಹಿತರು ಅಲ್ಲಿಯೇ ಶಿವಾ ಎಂದು ಪ್ರಾಣ ಬಿಟ್ಟರು. ಪುರೋಹಿತರು ಸತ್ತದ್ದನ್ನು ನೋಡಿ ಅಣ್ಣಂದಿರು ಹೆದರಿದರು. ಹುಚ್ಚಯ್ಯನ ಮೇಲೆ ಸಿಟ್ಟುಮಾಡಿಕೊಂಡು ಹೆಣವನ್ನು ಒಂದು ತಗ್ಗಿನಲ್ಲಿ ಬಿಸಾಕಿ ಹೊರಟುಹೋದರು. ಆದರೆ ಅದೇ ದಿನ ರಾತ್ರಿ ಹುಚ್ಚಯ್ಯನಿಗೂ ಗೊತ್ತಾಗದಂತೆ ಬಂದು, ಆ ಹೆಣವನ್ನು ಬೇರೆ ಜಾಗದಲ್ಲಿ ಗುಂಡಿತೋಡಿ ಮಣ್ಣಿನಲ್ಲಿ ಮುಚ್ಚಿದರು. ಆ ತಗ್ಗಿನಲ್ಲೊಂದು ಸತ್ತ ಹೋತವನ್ನು ಮುಚ್ಚಿ ಹೋದರು.

ಒಂದೆರಡು ದಿನ ಬಿಟ್ಟು, ಪುರೋಹಿತರು ಕಾಣೆಯಾಗಿದ್ದಾರೆ ಎಂದು ಊರಿನ ಜನರಲ್ಲಿ ಹುಯ್ಯಲೆದ್ದಿತು. ಹುಚ್ಚಯ್ಯ "ಹೌದು ಹೌದು, ಅವರನ್ನು ನಾನೇ ಸನಿಕೆಯಿಂದ ಹೊಡೆದು ಕೊಂದು ತಗ್ಗಿನಲ್ಲಿ ಹಾಕಿ ಮಣ್ಣುಮಾಡಿ ಬಂದೆ" ಎಂದ. ಜನ "ಎಲ್ಲಿ ತೋರಿಸು ಬಾ" ಎಂದು ಅವನೊಂದಿಗೆ ಬಂದರು. ಹುಚ್ಚಯ್ಯ ಪುರೋಹಿತರನ್ನು ಮಣ್ಣಿನಲ್ಲಿ ಮುಚ್ಚಿದ್ದ ತಗ್ಗಿಗೆ ಜನರನ್ನು ಕರೆದುತಂದ. ಮಣ್ಣಿನಲ್ಲಿ ಮುಚ್ಚಿದ್ದ ಹೆಣವನ್ನು ಹೊರತೆಗೆಯಲು ಮುಂದಾದ. ಅವನು ಮಣ್ಣು ದೂಗೆಯುತ್ತಿರಬೇಕಾದರೆ, ಹುಚ್ಚಯ್ಯನ ಕೈಗೆ ಅಲ್ಲಿ ಅವನ ಅಣ್ಣಂದಿರು ಹೂತಿದ್ದ ಹೋತದ ಗಡ್ಡ ಸಿಕ್ಕಿತು. ಆಶ್ಚರ್ಯಗೊಂಡ ಹುಚ್ಚಯ್ಯ "ಓಹೋ.... ಪುರೋಹಿತರಿಗೆ ಗಡ್ಡ ಬಂದಿದೆಯಲ್ಲಾ?" ಅಂದ.

ಹಾಗೆಯೇ ಮಣ್ಣು ಹೊರತೆಗೆಯುತ್ತಿರಬೇಕಾದರೆ, ಅವನ ಕೈಗೆ ಹೋತದ ಕೊಂಬುಗಳು ಸಿಕ್ಕಿದವು. ಆಗ ಹುಚ್ಚಯ್ಯ ಮತ್ತೂ ಆಶ್ಚರ್ಯದಿಂದ "ಓಹೋ.....ಪುರೋಹಿತರ ತಲೆಯ ಮೇಲೆ ಎರಡು ಕೊಂಬು ಬಂದಿದ್ದಾವಲ್ಲಾ?" ಅಂದ, ಇವನು ಮೊದಲೇ ಪೆದ್ದ. ಇವನ ಮಾತು ನಂಬಿಕೊಂಡು ಇಲ್ಲಿಗೆ ಬಂದು ನೋಡಿದರೆ ಸತ್ತ ಹೋತವಿದೆ! ಹುಚ್ಚಯ್ಯನಿಗೆ ಬುದ್ಧಿ ಇಲ್ಲವೆಂದರೆ, ಅವನ ಬೆನ್ನುಹತ್ತಿ ನಾವೂ ಬುದ್ಧಿ ಕಳೆದುಕೊಂಡೆವು" ಎಂದು ಜನ ಬಯ್ದುಕೊಂಡು ಊರಿಗೆ ಮರಳಿದರು. ಮುಂದೆ ಹುಚ್ಚಯ್ಯ ಮರ ತನಗೆ, ಬೆಳ್ಳಿ-ಬಂಗಾರ ಕೊಟ್ಟಿತೆಂದು ಹೇಳಿದರೂ ಯಾರೂ ಅವನ ಮಾತು ನಂಬಲಿಲ್ಲ. ಹುಚ್ಚಯ್ಯನಿಂದಾಗಿ ಸಿರಿವಂತರಾದ ಅಣ್ಣಂದಿರು ಹುಚ್ಚಯ್ಯನೊಂದಿಗೆ ಸುಖವಾಗಿದ್ದರು.

○





## ಚೆಲುವಯ್ಯನ ಸಾಹಸಗಳು

ಒಂದು ಪಟ್ಟಣದ ದೊರೆಗೆ ಏಳುಜನ ಗಂಡುಮಕ್ಕಳಿದ್ದರು. ಅವರಲ್ಲಿ ಆರು ಜನ ವಿದ್ಯಾ ಬುದ್ಧಿ ಕಲಿತಿದ್ದರು. ಆದರೆ ಏಳನೆಯವನು ವಿದ್ಯಾ ಬುದ್ಧಿ ಕಲಿತವನಲ್ಲ. ಅವನ ಹೆಸರು ಚೆಲುವಯ್ಯ. ಅರಮನೆಯಲ್ಲಿ ಅಡಿಗೆ ಮಾಡುವುದು ಅವನ ದಿನನಿತ್ಯದ ಕೆಲಸವಾಗಿತ್ತು. ನೆಲ್ಲುಕುಟ್ಟುವ ಕೆಲಸ ಅವನ ಹೆಂಡತಿಯ ಪಾಲಿನದಾಗಿತ್ತು. ಈಕೆ

ಒಂದು ದಿನ, ಚೈತ್ರ-ವೈಶಾಖದ ಬಿಸಿಲಿನಲ್ಲಿ, ಬಂಡೆ ಮೇಲೆ ನಿಂತುಕೊಂಡು ನೆಲ್ಲು ಕುಟ್ಟುತ್ತಾ ಇರುವಾಗ, ದೊರೆಮನೆಗೆ ನೆಂಟರು ಬಂದರು. ಬಂದವರು ಇವಳನ್ನು ನೋಡಿ,

"ಇದೇನಮ್ಮ ಇಂಥಾ ಬಿಸಿಲಲ್ಲಿ ನೆಲ್ಲು ಕುಟ್ಟುತ್ತಾ ಇದ್ದಾಳೆ, ಆಯಮ್ಮ" ಎಂದು ಅವಳ ಆರು ಜನ ವಾರಗಿತ್ತಿಯರನ್ನು ಕೇಳಿದರು.

"ಚೆಲುವಯ್ಯನಿಗೆ ದೊರೆತನ ಬಂದಾಗ, ಒನಕೆ ಚಿಗುರಿ ಮರವಾದಾಗ, ಕಡುವಾಡು (ಬಾವಾಡು) ಬೇರು ಬಿಟ್ಟಾಗ, ಅವಳಿಗೆ ಸುಖ ಬರುತ್ತದೆ" ಎಂದು ಆ ಆರು ಜನ ವಾರಗಿತ್ತಿಯರು ಉತ್ತರ ಕೊಟ್ಟರು.

ಆರು ಜನ ಅತ್ತಿಗೆಯರ ಈ ಮಾತು, ಪಕ್ಕದಲ್ಲಿ ಅಡಿಗೆ ಮಾಡುತ್ತಿದ್ದ ಚೆಲುವಯ್ಯನ ಕಿವಿಗೆ ಬಿತ್ತು. ಇದರಿಂದ ಅವನ ಮನಸ್ಸಿಗೆ ನೋವಾಯಿತು, ನೆಟ್ಟಗೆ ಮನೆ ಬಿಟ್ಟು ಹೊರಟ. ಹೀಗೆ ಹೋಗುತ್ತಾ ಇರುವಾಗ, ಅಲ್ಲೊಂದು ಪಟ್ಟಣ ಸಿಕ್ಕಿತು. ಅದೊಂದು ವಿಚಿತ್ರವಾದ ಪಟ್ಟಣ. ಹಗಲೆಲ್ಲ ಪಟ್ಟಣವಾಗಿಯೇ ಇರುತ್ತದೆ. ರಾತ್ರಿ ಸಮಯದಲ್ಲಿ ಮಾತ್ರ ಪಟ್ಟಣಕೆಲ್ಲಾ ಬೆಂಕಿ ಹತ್ತಿಕೊಂಡು ಉರಿಯುತ್ತಿರುತ್ತದೆ. ಆದ್ದರಿಂದ ಅಲ್ಲಿಯ ಜನರೆಲ್ಲಾ ರಾತ್ರಿ ಸಮಯದಲ್ಲಿ ಕಾಡಿಗೆ ಹೋಗುತ್ತಾರೆ. ಈ ವಿಚಿತ್ರ ಸಮಾಚಾರ ಗೊತ್ತಿಲ್ಲದೆ ನೇರವಾಗಿ ಚೆಲುವಯ್ಯ ದೊರೆಮನೆಯ ಜಗುಲಿ ಮೇಲೆ ಮಲಗುವುದಕ್ಕೆ ಹೋದ. ಅಲ್ಲಿದ್ದ ಜನ ಈ ಊರಿನ ವಿಚಿತ್ರ ತಿಳಿಸಿದ ನಂತರ,

"ನೀನು ಎಲ್ಲಿಗೆ ಹೊರಟಿದ್ದೀಯಾ?"-ಎಂದು ಚೆಲುವಯ್ಯನನ್ನು ಪ್ರಶ್ನಿಸುತ್ತಾರೆ.

"ದೇವರ ಕಾಣೋಕೆ ಹೋಗುತ್ತಿದ್ದೇನೆ"-ಎಂದು ಚೆಲುವಯ್ಯ ನೇರವಾಗಿ ಹೇಳಿದ.

"ಹಾಗಾದರೆ ನಮ್ಮ ಪಟ್ಟಣ ಹಗಲೆಲ್ಲಾ ಪಟ್ಟಣ ಆಗಿರುತ್ತದೆ. ಆದರೆ, ರಾತ್ರಿ ಆದ ತಕ್ಷಣ ಬೆಂಕಿ ಹತ್ತಿಕೊಂಡು ಉರಿಯುತ್ತದೆ. ಏಕೆ ಹೀಗೆ ಆಗುತ್ತದೆ ಎಂದು ದೇವರ ಬಳಿ ಕೇಳಿಕೊಂಡು ಬಾ" ಎಂದು ಹೇಳಿ, ಅವನನ್ನು ಆ ಪಟ್ಟಣದ ಜನರೆಲ್ಲ ಉಪಚರಿಸಿ, ಮುಂದಕ್ಕೆ ಕಳುಹಿಸಿದರು.

ಚೆಲುವಯ್ಯ ಅಲ್ಲಿಂದ ಮುಂದೆ ನಡೆದು, ಮತ್ತೊಂದು ಪಟ್ಟಣಕ್ಕೆ ಬಂದ. ಆ ಪಟ್ಟಣದಲ್ಲೊಂದು ವಿಚಿತ್ರ. ಅಲ್ಲಿಯ ದೊರೆ ಹಗಲೆಲ್ಲಾ ಕೆರೆ ಕಟ್ಟಿಸಿದರೂ, ರಾತ್ರಿ ಸಮಯದಲ್ಲಿ ಅದು, ಕುಸಿದು ಬಿದ್ದು ಹೋಗುತ್ತಿರುತ್ತದೆ. ಆ ದೊರೆ ಹತ್ತಿರ ಚೆಲುವಯ್ಯ ಹೋಗಿ "ನಾನು ದೇವರ ಕಾಣೋಕೆ ಹೋಗುತ್ತಿದ್ದೇನೆ" ಎಂದು ಹೇಳಿದ. ದೊರೆ ಅವನಿಗೆ ಆ ಕೆರೆಯ ಸಂಗತಿ ತಿಳಿಸಿ "ದೇವರನ್ನು ಕೇಳಿಕೊಂಡು ಬಾ "ಎಂದು ವಿನಂತಿಸಿಕೊಂಡ.

ಚೆಲುವಯ್ಯ ಆ ಊರಿನಿಂದ ಮುಂದಕ್ಕೆ ಹೋಗುತ್ತಿರುವಾಗ .ಅಲ್ಲಿ ಒಂದು ಮಾವಿನ ಮರ ಸಿಗುತ್ತದೆ. ಆ ಮಾವಿನ ಮರದ ನೆರಳಿನಲ್ಲಿ ವಿಶ್ರಾಂತಿಗಾಗಿ ಕುಳಿತುಕೊಂಡ. ಆಗ ಆ ಮಾವಿನ ಮರ "ಏನಪ್ಪ ನೀನು ಯಾರು ? ಎಲ್ಲಿಗೆ ಹೋಗುತ್ತೀಯಾ?" ಎಂದು ಕೇಳಿತು. "ದೇವರನ್ನು ಕಾಣುವುದಕ್ಕೆ ಹೋಗುತ್ತಿದ್ದೇನೆ" ಎಂದು ಚೆಲುವಯ್ಯ ಹೇಳಿದ. "ಹಾಗಾದರೆ ನೋಡಪ್ಪ, ನಾನು ಬೇಕಾದಷ್ಟು ಮಾವಿನಹಣ್ಣು ಬಿಡ್ತೀನಿ. ಆದರೆ ಒಂದು ಹಕ್ಕಿ-ಪಕ್ಷಿಯೂ ತಿನ್ನುವುದಿಲ್ಲ ! ನರಮನುಷ್ಯರೂ ಹಣ್ಣನ್ನು ತಿನ್ನುವುದಿಲ್ಲ ! ದೇವರ ಪೂಜೆಗೂ ಹಣ್ಣನ್ನು ಇಡುವುದಿಲ್ಲ ! ಎಷ್ಟು ಹಣ್ಣು ಬಿಟ್ಟರೂ ನೆಲಕ್ಕೆಬಿದ್ದು ಕೊಳೆತು ಹೋಗುತ್ತದೆ. ಹೀಗೇಕೆ ಆಗುತ್ತದೆ ಎಂದು ದೇವರನ್ನು ಕೇಳಿಕೊಂಡು ಬಾ" ಎಂದು ಆ ಮಾವಿನಮರ ಬೇಡಿಕೊಂಡಿತು.

ಚೆಲುವಯ್ಯ ಅಲ್ಲಿಂದ ಮುಂದೆ ಹೋಗುತ್ತಿರುವಾಗ, ಅಲ್ಲೊಂದು ಮಲ್ಲಿಗೆಗಿಡ ಸಿಗುತ್ತದೆ. ಅದರ ಪಕ್ಕದಲ್ಲಿ ಈತ ಕುಳಿತುಕೊಂಡ. ಆಗ, "ನೀನು ಯಾರಯ್ಯ? ಎಲ್ಲಿಗೆ ಹೋಗುತ್ತಿದ್ದೀಯಾ?"ಎಂದು ಕೇಳುತ್ತದೆ ಮಲ್ಲಿಗೆಗಿಡ. "ದೇವರನ್ನು ಕಾಣುವುದಕ್ಕೆ ಹೋಗುತ್ತಿದ್ದೇನೆ" ಎಂದು ಉತ್ತರಿಸಿದ ಚೆಲುವಯ್ಯ.

"ಹಾಗಾದರೆ ನೋಡಪ್ಪ, ನಾನು ಬೇಕಾದಷ್ಟು ಮಲ್ಲಿಗೆ ಹೂವು ಬಿಡುತ್ತೇನೆ. ಯಾರೊಬ್ಬರೂ ದೇವರಿಗೆ ನನ್ನ ಹೂವು ಇಡುವುದಿಲ್ಲ ! ಗುರುಗಳ ಪೂಜೆಗೂ ಇಡುವುದಿಲ್ಲ ! ಮುತ್ತೈದೆಯರೂ ಮುಡಿಯುವುದಿಲ್ಲ ! ಹೂ ಬಿಟ್ಟು, ಕೊಳೆತು ಉದುರಿ ಕೆಳಗೆ ಬೀಳುತ್ತದೆ. ಆದ್ದರಿಂದ ಹೀಗೇಕೆ ಆಗುತ್ತದೆ ಎಂದು "ದೇವರನ್ನು ಕೇಳಿಕೊಂಡು ಬಾ" ಎಂದು ಚೆಲುವಯ್ಯನಲ್ಲಿ ಮಲ್ಲಿಗೆಗಿಡ ವಿನಂತಿಸಿಕೊಳ್ಳುತ್ತದೆ.

ಚೆಲುವಯ್ಯ ಅಲ್ಲಿಂದ ಮುಂದಕ್ಕೆ ಹೋದ. ಅಲ್ಲೊಂದು ಹುತ್ತ ಸಿಕ್ಕಿತು. ಅದರಲ್ಲಿ ಒಂದು ಘಟಸರ್ಪ ಇತ್ತು. ಅದರ ಗಂಟಲಿನಲ್ಲಿ ಗಂಡಮಾಲೆ ಎದ್ದಿತ್ತು. ಆ ಸರ್ಪವೂ ಸಹ ಚೆಲುವಯ್ಯನಿಗೆ, 'ಈ ಗಂಡಮಾಲೆ ಏತಕ್ಕೆ ಎದ್ದಿದೆ ಎಂದು ದೇವರನ್ನು ಕೇಳಿಕೊಂಡು ಬಾ' ಎಂದು ಕೇಳಿಕೊಂಡಿತು.

ಆ ಹುತ್ತದಿಂದ ಮುಂದಕ್ಕೆ ಪ್ರಯಾಣ ಮಾಡಿದ ಚೆಲುವಯ್ಯ. ಅಲ್ಲೊಂದು ದೇವಸ್ಥಾನ ಸಿಕ್ಕಿತು. ಅದರಲ್ಲೊಂದು ದೇವರಿತ್ತು. ಆ ದೇವರು ಇವನ ಮೂಢಭಕ್ತಿಗೆ ಮೆಚ್ಚಿ ಪ್ರತ್ಯಕ್ಷವಾಯಿತು. ಆಗ ಚೆಲುವಯ್ಯ, "ದೇವರೆ, ದೇವರೆ, ಒಂದು ಹುತ್ತದೊಳಗೆ ಒಂದು ಘಟಸರ್ಪ ಇದೆ, ಅದಕ್ಕೆ ಯಾಕೆ ಗಂಡಮಾಲೆ ಎದ್ದಿದೆ" ಎಂದು ದೇವರನ್ನು ಕೇಳಿದ.

"ಏಕೆಂದರೆ, ಅದು ಹಿಂದಿನ ಜನ್ಮದಲ್ಲಿ ಒಳ್ಳೆ ವಿದ್ಯಾವಂತನಾಗಿತ್ತು. ಆಗ ತಾನು ಕಲಿತ ವಿದ್ಯೆಯು ನನ್ನಲ್ಲೇ ಇರಲಿ ಅಂತ, ಯಾರಿಗೂ ಮೂರು ಅಕ್ಷರ ಹೇಳಿಕೊಡಲಿಲ್ಲ. ಆದ್ದರಿಂದ ಅದು ಕಲಿತ ಅಕ್ಷರ ಅದರ ಗಂಟಲಿನಲ್ಲೆ ಇದೆ. ಆದ್ದರಿಂದ ಆ ಘಟಸರ್ಪಕ್ಕೆ ಗಂಡಮಾಲೆ ಎದ್ದಿದೆ. ಈಗ ಯಾರಿಗಾದರೂ ಮೂರು-ಬೀಜಾಕ್ಷರ ಹೇಳಿಕೊಟ್ಟರೆ, ಆ ಗಂಡಮಾಲೆ ವಾಸಿ ಆಗುತ್ತದೆ. ಇಲ್ಲದಿದ್ದರೆ ವಾಸಿಯಾಗುವುದಿಲ್ಲ". -ಎಂದು ದೇವರು ಚೆಲುವಯ್ಯನಿಗೆ ಹೇಳಿತು.

"ದೇವರೆ, ದೇವರೆ, ಅಲ್ಲಿ ಒಂದು ಮಲ್ಲಿಗೆ ಗಿಡ ಇದೆ. ಅದರಲ್ಲಿ ಬೇಕಾದಷ್ಟು ಹೂವು ಬಿಡುತ್ತದೆ. ಆದರೆ ಆ ಹೂವನ್ನು ಯಾರೂ ಕೀಳುವುದಿಲ್ಲ. ದೇವರಿಗೆ ಇಡುವುದಿಲ್ಲ, ಗುರೂಗಳಿಗೂ ಇಡುವುದಿಲ್ಲ ಮತ್ತು ಮುತ್ತೈದೆಯರೂ ಸಹ ಆ ಹೂವನ್ನು ಮುಡಿಯುವುದಿಲ್ಲ. ಅದು ಯಾಕೆ ?" -ಎಂದು ದೇವರನ್ನು ಚೆಲುವಯ್ಯ ಕೇಳಿದ.

"ನೋಡಪ್ಪ, ಅದು ಹಿಂದಿನ ಜನ್ಮದಲ್ಲಿ ಒಬ್ಬ ಮುತ್ತೈದೆ ಆಗಿತ್ತು. ಎಷ್ಟು ಹೂವನ್ನು ತಂದರೂ ದೇವರಿಗೂ ಇಡುತ್ತಿರಲಿಲ್ಲ. ಗುರುಗಳಿಗೂ ಇಡುತ್ತಿರಲಿಲ್ಲ. ಒಬ್ಬ ಮುತ್ತೈದೆಗೂ ಹೂವು ಕೊಡುತ್ತಿರಲಿಲ್ಲ. ಎಷ್ಟು ಹೂವನ್ನು ತಂದರು ತಾನೇ ಮುಡಿಯುತ್ತಿದ್ದಳು. ಆದ್ದರಿಂದ ಈಗಲಾದರೂ ಮೂರು ಹೂವನ್ನು ಯಾರಿಗಾದರೂ

ದಾನ ಕೊಟ್ಟರೆ, ಎಲ್ಲರೂ ಕಿತ್ತುಕೊಂಡು ಹೋಗುತ್ತಾರೆ. ಅಲ್ಲದೇ ದೇವರಿಗೂ ಇಡುತ್ತಾರೆ, ಗುರುಗಳಿಗೂ ಇಡುತ್ತಾರೆ. ಮುತ್ತೈದೆಯರೂ ಮುಡಿಯುತ್ತಾರೆ" -ಎಂದು ದೇವರು ಚೆಲುವಯ್ಯನಿಗೆ ಹೇಳಿತು.

"ದೇವರೆ, ದೇವರೆ, ಅಲ್ಲಿ ಒಂದು ಮಾವಿನ ಮರವಿದೆ. ಆ ಮಾವಿನ ಮರದಲ್ಲಿ ಬೇಕಾದಷ್ಟು ಹಣ್ಣು ಬಿಡುತ್ತದೆ. ಆದರೆ ಒಂದು ಹಕ್ಕಿ-ಪಕ್ಷಿಯೂ ಆ ಹಣ್ಣನ್ನು ತಿನ್ನುವುದಿಲ್ಲ. ನರ-ಮನುಷ್ಯರೂ ಕೀಳುವುದಿಲ್ಲ. ಅದು ಯಾಕೆ?" -ಎಂದು ಮತ್ತೆ ಕೇಳುತ್ತಾನೆ ಚೆಲುವಯ್ಯ.

"ಏಕೆಂದರೆ, ಅದೂ ಸಹ ಹಿಂದಿನ ಜನ್ಮದಲ್ಲಿ ಒಬ್ಬ ಮುತ್ತೈದೆಯಾಗಿತ್ತು. ಆಗ ಎಷ್ಟು ಹಣ್ಣು ತಂದರೂ ದೇವರಿಗೆ ಒಂದು ಹಣ್ಣನ್ನೂ ಇಡದೆ, ಒಬ್ಬ ಮುತ್ತೈದೆಗೂ ಕೊಡದೆ, ತಾನೇ ತಿನ್ನಬೇಕು ಎಂದು ಅವಳೇ ತಿನ್ನುತ್ತಿದ್ದಳು. ಆದ್ದರಿಂದ ಈಗ ದಾನ ಕೊಟ್ಟರೆ ಹಕ್ಕಿ-ಪಕ್ಷಿಯೂ ತಿನ್ನುತ್ತಾವೆ, ನರಮನುಷ್ಯರೂ ಸಹ ಕಿತ್ತುಕೊಂಡು ಹೋಗಿ ದೇವರಿಗೆ ಇಡುತ್ತಾರೆ, ನಂತರ ತಾವೂ ತಿನ್ನುತ್ತಾರೆ". -ಎಂದು ದೇವರು ಹೇಳಿತು.

"ದೇವರೆ, ದೇವರೆ, ಅಲ್ಲಿ ಒಂದು ಪಟ್ಟಣ ಇದೆ. ಅಲ್ಲಿ ದೊರೆ ಕೆರೆ ಕಟ್ಟಿಸುತ್ತಾ ಇದ್ದಾನೆ. ಆತ ಹಗಲೆಲ್ಲಾ ಕೆರೆ ಕಟ್ಟಿಸುತ್ತಾನೆ, ಆದರೆ ರಾತ್ರಿಯಾದ ಕೂಡಲೆ ಅದು ಬಿದ್ದು ಹೋಗುತ್ತದೆ. ಏಕೆ ಹೀಗಾಗುತ್ತದೆ ?" -ಎಂದು ಮತ್ತೆ ದೇವರನ್ನು ಚೆಲುವಯ್ಯ ಕೇಳುತ್ತಾನೆ ?

"ನೋಡಪ್ಪ, ಆ ದೊರೆಗೆ ಒಬ್ಬಳು ಮಗಳಿದ್ದಾಳೆ. ಆ ಮಗಳು ಪ್ರಾಯಕ್ಕೆ ಬಂದರೂ ಆ ಮಗಳನ್ನು ಯಾರಿಗೂ ಕೊಟ್ಟು ಮದುವೆ ಮಾಡಿಲ್ಲ. ಅವಳು ರಾತ್ರಿ ಹೊತ್ತು 'ಉಸ್' ಅಂತ ಉಸಿರುಬಿಟ್ಟು ಮಲಗಿಕೊಳ್ಳುತ್ತಾಳೆ. ಅವಳ ಉಸಿರು ತಗುಲಿ ಆ ಕೆರೆಕಟ್ಟಡ ಬಿದ್ದುಹೋಗುತ್ತಿದೆ. ಈಗಲಾದರೂ ರಾಜನು ತನ್ನ ಮಗಳನ್ನು ಯಾರಿಗಾದರೂ ಮದುವೆ ಮಾಡಿಕೊಟ್ಟರೆ ಕೆರೆಕಟ್ಟೆ ಒಡೆಯೋದು ನಿಲ್ಲುತ್ತದೆ". -ಎಂದು ಚೆಲುವಯ್ಯನಿಗೆ ದೇವರು ಹೇಳಿತು.

"ದೇವರೆ, ದೇವರೆ, ಅಲ್ಲೊಂದು ಊರು ಇದೆ. ಅದು ಹಗಲೆಲ್ಲ ಪಟ್ಟಣ ಆಗಿರುತ್ತದೆ. ರಾತ್ರಿ ಆದ ಕೂಡಲೇ ಬೆಂಕಿ ಹತ್ತಿಕೊಂಡು ಉರಿಯುತ್ತದೆ ಯಾಕೆ ?" -ಎಂದು ಪುನಃ ದೇವರನ್ನು ಕೇಳಿದ.

"ಹೌದಪ್ಪ, ಆ ದೊರೆಗೂ ಒಬ್ಬ ರೂಪವತಿಯಾದ ಮಗಳು ಇದ್ದಾಳೆ. ಅವಳೂ ಕೂಡ ಪ್ರಾಯಕ್ಕೆ ಬಂದಿದ್ದಾಳೆ. ಅವಳನ್ನೂ ಸಹ ಯಾರಿಗೂ ಕೊಟ್ಟು ಲಗ್ನ ಮಾಡಿಲ್ಲ. ಆದ್ದರಿಂದ ರಾತ್ರಿ ಹೊತ್ತು ಅವಳು 'ಉಸ್' ಅಂತ ಉಸಿರು ಬಿಟ್ಟು ಮಲಗಿಕೊಳ್ಳುತ್ತಾಳೆ. ಆ ಕೆಟ್ಟ ಉಸುರಿನಿಂದ ಪಟ್ಟಣ ಬೆಂಕಿ ಹತ್ತಿಕೊಂಡು ಉರಿಯುತ್ತದೆ. ಈಗಲಾದರೂ ರಾಜನು ತನ್ನ ಮಗಳನ್ನು ಯಾರಿಗಾದರೂ ಕೊಟ್ಟು ಮದುವೆ ಮಾಡಿಕೊಟ್ಟರೆ, ಬೆಂಕಿ ಹತ್ತಿಕೊಂಡು ಉರಿಯುವುದಿಲ್ಲ". -ಎಂದು ದೇವರು ಚೆಲುವಯ್ಯನಿಗೆ ಹೇಳಿತು.

ಚೆಲುವಯ್ಯ ಇಷ್ಟೆಲ್ಲ ದೇವರಿಂದ ತಿಳಿದುಕೊಂಡು, ದೇವರಿಗೆ ನಮಸ್ಕಾರ ಮಾಡಿ ಹಿಂತಿರುಗಿ ಬರುತ್ತಾನೆ. ದೇವರಲ್ಲಿ ತನಗಾಗಿ ಏನನ್ನೂ ಬೇಡುವುದಿಲ್ಲ.

ಅಲ್ಲಿಂದ ಹುತ್ತ ಇರುವ ಕಡೆ ಬರುತ್ತಾನೆ. ಆ ಸರ್ಪ ಇವನನ್ನು ಕಂಡು "ದೇವರನ್ನು ಕೇಳಿದೆಯಾ?" ಎಂದು ಕೇಳುತ್ತದೆ. "ಹೌದು ಕೇಳಿದೆ, ನೀನು ಒಂದು ಜನ್ಮದಲ್ಲಿ ಒಳ್ಳೆ ವಿದ್ಯಾವಂತನಾಗಿದ್ದೆಯಂತೆ. ನೀನು ಕಲಿತ ವಿದ್ಯೆಯನ್ನು ಯಾರಿಗೂ ಹೇಳಿಕೊಡಲಿಲ್ಲವಂತೆ. ನಿನ್ನ ಗಂಟಲಿನಲ್ಲಿಯೇ ಇಟ್ಟುಕೊಂಡಿದ್ದೆಯಂತೆ. ಈಗಲಾದರೂ ಮೂರು-ಬೀಜಾಕ್ಷರ ಯಾರಿಗಾದರೂ ಹೇಳಿಕೊಟ್ಟರೆ, ಗಂಡಮಾಲೆ ವಾಸಿಯಾಗುತ್ತದೆ" ಎಂದು ಘಟಸರ್ಪಕ್ಕೆ ಹೇಳುತ್ತಾನೆ ಚೆಲುವಯ್ಯ. ಆಗ ಆ ಸರ್ಪ 'ನಾನು ಈಗ ಯಾರನ್ನು ಹುಡುಕಲಿ, ಉಪಕಾರ ಮಾಡಿದ ನಿನಗೇ ಹೇಳಿಕೊಡುತ್ತೇನೆ' ಎಂದು, ಆತನ ನಾಲಿಗೆ ಮೇಲೆ ಮೂರು-ಬೀಜಾಕ್ಷರ ಬರೆಯುತ್ತದೆ. ಆಗ ಅದರ ಖಾಯಿಲೆ ವಾಸಿಯಾಗುತ್ತದೆ.

ಅಲ್ಲಿಂದ ಮುಂದೆ ಮಲ್ಲಿಗೆ ಗಿಡದ ಹತ್ತಿರ ಬರುತ್ತಾನೆ. ಅದೂ ಸಹ 'ದೇವರನ್ನು ಕೇಳಿದೆಯಾ ? ಎಂದು ಕೇಳುತ್ತದೆ. 'ಹೌದು ಕೇಳಿದೆ, ನೀನೊಂದು ಜನ್ಮದಲ್ಲಿ ಒಬ್ಬ ಮುತ್ತೈದೆ ಆಗಿದ್ದೆಯಂತೆ. ಆಗ ಎಷ್ಟು ಹೂವು ತಂದರೂ ಸಹ,

ಒಂದೂ ದೇವರಿಗೆ ಇಡುತ್ತಿರಲಿಲ್ಲ. ಒಂದು ಹೂವನ್ನೂ ಗುರುಗಳಿಗೆ ಇಡುತ್ತಿರಲಿಲ್ಲ. ಯಾವ ಮುತ್ತೈದೆಯರಿಗೂ ಹೂವನ್ನು ಕೊಡುತ್ತಿರಲಿಲ್ಲವಂತೆ. ಆದ್ದರಿಂದ ಈಗಲಾದರೂ ಮೂರು ಹೂವನ್ನು ಯಾರಿಗಾದರೂ ದಾನ ಕೊಟ್ಟರೆ, ಎಲ್ಲರೂ ಕಿತ್ತುಕೊಂಡು ಹೋಗುತ್ತಾರೆ. ದೇವರಿಗೂ, ಗುರುಗಳಿಗೂ ಇಡುತ್ತಾರೆ. ಮುತ್ತೈದೆಯರೂ ಸಹ ಮುಡಿದುಕೊಳ್ಳುತ್ತಾರೆ ಎಂದು ಚೆಲುವಯ್ಯ ಹೇಳುತ್ತಾನೆ. ಆಗ ಮಲ್ಲಿಗೆಗಿಡ, "ನಾನು ಈಗ ಯಾರಿಗೆ ಅಂತ ಕೊಡಲಿ. ನೀನು ನನಗೆ ಉಪಕಾರವನ್ನು' ಮಾಡಿರುವೆ. ಆದ್ದರಿಂದ ನಿನಗೇ ಕೊಡುತ್ತೇನೆ" ಎಂದು ಮಲ್ಲಿಗೆಗಿಡ ಚೆಲುವಯ್ಯನಿಗೆ ತನ್ನ ಮೂರು ಹೂವನ್ನು ದಾನ ಕೊಟ್ಟಿತು.

-ಅಲ್ಲಿಂದ ಮುಂದೆ ಮಾವಿನಮರದ ಹತ್ತಿರ ಬರುತ್ತಾನೆ. ಅದೂ ಸಹ 'ದೇವರನ್ನು ಕೇಳಿದೆಯಾ ?' ಅಂತ ಕೇಳಿತು. "ಹೌದು ಕೇಳಿದೆ. ನೀನು ಒಂದು ಜನ್ಮದಲ್ಲಿ ಒಬ್ಬ ಮುತ್ತೈದೆಯಾಗಿದ್ದೆ. ಆಗ ಎಷ್ಟು ಹಣ್ಣು ತಂದರೂ ದೇವರಿಗೂ ಕೊಡುತ್ತಿರಲಿಲ್ಲ, ಒಬ್ಬ ಗುರುಗಳಿಗೂ ಕೊಡುತ್ತಿರಲಿಲ್ಲ. ಒಬ್ಬರಿಗೆ ಒಂದು ಹೋಳೂ ಕೂಡ ಕೊಡುತ್ತಿರಲಿಲ್ಲ. ಆದ್ದರಿಂದ ಈಗಲಾದರೂ ಮೂರು ಹಣ್ಣನ್ನು ಯಾರಿಗಾದರೂ ದಾನ ಕೊಟ್ಟರೆ, ಎಲ್ಲರೂ ನಿನ್ನ ಹಣ್ಣನ್ನು ತಿನ್ನುತ್ತಾರೆ. ಹಕ್ಕಿ-ಪಕ್ಷಿನೂ ತಿನ್ನುತ್ತಾವೆ. ಎಂದು ಚೆಲುವಯ್ಯ ಹೇಳಿದ. ಆಗ ಆ ಮಾವಿನ ಮರ "ನಾ ಇನ್ನು ಯಾರಿಗೆ ಕೊಡಲಿ, ನೀನು ನನಗೆ ಉಪಕಾರ ಮಾಡಿರುವೆ. ಆದ್ದರಿಂದ ನೀನೆ ತೆಗೆದುಕೊ" ಎಂದು ಮಾವಿನಮರ ಚೆಲುವಯ್ಯನಿಗೆ ತನ್ನ ಮೂರು ಹಣ್ಣನ್ನು ಕೊಟ್ಟಿತು.

ಚೆಲುವಯ್ಯ ಅಲ್ಲಿಂದ ಮುಂದೆ ಹೊರಟ. ಕೆರೆ ಕಟ್ಟಿಸುತ್ತಿದ್ದ ದೊರೆಯನ್ನು ಭೇಟಿಯಾದಾಗ, ಆ ದೊರೆ "ದೇವರನ್ನು ಕೇಳಿದೆಯಾ ?" ಎಂದು ಕೇಳಿದ. "ಹೌದು ಕೇಳಿದೆ, ನಿನಗೊಬ್ಬಳು ಪ್ರಾಯದ ಮಗಳು ಅವಳಂತೆ. ಅವಳನ್ನ ಯಾರಿಗಾದರೂ ಕೊಟ್ಟು, ಮದುವೆ ಮಾಡಿಕೊಟ್ಟರೆ ಕೆರೆ ಕಟ್ಟಿದ್ದು ನಿಲ್ಲುತ್ತದೆ". ಎಂದು ಹೇಳುತ್ತಾನೆ ಚೆಲುವಯ್ಯ. ಆಗ ಆ ದೊರೆ "ಇನ್ನು ಯಾರಿಗೆ ಕೊಟ್ಟು, ಮದುವೆ ಮಾಡಲಿ, ನನಗೆ ಉಪಕಾರ ಮಾಡಿದ ನಿನಗೇ ನನ್ನ ಮಗಳನ್ನು ಕೊಡುತ್ತೇನೆ" ಎಂದು ತನ್ನ ಮಗಳನ್ನು ಆತನಿಗೇ ಕೊಟ್ಟು, ಮದುವೆ ಮಾಡಿದ.

ಅನಂತರ ಚೆಲುವಯ್ಯ ಅಲ್ಲಿಂದ ಹೆಂಡತಿಯನ್ನು ತನ್ನ ಜೊತೆಯಲ್ಲಿ ಕರೆದುಕೊಂಡು, ದಂಡು-ದಾಳಿ ತೆಗೆದುಕೊಂಡು ಮುಂದೆ ಬರುತ್ತಾನೆ. ಅಲ್ಲಿ ಆ ಪಟ್ಟಣದ ದೊರೆಯನ್ನು ಭೇಟಿಯಾದ, ಆ ದೊರೆ "ದೇವರನ್ನು ಕೇಳಿದೆಯಾ ?" ಅಂತ ಕೇಳುತ್ತಾನೆ. "ಹೌದು ಕೇಳಿದೆ, ನಿನಗೊಬ್ಬಳು ಪ್ರಾಯದ ಮಗಳು ಇದ್ದಾಳಂತೆ. ಅವಳು 'ಉಸ್' ಅಂತ ಉಸಿರುಬಿಟ್ಟು ರಾತ್ರಿ ಹೊತ್ತು ಮಲಗುತ್ತಾಳೆ. ಆ ಬಿಸಿ ಉಸಿರು ತಗುಲಿಯೇ ಈ ಪಟ್ಟಣ ಬೆಂಕಿ ಹತ್ತಿಕೊಂಡು ಉರಿಯುತ್ತದಂತೆ. ಆದ್ದರಿಂದ ಈಗಲಾದರೂ ಯಾರಿಗಾದರೂ ನಿನ್ನ ಮಗಳನ್ನು ಕೊಟ್ಟು ಮದುವೆ ಮಾಡಿದರೆ ಪಟ್ಟಣಕ್ಕೆ ಬೆಂಕಿ ಹತ್ತಿಕೊಂಡು ಉರಿಯುವುದಿಲ್ಲವಂತೆ" ಎಂದು ಹೇಳುತ್ತಾನೆ ಚೆಲುವಯ್ಯ. ಆಗ ಆ ರಾಜ "ನಾನು ಯಾರಿಗೆ ಅಂತ ನನ್ನ ಮಗಳನ್ನು ಕೊಟ್ಟು ಮದುವೆ ಮಾಡಲಿ. ನನಗೆ ಉಪಕಾರ ಮಾಡಿದ ನಿನಗೇ ನನ್ನ ಮಗಳನ್ನು ಕೊಡುವೆ" ಎಂದು ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದ. ಚೆಲುವಯ್ಯ ಆ ಪಟ್ಟಣ ಈ ಪಟ್ಟಣಗಳನ್ನು ಒಂದೆ ಮಾಡಿಕೊಂಡು ದೊರೆತನ ಮಾಡುತ್ತಿದ್ದನು. ಈ ಪಟ್ಟಣದಲ್ಲಿ ಬಡವರಿಗಾಗಿ ಒಂದು ಅನ್ನ ಛತ್ರವನ್ನು ಪ್ರಾರಂಭಿಸಿದ.


-ಚೆಲುವಯ್ಯ ತನ್ನ ತಂದೆ ತಾಯಿಗಳ ಪಟ್ಟಣವನ್ನು ಬಿಟ್ಟು ಬಂದಿದ್ದನು. ಅವರ ಪಟ್ಟಣ ಪರರಾಜರ ವಶವಾಯಿತು. ಏಕೆಂದರೆ ಈ ಚೆಲುವಯ್ಯನಲ್ಲಿ ಲಕ್ಷ್ಮಿ ನೆಲೆಸಿದ್ದಳು. ಆದ್ದರಿಂದ ಇವನು ಅಲ್ಲಿ ಇರುವವರೆಗೂ ಆ ಪಟ್ಟಣಕ್ಕೆ ಯಾರೂ ಏನೂ ಮಾಡುವುದಕ್ಕೆ ಆಗಿರಲಿಲ್ಲ. ಅವನು ತನ್ನ ರಾಜ್ಯವನ್ನು ಬಿಟ್ಟು ಬಂದ ಮೇಲೆ, ಅದು ಪರರಾಜರ ವಶವಾಯಿತು. ಅಂದಿನಿಂದ ಅವನ ತಂದೆ, ತಾಯಿ, ಅಣ್ಣಂದಿರು, ಆರುಜನ ಅತ್ತಿಗೆಯರು ಹಾಗೂ ಅವನ ಮೊದಲನೇ ಹೆಂಡತಿ ಎಲ್ಲರೂ ಜೀವನಕ್ಕಾಗಿ ಹಂಚಿಹುಲ್ಲು, ಸೌದೆ ಮಾರುತ್ತ ಹೇಗೋ ಬಾಳುವೆ ನಡೆಸುತ್ತಾ ಹೊಸ ಪಟ್ಟಣಕ್ಕೆ ಎಲ್ಲರೂ ಬಂದರು.

ಏಳು ಅಂತಸ್ತಿನ ಉಪ್ಪರಿಗೆಯಿಂದ ಅವರು ಬರುವುದನ್ನೆಲ್ಲಾ ಚೆಲುವಯ್ಯ ನೋಡುತ್ತಾನೆ. ಆಗ ತನ್ನ ಆಳುಗಳನ್ನು ಕಳುಹಿಸಿ, ಅವರನ್ನೆಲ್ಲ ಅನ್ನಛತ್ರಕ್ಕೆ ಕರೆಸಿ, ಅಲ್ಲಿ ಅವರಿಗೆ ಮಲ್ಲಿಗೆ ಎಣ್ಣೆ ಒತ್ತಿಸಿ, ಬಿಸಿನೀರು ಹಾಕಿಸಿ, ಎಲ್ಲರಿಗೂ ಒಳ್ಳೆಯ ಬಟ್ಟೆ, ವಸ್ತ್ರಗಳನ್ನು ಉಡಿಸಿದ. ತನ್ನ ಖಾಸ ಅಡಿಗೆಯವರಿಂದ ಅವರೆಲ್ಲರಿಗೂ ಒಳ್ಳೆ

ಊಟ ಮಾಡಿಸಿದ. ಆಗ ನೆಲ್ಲು ಕುಟ್ಟುತ್ತಿದ್ದ ಅವನ ಮೊದಲನೆ ಹೆಂಡತಿಯ ಒನಕೆ ಚಿಗುರಿ ಮರವಾಗುತ್ತದೆ. ಕಡವಾಡು ಬೇರು ಬಿಡುತ್ತದೆ.

ಆಗ, "ನಿಮಗೆಷ್ಟು ಜನ ಮಕ್ಕಳು?" ಎಂದು ತನ್ನ ತಂದೆಯನ್ನು ಚೆಲುವಯ್ಯ ಕೇಳಿದ. "ಏಳು ಜನ ಗಂಡುಮಕ್ಕಳು ಇದ್ದರು. ಈಗ ಆರು ಜನಮಾತ್ರ ಇದಾರೆ. ಇನ್ನೊಬ್ಬ ಮಗ ಚೆಲುವಯ್ಯ ಎಂಬುವನು. ಅವನು ಎಲ್ಲಿಯೋ ದೇಶಾಂತರ ಹೋಗಿಬಿಟ್ಟ" ಎಂದು ಅವನ ತಂದೆ ಹೇಳಿದ. ಆಗ "ನಾನೇ ಚೆಲುವಯ್ಯ ನಿಮ್ಮ ಚಿಕ್ಕ ಮಗ" ಎಂದು ತನ್ನ ಗುರುತನ್ನು ಹೇಳಿದ. ಆಗ ಅವನ ತಂದೆ, ಇನ್ನು ನಮ್ಮ "ಕಷ್ಟ ದೂರವಾಯಿತು ಒಂದು ಭುಜ ಹದಿನಾರು ಭುಜವಾಯ್ತು", ಎಂದು ಸಂತೋಷಪಟ್ಟ. ಚೆಲುವಯ್ಯ ತನ್ನ ಆರು ಜನ ಅಣ್ಣಂದಿರಿಗೂ ಆರು ಮನೆ ಕಟ್ಟಿಸಿಕೊಟ್ಟ. ಅವನ ತಂದೆ, ತಾಯಿ ಮತ್ತು ಮೂವರು ಹೆಂಡತಿಯರೂ ಎಲ್ಲರೂ ಸುಖವಾಗಿದ್ದರು.

೦



## ಹೂವಾದ ಹುಡುಗಿ

ಒಂದು ಪಟ್ಟಣ. ಅಲ್ಲೊಬ್ಬ ದೊರೆಯಿದ್ದ. ಆತನಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತೆ ಒಬ್ಬ ಮಗ. ದೊರೆಯ ಮೊದಲನೆ ಹೆಣ್ಣುಮಗಳಿಗೆ ಲಗ್ನವಾಗಿತ್ತು.

ಅದೇ ಊರಿನಲ್ಲಿ ಒಬ್ಬ ಮುದುಕಿಯಿದ್ದಳು. ಅವಳಿಗೆ ಇಬ್ಬರು ಹೆಣ್ಣುಮಕ್ಕಳು. ಆ ಮುದುಕಿ ಕೂಲಿಮಾಡಿ ತನ್ನ ಮಕ್ಕಳನ್ನು ಸಾಕುತ್ತಿದ್ದಳು. ಒಂದುದಿನ ತಂಗಿ, "ಅಕ್ಕಯ್ಯ ಹೋದಷ್ಟು ದಿನಕ್ಕೆ ಅಮ್ಮ ಕೂಲಿಮಾಡಿ ನಮ್ಮನ್ನು ಸಾಕಬೇಕು ಅಂದ್ರೆ ಕಷ್ಟ. ಆದ್ದರಿಂದ ನಾನು ಹೂವಿನ ಗಿಡ ಆಗ್ತೀನಿ, ನೀನು ಹೂ ತಗೊಂಡು ಹೋಗಿ ಮಾರ್ಕೊಂಡು ಬಂದ್ಬಿಡೇ" ಎಂದು ಅಕ್ಕನಿಗೆ ಹೇಳಿದಳು. ಅಕ್ಕನಿಗೆ ಕುತೂಹಲ ಕೆರಳಿ, "ಅದು ಹೇಗೆ ಹೂವಿನ ಗಿಡ ಆಗ್ತೀಯೆ?" ಎಂದು ತಂಗಿಯನ್ನು ಕೇಳಿದಳು. "ಅದೆಲ್ಲ ನಾನು ಆಮೇಲೆ ಹೇಳ್ತೀನಿ ಕಣೆ, ಮೊದಲು ಮನೆಯೆಲ್ಲ ಸಾರಿಸಿಬಿಡು. ನೀನು ಸ್ನಾನಮಾಡಿ ಬಾವಿಯಿಂದ ಚಿಳ್‌ಉಗುರು ಸೋಂಕದ ಹಾಗೆ ಎರಡು ತಂಬಿಗೆ ನೀರು ತಗೊಂಡು ಬಾ" ಅಂದಳು. ಅಕ್ಕ ತಂಗಿಯ ಮಾತಿನಂತೆ ಹೋಗಿ ಸ್ನಾನ ಮಡಿಮಾಡಿ, ಚಿಳ್‌ಉಗುರು ಸೋಕದ ಹಾಗೆ ಎರಡು ತಂಬಿಗೆ ನೀರು ತಂದಳು. ಇವರ ಮನೆ ಎದುರಿಗೆ ಒಂದು ದೊಡ್ಡ ಮರವಿತ್ತು. ಅಲ್ಲೂ ಗುಡಿಸಿ ಸಾರಿಸಿದಳು. ಅಲ್ಲಿಗೆ ಇಬ್ಬರೂ ಹೋದರು. ತಂಗಿ ಅಕ್ಕನನ್ನು ಕರೆದು, "ನೋಡಕ್ಕಯ್ಯ, ನಾನಿಲ್ಲಿ ದೇವರನ್ನು ಧ್ಯಾನಮಾಡಿ ಕುಳಿತ್ಕೋತೀನಿ. ನೀನು ಈ ತಂಬಿಗೆ ನೀರನ್ನೆಲ್ಲ ನನ್ನ ಮೈಮೇಲೆ ಸುರಿದುಬಿಡು. ನಾನು ಹೂವಿನ ಗಿಡ ಆಗ್ತೀನಿ. ಸುಳಿ ಮುರಿಯದ ಹಾಗೆ, ಎಲೆ ಮುರಿಯದ ಹಾಗೆ ಬೇಕಾದಷ್ಟು ಹೂವು ಕಿತ್ತಿಕೊ. ನಿನಗೆ ಸಾಕಾದ ಮೇಲೆ ಈ ತಂಬಿಗೆ ನೀರು ನನ್ನ ಮೇಲೆ ಸುರಿದುಬಿಡು. ಪುನಃ ನಾನು ಮನುಷ್ಯ.



ಆಗ್ತೀನಿ" ಅಂದಳು. ತಂಗಿ ದೇವರನ್ನು ನೆನೆದು ಕುಳಿತುಕೊಂಡಳು. ದೊಡ್ಡವಳು ಒಂದು ತಂಬಿಗೆ ನೀರನ್ನು ಅವಳ ಮೇಲೆ ಸುರಿದಳು. ಸರಿ, ಭೂಮಿಗೂ ಆಕಾಶಕ್ಕೂ ಏಕವಾದ ಹಾಗೆ, ತಂಗಿ ಹೂವಿನ ಗಿಡವಾದಳು. ಆಗ ಅಕ್ಕ, ಸುಳಿ, ಎಲೆ, ತೊಟ್ಟು ಮುರಿಯದ ಹಾಗೆ ಹೂವನ್ನು ಬಿಡಿಸಿಕೊಂಡಳು. ಬೇಕಾದಷ್ಟು ಹೂವು ಕಿತ್ತುಕೊಂಡ ಮೇಲೆ ಮತ್ತೊಂದು ತಂಬಿಗೆ ನೀರನ್ನು ಗಿಡದಮೇಲೆ ಸುರಿದಳು. ಯಥಾಸ್ಥಿತಿಯಂತೆ ತಂಗಿ ಲಕ್ಷಣವಾಗಿ ಮನುಷ್ಯಳಾದಳು. ಮಂಡೆ ಒದರಿಕೊಂಡು ಎದ್ದು ನಿಂತಳು.

ಅನಂತರ ಇಬ್ಬರೂ ಆ ಹೂವನ್ನೆಲ್ಲ ಬುಟ್ಟಿಗೆ ತುಂಬಿ ಮನೆಗೆ ತಂದರು. ಹೂವು ಗಮಗಮ ಅನ್ನುತ್ತಿತ್ತು. ಇಬ್ಬರೂ ಸೇರಿ ಹೂವು ಕಟ್ಟಿದರು. "ಎಲ್ಲಿಗೆ ತಗೊಂಡು ಹೋಗಿ ಮಾರಲಿ" ಅಂದಳು ದೊಡ್ಡವಳು. "ಅಕ್ಕಯ್ಯ, ದೊರೆಮನೆಗೆ ತಗೊಂಡು ಹೋಗು. ಅವರು ಹೆಚ್ಚಿಗೆ ಹಣ ಕೊಡುತ್ತಾರೆ. ಅಮ್ಮ ನಮಗೋಸ್ಕರ ಯಾವಾಗಲೂ ಕೂಲಿ ಮಾಡುತ್ತಿರುತ್ತಾಳೆ. ಹೆಚ್ಚು ಹಣ ಕೂಡಿಹಾಕಿ ಅಮ್ಮನಿಗೆ ತೋರಿಸೋಣ" ಅಂದಳು ಚಿಕ್ಕವಳು.

ಅಕ್ಕ ಒಂದು ಬುಟ್ಟಿಯಲ್ಲಿ ಹೂವನ್ನೆಲ್ಲ ಇಟ್ಟುಕೊಂಡು, "ಹೂವು ಬೇಕೇನಮ್ಮ ಹೂವು" ಅಂತ ಕೂಗಿಕೊಂಡು ದೊರೆಯ ಮನೆ ಮುಂದೆ ಬಂದಳು. ದೊರೆಯ ಚಿಕ್ಕಮಗಳು "ಅಮ್ಮ, ಅಮ್ಮ, ಹೂವು ಗಮಗಮ ಅಂತಾವೆ ಕೊಡಿಸಿ ಕೊಡು" ಅಂತ ತನ್ನ ತಾಯಿಯನ್ನು ಕೇಳಿದಳು. "ಸರಿ ಕೂಗಮ್ಮ" ಅಂದಳು ತಾಯಿ. ದೊರೆಮಗಳು ಕೂಗಿದಳು. ದೊರೆ ಹೆಂಡತಿ ಹೂವನ್ನು ನೋಡಿದಳು, ಚೆನ್ನಾಗಿತ್ತು; ಆದ್ದರಿಂದ. "ಎಷ್ಟಮ್ಮ ಬೆಲೆ?" ಅಂತ ಕೇಳಿದಳು. "ಎಷ್ಟಾನ ಕೊಡಿರವ್ವ; ನಾವು ಬಡವರು" ಅಂದಳು ಅಕ್ಕ. ದೊರೆ ಹೆಂಡತಿ ಹೂವು ತಗೊಂಡು ಒಂದು ಮೊಗೆ ಹಣ ಕೊಟ್ಟು ಕಳುಹಿಸಿದಳು. ಅಕ್ಕ ಮೊಗೆ ಹಣ ತಂದು ತಂಗಿಗೆ ತೋರಿಸಿದಳು. ತಂಗಿ, "ಅಕ್ಕಯ್ಯ ಅಮ್ಮನಿಗೆ ಹೇಳಬೇಡ, ಮುಚ್ಚಿಡು" ಅಂದಳು. ಹೀಗೆಯೆ ಕೆಲವು ದಿನ ಮಾಡಿದರು. ಒಟ್ಟು ಐದು ಮೊಗೆ ಹಣವಾಯಿತು. ಅಕ್ಕ "ಅಮ್ಮನಿಗೆ ತೋರಿಸೋಣ?" ಅಂದಳು. "ಬೇಡವೆ ತಂಗಿ, ಅಮ್ಮ ಹೊಡೀತಾಳೆ" ಅಂತ ಅವರವರೆ ಮಾತನಾಡಿಕೊಂಡರು. ಈ ಹುಡಿಗಿಯರಿಗೆ ಸಂಪಾದನೆ ಮಾಡೋ ಆಶೆ.

ಈ ಹೂವು ದೊರೆಮಗನ ಕಣ್ಣಿಗೆ ಬಿತ್ತು. ಒಳ್ಳೆ ಗಮಗಮ ಅನ್ನುತಿತ್ತು. ಇಂತಹ ಸೊಗಸಾದ ಹೂವನ್ನು ಅವನೆಂದೂ ನೋಡೇ ಇರಲಿಲ್ಲ. "ಇದು ಯಾವ ಗಿಡದ್ದು, ಇದನ್ನು ಎಲ್ಲಿ ಬೆಳೀತಾರೆ, ಅರಮನೆಗೆ ಯಾರು ತಂದು ಕೊಡ್ತಾರೆ" ಎಂದೆಲ್ಲ ಯೋಚನೆ ಮಾಡಿದ. ಆ ದೊಡ್ಡ ಹುಡುಗಿ ತಂದು ಕೊಡುವುದನ್ನು ನೋಡಿ, ಅವಳನ್ನೇ ಹಿಂಬಾಲಿಸಿದ. ಅವಳ ಮನೆ ಹತ್ತಿರ ವೇಷಮರೆಸಿಕೊಂಡು ಹೋಗಿ ನೋಡಿದ. ಆ ಮುದುಕಿ ಮನೆಯ ಒಳಗಡೆಯೇ ಆಗಲಿ, ಆ ಮನೆಯ ಸುತ್ತಮುತ್ತಲೇ ಆಗಲಿ ಒಂದು ಹೂವಿನ ಗಿಡವಿರಲಿಲ್ಲ. ಅವನಿಗೆ ಆಶ್ಚರ್ಯವಾಯಿತು. ಇಂಥ ಹೂವು ಇವರಿಗೆಲ್ಲಿಂದ ಬರುತ್ತದೆ ಎಂದು ಯೋಚನೆ ಮಾಡಿ ಅರಮನೆಗೆ





ಬಂದ. ಮಾರನೆಯ ದಿನ ಬೆಳಿಗ್ಗೆ ಸೂರ್ಯ ಹುಟ್ಟುವ ಮೊದಲೇ ಹೋಗಿ ಹುಡುಗಿಯರ ಮನೆ ಮುಂದಿದ್ದ ದೊಡ್ಡ ಮರದಮೇಲೆ ಕುಳಿತುಕೊಂಡ.

ಅಂದೂ ಸಹ ಹುಡುಗಿಯರು, ಆ ಮರದಡಿ ಸಾರಿಸಿ ಗುಡಿಸಿದರು. ತಂಗಿ ಯಥಾಪ್ರಕಾರ ಹೂವಿನ ಗಿಡವಾದಳು. ಅಕ್ಕ ಎಚ್ಚರಿಕೆಯಿಂದ ಹೂ ಬಿಡಿಸಿಕೊಂಡಳು. ಅನಂತರ ಪುನಃ ಹೂವಿನ ಗಿಡವಾಗಿದ್ದ ತಂಗಿ ಮನುಷ್ಯಳಾದಳು. ಇದೆಲ್ಲವನ್ನೂ ಮರದ ಮೇಲಿದ್ದ ದೊರೆಮಗ ನೋಡಿಕೊಂಡ. ಆಮೇಲೆ ಸೀದಾ ಅರಮನೆಗೆ ಹೋಗಿ ಮಂಚದ ಮೇಲೆ ಮಕಾಡೆ ಮಲಗಿಕೊಂಡ. ತಂದೆ-ತಾಯಿ ಬಂದು ಅವನನ್ನು ವಿಚಾರಿಸಿದರು. ಏನೂ ಮಾತಾಡದೆ ಸುಮ್ಮನೆ ಮಲಗಿದ್ದ. ಆಗ ಮಂತ್ರಿಮಗ ಬಂದು; "ಏನಾಯಿತು? ಯಾರಾದರೂ ಏನಾದರೂ ಅಂದರಾ? ಈಗ ಏನಾಗಬೇಕು" ಅಂತ ಕೇಳಿದ. ಆಗ ದೊರೆಮಗ ಮೆಲ್ಲಗೆ ಹೂವು ಆಗೋ ಹುಡುಗಿ ವಿಚಾರವೆಲ್ಲ ಹೇಳಿದ. "ಇಷ್ಟೆತಾನೆ" ಎಂದು ಮಂತ್ರಿಮಗ ದೊರೆ ಹತ್ತಿರ ಹೋಗಿ ಹೇಳಿದ. ದೊರೆ ಮಂತ್ರಿನ ಕಳುಹಿಸಿ, ಮುದುಕಿಯನ್ನು ಅರಮನೆಗೆ ಕರೆಸಿಕೊಂಡ. ಆಕೆ ಗಾಬರಿಯಲ್ಲಿ ನಡುಗುತ್ತಾ ಬಂದಳು. ಹರಿದ ಹಳೆ ಬಟ್ಟೆಯಲ್ಲಿ ಬಂದಿದ್ದಳು. ಬಾಗಿಲ ಹತ್ತಿರ ಕುಳಿತುಕೊಂಡಳು. ದೊರೆ ಅವಳನ್ನು ಒಳಗೆ ಕರೆದು, ಮೆತುವಾಗಿ, "ಏನಮ್ಮ ನಿನ್ನ ಮನೆಯಲ್ಲಿ ಎರಡು ಹೆಣ್ಣುಮಕ್ಕಳು ಇದೆಯಲ್ಲ, ಅದರಲ್ಲಿ ಒಬ್ಬಳನ್ನು ನಮ್ಮ ಮನೆಗೆ ಕೊಡ್ತಿಯಾ?" ಅಂತ ಕೇಳಿದ. "ನನ್ನ ಮನೆ ಹೆಣ್ಣುಮಕ್ಕಳ ವಿಚಾರ ದೊರೆಗೆ ಹೇಗೆ ಗೊತ್ತಾಯಿತು" ಎಂದು ಮುದುಕಿ ಗಾಬರಿಗೊಂಡಳು. "ಆಗಲಿ ಸ್ವಾಮಿ. ನೀವು ಕೇಳುವುದು ಹೆಚ್ಚೊ, ನಾವು ಕೊಡುವುದು ಹೆಚ್ಚೊ" ಅಂದಳು ತಡವರಿಸುತ್ತಾ. ದೊರೆ ಬೆಳ್ಳಿ ತಟ್ಟೆಯಲ್ಲಿ ಅಡಿಕೆ-ಎಲೆ ತಾಂಬೂಲ ಕೊಡಿಸಿದ. ಮುದುಕಿ ಭಯದಿಂದ ಮುಟ್ಟಲೇ ಇಲ್ಲ. ಆದರೆ ದೊರೆ ಬಲವಂತವಾಗಿ ತಾಂಬೂಲ ಕೊಟ್ಟು ಮುದುಕಿಯನ್ನು ಕಳುಹಿಸಿದ.

ಮುದುಕಿ ಮನೆಗೆ ಬಂದಳು. ಕೈಗೆ ಪೊರಕೆ ತೆಗೆದುಕೊಂಡು, "ಏನೆ ಮುಂಡೇರಾ, ಎಲ್ಲಿಗೆ ಹೋಗಿದ್ದಿರಿ?. ದೊರೆ ನಿಮ್ಮನ್ನು ಕೇಳಬೇಕಾದರೆ ನೀವು ಎಲ್ಲಿಗೆ ಹೋಗಿದ್ದಿರಿ?" ಅಂತ ಇಬ್ಬರನ್ನೂ ಬೈದು ಹೊಡೆದಳು. ಆ ಹೆಣ್ಣುಮಕ್ಕಳು ಗಾಬರಿಯಾಗಿ ವಿಷಯವೇನೆಂದು ತಿಳಿಯದೆ "ಅಮ್ಮ ನಮ್ಮನ್ನೇಕೆ ಹೊಡಿತ್ಯಾ," ಅಂತ ಅಳುತ್ತಾ ನಿಂತರು. "ನಿಮ್ಮನ್ನು ಹೊಡಿದಿದ್ರೆ ಇನ್ಯಾರನ್ನ ಹೊಡೀಲಿ. ಯಾವ

ಮನೆಗೆ ಹೋಗಿದ್ರಿ. ಹೇಗೆ ನಿಮ್ಮ ವಿಷಯ ದೊರೆಗೆ ತಿಳೀತು" ಎಂದು ಗದರಿದಳು ಮುದುಕಿ. ಅವರಿಬ್ಬರೂ ಅಂಜುತ್ತಾ ಅಂಜುತ್ತಾ, ಹೂವಿನ ಗಿಡ ಆದದ್ದು, ಹೂ ಮಾರಿದ್ದು, ಹಣ ಕೂಡಿಸಿದ್ದು ಹೇಳಿ, ಐದು ಮೊಗೆ ಹಣ ತೋರಿಸಿದರು. "ಮನೆಯಲ್ಲಿ ಹಿರಿಯಳು ನಾನಿರುವಾಗ, ಅದೆಂಗೆ ಮಾಡಿದ್ರೆ ಇದನ್ನೆಲ್ಲ, ಮನುಷ್ಯರು ಹೂವಿನಗಿಡ ಆಗ್ತಾರೇನೆ. ಸುಳ್ಳು-ಸುಳ್ಳೇ ಬೊಗಳ್ತೀರಾ? ಅದೆಂಗೆ ಹೂವಿನ ಗಿಡ ಆಗ್ತೀರ ತೋರಿಸ್ರೇ" ಎಂದು ಹೇಳುತ್ತಾ ಮತ್ತಷ್ಟು ಬಡಿದಳು. ಕಡೆಗೆ ಚಿಕ್ಕವಳು ಹೂವಿನ ಗಿಡವಾಗಿ, ಪುನಃ ಮನುಷ್ಯಳಾಗಿ, ತಾಯಿಯನ್ನು ಸಮಾಧಾನ ಪಡಿಸಿದಳು.

ಮಾರನೆದಿನ ಮುದುಕಿ ಮನೆಮುಂದೆ ದೊರೆಯ ಆಳುಗಳು ಬಂದು, "ದೊರೆ ಅಪ್ಪಣೆಯಾಗಿದೆ ಬಾರಮ್ಮ" ಅಂತ ಕರೆದರು. ಮುದುಕಿ ಅರಮನೆಗೆ ಹೋಗಿ. "ಏನು ಸ್ವಾಮಿ ಬರಹೇಳಿದ್ದು" ಎಂದು ಕೇಳಿದಳು. "ಏನಮ್ಮ ಈಗ ಲಗ್ನ ಕಟ್ಟಿಸಬೇಕು. ಏನು ಹೇಳ್ತಿ" ಎಂದು ದೊರೆ ಕೇಳಿದ."ಹೇಳೋದೇನು ಬಂತು ಸ್ವಾಮಿ, ತಮ್ಮ ಇಚ್ಛೆಯಂತಾಗಲಿ" ಎಂದಳು ಮುದುಕಿ.

ಲಗ್ನದ ಸಿದ್ಧತೆಯಲ್ಲಾ ಪ್ರಾರಂಭವಾಯ್ತು. ಆಕಾಶದಗಲ ಹಸೆಬರೆದರು. ಭೂಮ್ತಾಯಗಲ ಚಪ್ಪರ ಹಾಕಿದರು. ನೆಂಟರಿಷ್ಟರೆಲ್ಲ ಬಂದರು. ಒಳ್ಳೆ ಮುಹೂರ್ತದಲ್ಲಿ, ಹೂವಿನ ಗಿಡವಾಗಿದ್ದ ಹುಡುಗಿ ಜೊತೆಯಲ್ಲಿ ರಾಜಕುಮಾರನ ಲಗ್ನವಾಯಿತು. ಅರಮನೆಯಲ್ಲಿ ಇವರಿಬ್ಬರನ್ನು ಏಕಾಂತದಲ್ಲಿ ಬಿಟ್ಟರು. ಇವನಷ್ಟಕ್ಕೆ ಇವನಿದ್ದಾನೆ. ಅವಳಷ್ಟಕ್ಕೆ ಅವಳಿದ್ದಾಳೆ. ಅವರೇ ಮಾತನಾಡಿಸಲಿ ಅಂತ ಇವಳು. ಅವಳೇ ಮಾತನಾಡಿಸಲಿ ಅಂತ ಅವನು. ಹೀಗೆ ಇಬ್ಬರೂ ಗುಮ್ಮಾಗಿ ಸುಮ್ಮನಿದ್ದರು. "ಏನು ಅವರು ಮಾತನಾಡಿಸಲೇ ಇಲ್ಲವಲ್ಲ, ಮತ್ತೇಕೆ ಮದುವೆಯಾದರು" ಅಂತ ಯೋಚನೆಮಾಡಿ, "ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ?" ಅಂತ ರಾಜಕುಮಾರನನ್ನು ಕೇಳಿದಳು. "ನಾನು ಹೇಳಿದ ಹಾಗೆ ಕೇಳಿದ್ರೆ ಮಾತಾಡ್ತೀನಿ. ಇಲ್ದೇ ಇದ್ರೆ ಇಲ್ಲ". ಎಂದು ಒರಟಾಗಿ ಹೇಳಿದ ದೊರೆಮಗ. "ಪತಿ ಮಾತು ಕೇಳದೆ ಉಂಟೇ? ಅದೇನು ಹೇಳಿ" ಅಂದಳು. "ಮತ್ತೆ ನೀನು ಹೂವಿನಗಿಡ ಆಗ್ತೀಯಲ್ಲ ಆಗು, ಹೂವ ಹಾಸಿಕೊಂಡು, ಹೊದ್ಕೊಂಡು ಮಲಿಕೋಬೇಕು" ಅಂದ. "ಸ್ವಾಮಿ, ನಾನು ದೇವರಲ್ಲ, ದೆವ್ವವಲ್ಲ. ಎಲ್ಲಾರ ಹಾಗೆ ನಾನೂ ನರಮನುಷ್ಯಳು. ನರಮನುಷ್ಯ ಹೂವಿನಗಿಡ ಆಗೋದುಂಟೇ?" ಎಂದಳು

ದೈನ್ಯದಿಂದ. "ಈ ಕಳ್ಳಾಟವೆಲ್ಲ ಬೇಡ, ಅವತ್ತು ನೀನು ಹೂವಿನಗಿಡ ಆಗಿದ್ದನ್ನು ಕಣ್ಣಾರೆ ನಾನು ನೋಡಿದೆ.... ನನ್ನ ಮುಂದೆ ನೀನು ಹೂವಿನಗಿಡ ಆಗದಿದ್ದಮೇಲೆ ಇನ್ಯಾರಮುಂದೆ ಆಗ್ತೀಯಾ" ಎಂದು ಸಿಟ್ಟಾದ. ಕಣ್ಣೀರನ್ನು ಸೀರೆ ಸೆರಗಿನಿಂದ ಒರೆಸಿಕೊಂಡು, "ಸ್ವಾಮಿ ಸಿಟ್ಟು ಮಾಡಬೇಡಿ, ಇಷ್ಟು ಹಠ ಬಂದ ಮೇಲೆ ನೀವು ಹೇಳಿದಂತೆ ನಾನು ಕೇಳ್ತೀನಿ. ಈಗ ಎರಡು ತುಂಬಿಗೆ ನೀರು ತಂದುಕೊಡಿ" ಎಂದು ಕೇಳಿದಳು. ಅವನು ತಂದುಕೊಟ್ಟ. ಅವೆರಡನ್ನು ಮಂತ್ರಿಸಿದಳು. ಅಷ್ಟರಲ್ಲಿ ಇವನು ಕೊಠಡಿ ಕಿಟಕಿ ಬಾಗಿಲೆಲ್ಲ ಮುಚ್ಚಿದ. "ನೋಡಿ, ಗಿಡದ ತೊಟ್ಟು, ಎಲೆ, ಕೊಂಬೆ ಮುರಿಯದ ಹಾಗೆ ನಿಮಗೆ ಬೇಕಾದಷ್ಟು ಹೂವನ್ನೆಲ್ಲ ಬಿಡಿಸಿಕೊಳ್ಳಿ" ಎಂದು ಹೇಳಿದಳು, ಈ ತಂಬಿಗೆಯ ನೀರನ್ನು ಸುರಿಯುವ ವಿಧಾನವನ್ನು ಹೇಳಿ, ದೇವರನ್ನು ನೆನೆಯುತ್ತಾ, ಕುಳಿತಳು. ದೊರೆಮಗ ಒಂದು ತಂಬಿಗೆ ನೀರು ಸುರಿದ ಕೂಡಲೆ ಹೂವಿನಗಿಡ ಆದಳು. ಹೂವಿನ ಪರಿಮಳ ಅರಮನೆ ತುಂಬೆಲ್ಲ ಹಬ್ಬಿತು. ಈತ ತನಗೆ ಬೇಕಾದಷ್ಟು ಹೂವು ಕಿತ್ತು, ಅನಂತರ ಮತ್ತೊಂದು ತಂಬಿಗೆಯ ನೀರನ್ನು ಗಿಡದ ಮೇಲೆ ಸುರಿದ. ಪುನಃ ಮನುಷ್ಯಳಾದಳು. ಮಂಡೆ ಒದರಿಕೊಂಡು ನಗುಮುಖದಿಂದ ಮೇಲೆದ್ದಳು. ಇಬ್ಬರೂ ಆನಂದದಿಂದ ಹೂವು ಹಾಸಿಕೊಂಡು ಹೊದ್ಕೊಂಡು ಮಲಗಿದರು.

ಹೀಗೆ ಕೆಲವುದಿನ ಮಾಡಿದರು. ಪ್ರತಿದಿನ ಬೆಳಿಗ್ಗೆ ಬಾಡಿದ ಹೂವನ್ನೆಲ್ಲ ತಮ್ಮ ಕೊಠಡಿಯ ಕಿಟಕಿಯಿಂದ ಆಚೆಗೆ ಹಾಕುತ್ತಿದ್ದರು. ಈ ಹೂವಿನ ರಾಶಿ ಬೆಟ್ಟದ ಹಾಗೆ ಬಿದ್ದಿತ್ತು.

ದೊರೆಯ ಚಿಕ್ಕಮಗಳು, ಈ ಬಾಡಿದ ಹೂವಿನ ರಾಶಿಯನ್ನು ಒಂದು ದಿನ ನೋಡಿ, "ನೋಡಮ್ಮ, ಅತ್ತಿಗೆ ಮುಡಿದು ಬಿಸಾಕಿದ ಬಾಡಿದ ಹೂವೇ ಒಂದು ಬೆಟ್ಟ ಬಿದ್ದ ಹಾಗೆ ಬಿದ್ದಿದೆ. ನನಗೊಂದು ದಿನ ಒಂದು ಹೂವು ಕೊಡ್ಲಿಲ್ಲ" ಎಂದು ತನ್ನ ತಾಯಿಗೆ ದೂರು ಹೇಳಿದಳು. "ಹೂವು ಬೇಕಾದರೆ ಕೊಡಿಸಿ ಕೊಡ್ತೀನಿ, ಸುಮ್ಮನಿರಮ್ಮ" ಎಂದು ಸಮಾಧಾನ ಮಾಡಿದಳು ತಾಯಿ.

ಒಂದು ದಿನ ದೊರೆಮಗ ಎಲ್ಲೋ ಹೊರಗೆ ಹೋಗಿದ್ದ. ಆಗ ದೊರೆ ಮಗಳು ತನ್ನ ಸ್ನೇಹಿತೆಯರಿಗೆಲ್ಲ, "ಸುರಹೊನ್ನೆ ತೋಟಕ್ಕೆ ಉಯ್ಯಾಲೆ ಆಡೋಕೆ ಹೋಗೋಣ.

ನಮ್ಮ ಅತ್ತಿಗೆ ಹೂವಿನಗಿಡ ಆಗ್ತಾಳೆ. ನೀವೆಲ್ಲರೂ ಬನ್ನಿ. ಗಮಗಮ ಅನ್ನೋ ಹೂವು ಬೇಕಾದಷ್ಟು ಕೊಡ್ತೀನಿ" ಎಂದು ಹೇಳಿ ಬಂದಳು. ಅನಂತರ ತಾಯಿಯಲ್ಲಿ ಅನುಮತಿ ಕೇಳಿದಳು. ಆಕೆ, "ಹೋಗಮ್ಮ ಯಾರು ಬೇಡ ಅಂತಾರೆ" ಅಂದಳು. ಆಗ, "ಅಮ್ಮ ನಾನೊಬ್ಬಳೇ ಹೋಗಲಾ, ಅತ್ತಿಗೆಯನ್ನು ಕಳಿಸಮ್ಮ" ಎಂದಳು. "ನಿಮ್ಮ ಅಣ್ಣನನ್ನು ಕೇಳಿ ಅತ್ತಿಗೆಯನ್ನು ಕರ್ಕೊಂಡು ಹೋಗಮ್ಮ" ಅಂದಳು ತಾಯಿ. ಅಷ್ಟುಹೊತ್ತಿಗೆ ಅವಳ ಅಣ್ಣಯ್ಯನೂ ಅಲ್ಲಿಗೆ ಬಂದ. "ಅಣ್ಣಯ್ಯ, ಅಣ್ಣಯ್ಯ ! ನಾವೆಲ್ಲ ಸುರಹೊನ್ನೆ ತೋಟಕ್ಕೆ ಉಯ್ಯಾಲೆ ಆಡೋಕೆ ಹೋಗ್ತೀವಿ. ಅತ್ತಿಗೇನೂ ಕಳಿಸು" ಅಂದಳು. ಆಗ ಅವಳ ಅಣ್ಣ, "ನನ್ನಿಷ್ಟ ಅಲ್ಲಮ್ಮ ಕಳ್ಸಕ್ಕೆ, ಅವೆಲ್ಲ ತಾಯಿಯವರ ಇಷ್ಟ" ಅಂದ. ಆಗ ತನ್ನ ತಾಯಿಯಲ್ಲಿ ಹೋಗಿ, "ಅಮ್ಮ, ಅಣ್ಣನನ್ನು ಕೇಳಿದರೆ, ಅಮ್ಮನನ್ನು ಕೇಳು ಅಂತಾನೆ. ಕಳಿಸಲಾರದೆ ಯಾವುದೋ ನೆಪ ಹೇಳ್ತಿ. ನನಗಿಂತ ಹೆಚ್ಚಿನವಳಾ ನಿನ್ನ ಸೊಸೆ" ಅಂದಳು ಬಿಂಕದಿಂದ. "ಹಾಗೆಲ್ಲ ಒರಟು ಮಾತಾಡಬೇಡ, ನಿನ್ನ ಅತ್ತಿಗೆಯನ್ನು ಕರಕೊಂಡು ಲಕ್ಷಣವಾಗಿ ಹೋಗಿ, ಸಂಜೆ ಹೊತ್ತಿಗೆ ಜೋಪಾನವಾಗಿ ಮನೆಗೆ ಬನ್ನಿ" ಎಂದು ತಾಯಿ ಹೇಳಿದಳು.

ಎಲ್ಲಾರು ಉಯ್ಯಾಲೆ ಆಡೋಕೆ ಸುರಹೊನ್ನೆ ತೋಟಕ್ಕೆ ಹೋದರು. ಅಲ್ಲೊಂದು ದೊಡ್ಡ ಮರಕ್ಕೆ ಉಯ್ಯಾಲೆ ಕಟ್ಟಿದರು. ಎಲ್ಲಾರು ಸಂತೋಷದಿಂದ ಉಯ್ಯಾಲೆ ಆಡ್ತಾ ಇದ್ದರು. ಆಗ ಇದ್ದಕ್ಕಿದ್ದಂತೆ ಈ ದೊರೆ ಚಿಕ್ಕಮಗಳು, ಎಲ್ಲಾರನ್ನು ಉಯ್ಯಾಲೆಯಿಂದ ಇಳಿಸಿದಳು. ತನ್ನ ಅಣ್ಣನ ಹೆಂಡತಿಯನ್ನು ಕುರಿತು, "ಅತ್ತಿಗೆ, ನೀನು ಹೂವಿನಗಿಡ ಆಗ್ತೀಯಲ್ಲ ಆಗು ಅತ್ತಿಗೆ, ಸ್ನೇಹಿತೆಯರೆಲ್ಲಾ ಬರೀ ತಲೇಲಿ ಬಂದವರೆ" ಎಂದಳು. "ಅಯ್ಯೋ ದೇವರೇ, ಇದ್ಯಾರು ನಿನಗೆ ಹೇಳಿದ್ದು. ನಾನು ನಿಮ್ಮ ಹಾಗೆ ಮನುಷ್ಯಳೇ!. ಹುಚ್ಚು ಹುಚ್ಚಾಗಿ ಆಡಬೇಡ" ಅಂತ ಗದರಿದಳು ಅತ್ತಿಗೆ. "ಆಹಾ.... ಅಲ್ಲ ಅತ್ತಿಗೆ ನನ್ನ ಸ್ನೇಹಿತೆಯರೆಲ್ಲ ಬರೀ ತಲೇಲಿ ಬಂದಿದ್ದಾರೆ, ಹೂವ್ವಿನಗಿಡ ಆಗು ಅತ್ತಿಗೆ ಅಂದ್ರೆ, ಏನಲ್ಲ ಮಾತಾಡ್ತಿರಾ. ನಮ್ಮೆಂದೆ ಆಗದೆ, ಇನ್ನಾರ ಮುಂದೆ ಹೂವಿನಗಿಡ ಆಗಾಕೆ ಹೋಗ್ತೀಯಾ" ಎಂದು ನಿಷ್ಠುರವಾಗಿ ಮಾತಾಡಿದಳು.

"ಛೆ ಪಾಪಿ. ಎಂಥ ಕೆಲಸ ಆಯ್ತು. ಇಲ್ಲಿಗೆ ನಾನು ಬಂದದ್ದೇ ತಪ್ಪಾಯಿತು" ಎಂದು ವ್ಯಥೆಪಟ್ಟು, ಎರಡು ತಂಬಿಗೆ ನೀರು ತರಿಸಿ, ಅದನ್ನು ಮಂತ್ರಿಸಿದಳು.



ಅವುಗಳನ್ನು ಸುರಿಯುವ, ಹೂವನ್ನು ಕೀಳುವ ವಿಧಾನವನ್ನೆಲ್ಲ ವಿವರವಾಗಿ ಹೇಳಿ, ದೇವರನ್ನು ನೆನೆದು ಕುಳಿತಳು. ಈ ಹುಡುಗಿಯರು ಆ ವಿವರವನ್ನು ಸರಿಯಾಗಿ ಆಲಿಸದೆ, ನಿರ್ಲಕ್ಷ್ಯದಿಂದ, ಒಂದು ತಂಬಿಗೆ ನೀರನ್ನು ಅಡ್ಡಾದುಡ್ಡಿ ಅವಳ ಮೇಲೆ ಸುರಿದರು. ಆಕೆ ಅರ್ಧಂಬರ್ಧ ಗಿಡ ಆದಳು. ಅಷ್ಟು ಹೊತ್ತಿಗೆ ಸಾಯಂಕಾಲವಾಗಿತ್ತು. ಇದ್ದಕ್ಕಿದ್ದಂತೆ ಗುಡುಗು ಸಿಡಿಲಿನಿಂದ ಕೂಡಿದ ಮಳೆ ಪ್ರಾರಂಭವಾಯಿತು. ಆಗ ಇವರು ಹೂವು ಕೀಳೋ ಸಂಭ್ರಮದಲ್ಲಿ ತೊಟ್ಟು, ಎಲೆ, ಸುಳಿ ಕಿತ್ತು, ರಂಬೆನೆಲ್ಲ



ತರದು ಬಿಟ್ಟಿದ್ದರು. ಈ ಮಳೆಗೆ ಹೆದರಿ ಮನೆಗೆ ಹೋಗೋ ಆತುರದಲ್ಲಿ, ಮತ್ತೊಂದು ತಂಬಿಗೆ ನೀರನ್ನು ಅಡ್ಡಾದುಡ್ಡಿ ಅದರ ಮೇಲೆ ಸುರಿದು ಹೊರಟುಬಿಟ್ಟರು. ಆಕೆ ಪುನಃ ಮನುಷ್ಯಳಾಗುವಾಗ, ಕೈಯಿಲ್ಲದ ಕಾಲಿಲ್ಲದ ಅರ್ಧಂಬರ್ಧ ದೇಹವಾಗಿದ್ದಳು. ಮೈಯೆಲ್ಲ ಗಾಯವಾಗಿತ್ತು. ಆ ಮಳೆ ನೀರಲ್ಲಿ ತೇಲಿಕೊಂಡು, ಚರಂಡಿಯಲ್ಲಿ ಬಿದ್ದು ಬಹುದೂರ ಹೋಗಿ ಅಲ್ಲೊಂದು ಮೋರಿಯಲ್ಲಿ ಸಿಕ್ಕಿಕೊಂಡಳು.

ಮಾರನೆಯ ದಿನ ಬೆಳಿಗ್ಗೆ ಅತ್ತಕಡೆಯಿಂದ ಏಳೆಂಟು ಅರಳೆ ತುಂಬಿದ್ದ ಗಾಡಿಗಳು ಬರುತ್ತಿದ್ದವು. ಆಗ ಇದು, 'ಹ್ಞಾ...ಹ್ಞಾ...' ಅಂತ ಕೊರಗುತ್ತಿತ್ತು. ಮೊದಲ ಗಾಡಿಯವನು, "ಇದೇನು ನೋಡ್ರೋ" ಅಂದ. ಎರಡನೆಯವನು, "ಹೊಡೀರಲೇ ಗಾಡೀನ, ಗಾಳಿಯೋ ಪಿಶಾಚಿಯೋ ಏನೋ" ಅಂದ. ಆದರೆ ಕೊನೆ ಗಾಡಿಯವನು, ಗಾಡಿ ನಿಲ್ಲಿಸಿ ನೋಡ್ತಾನೆ, ಒಂದು ದೇಹದ ಮುದ್ದೆ! ಮುಖ ಮಾತ್ರ ಚೆನ್ನಾಗಿತ್ತು. ಬಟ್ಟೆಯಿಲ್ಲ, ಬರೆಯಿಲ್ಲ. "ಅಯ್ಯೋ ಮನುಷ್ಯ ಕಣಪ್ಪ" ಅಂತ ನೊಂದು, ಬೇರೆಯವರ ಅಸಹ್ಯದ ಮಾತಿಗೆ ಬೆಲೆ ಕೊಡದೆ, ತನ್ನ ತಲೆಮೇಲಿದ್ದ ವಸ್ತ್ರವನ್ನು ಅದರ ಮೇಲೆ ಹಾಕಿ ಕರತಂದು ಗಾಡಿಯಲ್ಲಿ ಕುಳ್ಳರಿಸಿದ. ಮುಂದೊಂದು ಊರು ಸಿಕ್ಕಿತು. ಅಲ್ಲೊಂದು ಹಾಳು ಮಂಟಪ. ಅಲ್ಲಿ ಗಾಡಿ ನಿಲ್ಲಿಸಿ, 'ಇದನ್ನು' ಆ ಮಂಟಪದಲ್ಲಿಟ್ಟು, "ಯಾರಾದರು ಅನ್ನ ಕೊಟ್ಟರೆ ಜೀವ ಉಳಿಸಿಕೋ" ಅಂತ ಹೇಳಿ ಗಾಡಿ ಹೊಡೆದುಕೊಂಡು ಮುಂದೆ ಹೋದ.

ಇತ್ತ ದೊರೆಯ ಚಿಕ್ಕಮಗಳು ಅರಮನೆಗೆ ಬಂದಳು. ಇವಳೊಬ್ಬಳೇ ಬಂದದ್ದನ್ನು ತಾಯಿ ಕಂಡು, "ಎಲ್ಲಮ್ಮ ಅತ್ತಿಗೆ ? ನಿಮ್ಮ ಅಣ್ಣಯ್ಯ ಕಂಡರೆ ಏನಂತಾನಮ್ಮ" ಎಂದು ಕೇಳಿದಳು. "ಅಯ್ಯೋ ಯಾರಿಗೆ ಗೊತ್ತು. ಈಗ ನಾವೆಲ್ಲ ಬರಲಿಲ್ವಾ. ಅವಳು ಎಲ್ಲಿ ಹೋದಳೋ ?" ಅಂದಳು. "ಅಯ್ಯೋ ಹಂಗೆ ಅನ್ನಬಾರದಮ್ಮ. ನಿಮ್ಮ ಅಣ್ಣಯ್ಯ ಸುಮ್ಮನೆ ಬಿಟ್ಟಾನ. ಅದೇನು ಆಯ್ತು ಹೇಳಮ್ಮ" ಎಂದು ಉಪಾಯದಿಂದ ತಾಯಿ, ನಡೆದ ವಿಚಾರ ತಿಳಿದುಕೊಳ್ಳಲು ಪ್ರಯತ್ನಿಸಿದಳು. ಆದರೆ ಮಗಳು ಬಾಯಿಗೆ ಬಂದ ಹಾಗೆ ಸುಳ್ಳನ್ನು ಹೇಳಿದಳು. ನಡೆದ ವಿಚಾರ ತಾಯಿಗೆ ತಿಳಿಯಲೇ ಇಲ್ಲ. ಇವಳೇನೋ ಮಾಡಿಬಂದಿದ್ದಾಳೆಂದು

ತಾಯಿಗೆ ಅನುಮಾನ ಬಂತು. ಹೆಂಡತಿಯನ್ನು ಕಾಣದೆ ದೊರೆಮಗ ತಾಯಿಯನ್ನು ವಿಚಾರಿಸಿದ.

"ಅಮ್ಮ ಅಮ್ಮ"

"ಏನಪ್ಪ"

"ಇದೇನಮ್ಮ ಉಯ್ಯಾಲೆ ಆಡೋಕೆ ಹೋದವಳ ಸುಳಿವೇ ಇಲ್ವಲ್ಲ?"

"ಅಯ್ಯೋ ರಾಮ, ಮಲಗೋ ಮನೆಯಲ್ಲಿ ಇರಬಹುದೆಂದು ನಾ ತಿಳಿದಿದ್ದೆ, ನೀನು ನನ್ನೇ ಕೇಳ್ತಿಯಲ್ಲಪ್ಪ" ಅಂದಳು ತಾಯಿ.

"ಓ ಏನೋ ಆಗಬಾರದ್ದು ಆಗಿದೆ" ಅಂತ ತಿಳಿದ ದೊರೆಮಗ. ಮಂಚದ ಮೇಲೆ ಮಕಾಡೆ ಮಲಗಿಬಿಟ್ಟ. ಐದು ದಿನ ಆಯಿತು, ಆರು ದಿನ ಆಯಿತು. ಹದಿನೈದು ದಿನ ಆಯಿತು. ಹೆಂಡತಿ ಪತ್ತೆಯಿಲ್ಲ. "ಬಾವಿಗೆ ನೂಕಿದ್ರಾ! ಕೆರೆಗೆ ನೂಕಿದ್ರಾ!" ಅಂತ ತಂದೆ ತಾಯಿನ ಕೇಳಿದ. ಅವರೇನು ಹೇಳ್ತಾರೆ. ಅವರೂ ಚಿಂತೆ ಮಾಡ್ತಾ ಕೊರಗ್ತಾ ಇದ್ದರು. ಹೆಂಡತಿ ಇಲ್ಲದೆ ಅವನಿಗೆ ಬೇಜಾರಾಗಿ, ಗೋಸಾಯಿ ದಿರ್ಸು ಹಾಕಿಕೊಂಡು, ದೇಶಾಂತರ ಹೊರಟ.

ಇತ್ತ ಮೈಯೆಲ್ಲ ಗಾಯವಾಗಿ ಅರ್ಧಂಬರ್ಧ ದೇಹವಾಗಿದ್ದ 'ಇವಳು' ತನ್ನ ಗಂಡನ ದೊಡ್ಡಕ್ಕಳನ್ನು ಮದುವೆ ಮಾಡಿಕೊಟ್ಟಿದ್ದ ಪಟ್ಟಣದಲ್ಲಿ ಬಿದ್ದಿದ್ದಳು. ಆ ಪಟ್ಟಣದ ಅರಮನೆಯ ದಾದೇರು, ಗೌಡೇರು ದಿನವಹಿ ನೀರಿಗೆ ಹೋಗಿ ಬರುವಾಗ ಇವಳನ್ನು ನೋಡುತ್ತಿದ್ದರು. ನೋಡಿ "ಮಹಾರಾಜನ ಮಗಳಿದ್ದ ಹಾಗೆ ಅವಳೆ" ಅಂದುಕೊಳ್ಳುತ್ತಿದ್ದರು. ಒಬ್ಬಳು ನೋಡಿ ತಾಳಲಾರದೆ, "ಅಮ್ಮಾವ್ರಿಗೆ ಹೇಳಬೇಕು" ಅಂದ್ಕೊಂಡು, ಅರಮನೆಗೆ ಹೋಗಿ ಇವಳ ವಿಚಾರ ಹೇಳಿ, "ಅಮ್ಮ...ಅಮ್ಮ, ಅವಳನ್ನು ನಿಮ್ಮ ತಮ್ಮನ ಹೆಂಡತಿ ಇದ್ದ ಹಾಗೆ ಇದಾಳೆ ಕಣಮ್ಮ. ದುರಬೀನು ಹಾಕಿ ನೋಡಿ" ಅಂದಳು. ರಾಣಿ ನೋಡಿದಳು. ಒಂದು ತರವಾಗಿ ತಮ್ಮನ ಹೆಂಡತಿಯ ಹಾಗೆ ಕಾಣುತ್ತಿತ್ತು. "ಅಮ್ಮ, ಅಮ್ಮ, ಕರೆದು ಅರಮನೆ ಮುಂದೆ ಕುಳ್ಳರಿಸಿದರೆ ಎಷ್ಟೋ ಕಳೇವಾಗಿರುತ್ತೆ, ಕರೆದುಕೊಂಡು ಬರಲಾ" ಅಂದಳು ಒಬ್ಬ ದಾದಿ. "ಹೋಗ್ರೆ, ಹೋಗ್ರೆ, ಅವಳ ಸೇವೆಮಾಡಿ ಅನ್ನ ಹಾಕಬೇಕಾಗುತ್ತೆ" ಎಂದು ತಾತ್ಸಾರ ಮಾಡಿದಳು ರಾಣಿ. ಮಾರನೆ ದಿನವು ಸಹ ದಾದೇರು, "ಅಪರೂಪದ ರೂಪವತಿ,

ಅರಮನೆಗೆ ಬೆಳಕು ಆಗುತ್ತಾಳಮ್ಮ. ಕರೆದು ತರೋಣವೆ" ಅಂತ ಗೋಗರೆದರು. "ಹೋಗಲಿ, ಕರೆದು ತನ್ನಿ. ಅವಳ ಸೇವೆ ನೀವೇ ಮಾಡಬೇಕು ಅಂದಳು ರಾಣಿ. "ಆಯಿತು ನಾವೇ ಮಾಡ್ತೀವಮ್ಮ" ಎಂದು ಒಪ್ಪಿಕೊಂಡು ಅವಳನ್ನು ಕರೆತಂದು, ನೀರು-ನಿಡಿ ಹೊಯಿದ್ರು. ಬಟ್ಟೆ ಉಡಿಸಿ, ಅರಮನೆ ಬಾಗಿಲಲ್ಲಿ ಕುಳ್ಳರಿಸಿದರು. ದಿನವಹಿ ಅವಳ ಮೈ ಮೇಲಿನ ಗಾಯಗಳಿಗೆ ಔಷಧಿ ಹಾಕಿ, ವಾಸಿಮಾಡಿದರು.

ಇತ್ತ ದೊರೆಮಗ, ದೇಶದೇಶವೆಲ್ಲ ತಿರುಗಿ, ತನ್ನ ಅಕ್ಕನ ಪಟ್ಟಣಕ್ಕೆ ಬಂದ. ಬಂದು ಪಟ್ಟಣದ ಬಾಗಿಲಲ್ಲಿ ಕುಳಿತ. ತಿಕ್ಕಲು ಮನುಷ್ಯನ ಹಾಗೆ ಅವನಿಗೆ ಗಡ್ಡಮೀಸೆ ಬೆಳೆದಿತ್ತು. ನೀರಿಗೆ ಹೋಗಿ ಬರುತ್ತಿದ್ದ ದಾದೇರು ಇವನನ್ನು ನೋಡಿ ಅರಮನೆಗೆ ಹೋಗಿ, "ಅಮ್ಮಾವ್ರೆ, ಯಾರೋ ನಿಮ್ಮ ತಮ್ಮ ಕುಳಿತಂಗೆ ಕಾಣುತ್ತೆ. ದುರಬೀನು ಹಾಕಿ ನೋಡಿರಿ" ಅಂತ ಗೋಗರೆದರು. ರಾಣಿ ಉದಾಸೀನವಾಗಿ ಮೇಲು ಮಹಡಿಗೆ ಹೋಗಿ, ದುರಬೀನು ಹಾಕಿ ನೋಡಿದಳು. "ಏನೋ ಮುಖದ ಹೋಲಿಕೆ ಹಾಗೇನೆ ಕಾಣುತ್ತೆ. ನನತಮ್ಮ ಜೋಗಿ ಆಗೋದು ಎಂದರೇನ?" ಎಂದು ಬಹಳ ಯೋಚನೆಮಾಡಿದಳು ರಾಣಿ. ದಾದೇರ ಕೈಲಿ ಹೇಳಿಕಳುಹಿಸಿದಳು. ಅವರು, "ರಾಣಿ ಅಪ್ಪಣೆಯಾಗಿದೆ ಬನ್ನಿ" ಅಂತ ಅವನನ್ನು ಕರೆದರು. "ಹೋಗಿ, ಹೋಗಿ ಆಕೆ ನನ್ನ್ಯಾಕೆ ಕರೀತಾಳೆ" ಅಂದ. "ಇಲ್ಲ ಸ್ವಾಮಿ ನಿಮ್ನೆ ಕರೀತಾರೆ ಬನ್ನಿ" ಎಂದು ಬಹಳ ಮೆಹನತ್ತು ಮಾಡಿ ಕರೆದು ತಂದರು. ರಾಣಿ ಅವನನ್ನು ಚೆನ್ನಾಗಿ ನೋಡಿದಳು. ನನ್ನ ತಮ್ಮನೇ ಇರಬೇಕೆಂದುಕೊಂಡಳು.

ಕೊಪ್ಪ-ಕೊಪ್ಪರಿಗೆ ಎಣ್ಣೆ ಕಾಯಿಸಿ, ನೆತ್ತಿಗೆ ಒತ್ತಿಸಿ, ಹಂಡೆ-ಹಂಡೆ ನೀರು ಹಾಕ್ಸಿ, ನನ್ನ ತಮ್ಮನೇ ಹೊರತು ಬೇರಲ್ಲವೆಂದು ತಿಳಿದುಕೊಂಡಳು, ಚೆನ್ನಾಗಿ ಅವನಿಗೆ ಉಪಚಾರ ಮಾಡಿದಳು. ದಿನಕ್ಕೊಂದೊಂದು ಅಡಿಗೆ, ದಿನಕ್ಕೊಂದೊಂದು ದಿರ್ಸು ಕೊಡುತ್ತಿದ್ದಳು. ಆದರೆ ಈತ ಏನು ಮಾಡಿದರೂ ಅಕ್ಕನ ಕೈಲಿ ಮಾತಾಡಲಿಲ್ಲ. 'ನಾನ್ಯಾರು, ನೀನ್ಯಾರು' ಅಂತಲೂ ಸಹ ಮಾತಾಡಲಿಲ್ಲ. ಅಷ್ಟು ಹೊತ್ತಿಗೆ ಇಬ್ಬರಿಗೂ ತಾವು ಅಕ್ಕ-ತಮ್ಮ ಅನ್ನೋದು ಚೆನ್ನಾಗಿ ಗೊತ್ತಾಗಿತ್ತು.

"ನಾನಿಷ್ಟು ಉಪಚಾರ ಮಾಡಿದರೂ ನನ್ನ ತಮ್ಮ ಮಾತಾಡಲಿಲ್ಲ. ಏನು ಕಾರಣ ? ಯಾವುದಾದರೂ ಮೋಹಿನಿ ಕೆಲ್ಸ ಇರಬಹುದಾ?" ಎಂದು ಆಲೋಚನೆ

ಮಾಡಿ, ದಿನಾ ಒಬ್ಬೊಬ್ಬರು ಚಲುವೆ ದಾದಿಯರನ್ನು ಅವನು ಮಲಗೋ ಮನೆಗೆ ಕಳುಹಿಸಿದಳು. ಏಳುಜನ ದಾದಿಯರನ್ನು ಏಳದಿನ ಕಳುಹಿಸಿದಳು. ಆ ಎಲ್ಲ ದಾದೇರು ಇವನ ಕೈಮುಟ್ಟಿ, ಮೈಮುಟ್ಟಿ ಎಚ್ಚರ ಮಾಡಿ ನೋಡಿದರು. ಆದರೆ ಇವನು ಯಾರೊಂದಿಗೂ ಮಾತಾಡಲಿಲ್ಲ.

ಆಗ ಮಾರನೆಯ ದಿನ ರಾತ್ರಿ ದಾದೇರೆಲ್ಲ ಸೇರಿ, ಅರಮನೆ ಮುಂದಿದ್ದ ಇವಳಿಗೆ ಶೃಂಗಾರಮಾಡಿ, ರಾಣಿಯಿಂದ ಅಪ್ಪಣೆ ಪಡೆದು ಇವನ ರೂಮಿನಲ್ಲಿ ಮಂಚದ ಮೇಲೆ ತಂದು ಕೂರಿಸಿದರು. ಇವನು ದಾದೇರ್ನ ನೋಡಲೂ ಇಲ್ಲ, ಮಾತಾನಾಡಿಸಲೂ ಇಲ್ಲ. ಆದರೆ ಆ ರಾತ್ರಿ 'ಇದು' ಮೋಟುಗೈಯಲ್ಲಿ ಇವನ ಕಾಲನ್ನು ಒತ್ತುತ್ತ, 'ಹ್ಞೂ...ಹ್ಞೂ...' ಅಂತ ಕೊರಗುತ್ತಿತ್ತು. ಆಗ ಇವನು ಎದ್ದು ನೋಡಿದ. 'ಇದು' ಕೂಡ ಅವನನ್ನು ಸ್ವಲ್ಪ ಹೊತ್ತು ಹಾಗೇ ನೋಡಿತು, ಇವಳೇ ನನ್ನ ಹೆಂಡತಿಯೆಂದು ತಿಳಿದುಕೊಂಡ. ಆಗ "ಏನು? ಎತ್ತ? ಎಂದು ಅವಳನ್ನು ವಿಚಾರಿಸಿದ. ಆಗ ಆಕೆಗೆ ಅಷ್ಟುದಿನ ನಿಂತಿದ್ದ ಮಾತು ಬಂತು. ಆಗ ಅವಳು, "ನಿಮ್ಮ ತಂಗಿಯಿಂದಾಗಿ ಹೀಗಾಯ್ತು" ಎಂದು ಎಲ್ಲವನ್ನೂ ಹೇಳಿದಳು. "ಅದಕ್ಕೆ ಈಗೇನು ಮಾಡಬೇಕು?" ಅಂತ ಕೇಳಿದ. "ಹೆಚ್ಚಿಗೇನೂ ಮಾಡಬೇಡಿ, ಚಿಳ್ಳುಗರು ಸೋಕದ ಹಾಗೆ ಎರಡು ತಂಬಿಗೆ ನೀರು ತನ್ನಿ" ಎಂದು ಕೇಳಿಕೊಂಡಳು. ಆತ ಯಾರಿಗೂ ಗೊತ್ತಾಗದ ಹಾಗೆ ತಂದು ಕೊಟ್ಟ. ಆ ಎರಡು ತಂಬಿಗೆ ನೀರನ್ನು ಮಂತ್ರಿಸಿ ಕೊಟ್ಟು, "ಮೊದಲು ಈ ತಂಬಿಗೆ ನೀರು ಹೊಯ್ದುಬಿಡಿ, ಹೂವಿನಗಿಡ ಆಗ್ತೀನಿ. ಆಗ ಎಲ್ಲಿ ಎಲೆ ಹೋಗಿದೆಯೋ ಅಲ್ಲಿ ಎಲೆ ಜೋಡಿಸಿ, ಎಲ್ಲಿ ರಂಬೆ ಹೋಗಿದೆಯೋ ಅಲ್ಲಿ ರಂಬೆ ಜೋಡಿಸಿ, ಅನಂತರ ಈ ಇನ್ನೊಂದು ತಂಬಿಗೆ ನೀರನ್ನು ಸುರಿಯಿರಿ" ಎಂದು ಹೇಳಿ, ದೇವರನ್ನು ನೆನೆದು ಕುಳಿತುಕೊಂಡಳು. ಸರಿ ಈತ ಒಂದು ತಂಬಿಗೆ ನೀರು ಹೊಯ್ದ. ಹೂವಿನಗಿಡ ಆದಳು. ನೋಡ್ತಾನೆ ಕೊಂಬೆ ರಂಬೆನೆಲ್ಲ ತರದುಬಿಟ್ಟಿದ್ದಾರೆ. ಅವನ್ನೆಲ್ಲ ಸರಿಪಡಿಸಿ, ಗಿಡದ ಮೈಮೇಲೆಲ್ಲ ಬೀಳುವ ಹಾಗೆ ಇನ್ನೊಂದು ತಂಬಿಗೆ ನೀರು ಸುರಿದ. ಆಗ ಪುನಃ ಮನುಷ್ಯಳಾದಳು. ಮಂಡೆ ಒದರಿಕೊಂಡೆದ್ದು, ಗಂಡನ ಕಾಲಿಗೆ ನಮಸ್ಕಾರ ಮಾಡಿದಳು. ನಾದನಿಯಾದ ರಾಣಿಯನ್ನು ಎಬ್ಬರಿಸಿ, ಆಕೆಯ ಕಾಲಿಗೂ ನಮಸ್ಕಾರ ಮಾಡಿದಳು. ನಡೆದ ಸಂಗತಿಯನ್ನೆಲ್ಲ ತಿಳಿಸಿದಳು. ರಾಣಿ ಈಕೆಯನ್ನು ಅಪ್ಪಿ, ಮುದ್ದಾಡಿ ಅತ್ತಳು. ಕಡೆಗೆ

ರಾಣಿ ಇಬ್ಬರನ್ನೂ ಚೆನ್ನಾಗಿ ಉಪಚರಿಸಿದಳು. ತಮ್ಮನನ್ನು, ತಮ್ಮನ ಹೆಂಡತಿಯನ್ನು ಕುಳ್ಳಿರಿಸಿ, ಹಸೆ ಎತ್ತಿಸಿ, ನಾಲ್ಕಾರು ವಾರ ತನ್ನ ಮನೆಯಲ್ಲಿ ಇಟ್ಟುಕೊಂಡಿದ್ದಳು. ಅವರಿಬ್ಬರನ್ನೂ ತನ್ನ ತಂದೆ ಪಟ್ಟಣಕ್ಕೆ ಹೋಗುವಾಗ ಬೇಕಾದಷ್ಟು ಐಸಿರಿ ಕೊಟ್ಟು, ಉಡುಗೊರೆ ಕೊಟ್ಟು, ಕಳುಹಿಸಿದಳು.

ಅಲ್ಲಿ, ಆ ಪಟ್ಟಣದ ದೊರೆ, ಕಾಣೆಯಾಗಿದ್ದ ತಮ್ಮ ಮಗ ಸೊಸೆ ಬಂದರೆಂದು, ವೈಭವದಿಂದ ಅವರಿಬ್ಬರನ್ನೂ ಆನೆ ಅಂಬಾರಿ ಮೇಲೆ ಕುಳ್ಳಿರಿಸಿ, ಊರೆಲ್ಲ ಮೆರವಣಿಗೆ ಮಾಡಿ ಅರಮನೆಗೆ ಕರೆದುಕೊಂಡು ಹೋದ. ಅಲ್ಲಿ ದೊರೆಗೂ, ಮಹಾರಾಣಿಗೂ ನಡೆದ ಸಂಗತಿಯನ್ನೆಲ್ಲ ಇವರಿಬ್ಬರೂ ಹೇಳಿದರು. ಆಗ ದೊರೆ, ಒಂದು ಅಗೇವು ತೆಗೆಸಿ, ಅದಕ್ಕೆ, ಏಳು ಖಂಡುಗ ಸುಣ್ಣ ಬಿರೆಹೊಯ್ಸಿ, ಅದರೊಳಗೆ ತನ್ನ ಚಿಕ್ಕಮಗಳನ್ನು ನೂಕಿಸಿದ. ಇದನ್ನು ನೋಡಿದ ಜನರೆಲ್ಲ, "ತಪ್ಪಿಗೆ ಶಿಕ್ಷೆ ಉಂಟೇ ಉಂಟು" ಎಂದುಕೊಂಡರು.

ಎಲ್ಲರೂ ಸುಖವಾಗಿದ್ದರು.

○



## ಸಂಸಾರಿ ಸೈ

ಒಂದಾನೊಂದು ಊರು. ಹೀಗೆ ಮಳೆಗಾಲ ಸುರುವಾಗಿತ್ತು. ಮಳೆಗಾಲದ ಒಂದು ಸಂಜೆಹೊತ್ತಲ್ಲಿ ಆ ಊರಿಗೆ, ಬಗಲಿಗೆ ಜೋಳಿಗೆ ಹಾಕಿಕೊಂಡಿದ್ದ ಒಬ್ಬ ಸನ್ಯಾಸಿ ಬಂದ. ಹೊತ್ತು ಮುಳುಗಲು ಇನ್ನೂ ಸಮಯವಿತ್ತು. ಇದ್ದಕ್ಕಿದ್ದಂತೆ ಆನೆಕಲ್ಲುಮಳೆ ಹುಯ್ಯಲು ಆರಂಭವಾಯಿತು. ರೈತರೆಲ್ಲ ಆ ಮಳೆಯಲ್ಲೇ ನೆನಕೊಂಡು, ಚಳೀಲಿ ನಡುಗುತ್ತಾ, ದನ-ಕರ ಅಟ್ಟಿಕೊಂಡು ತಮ್ಮ ತಮ್ಮ ಮನೆಗೆ ಹೊರಟರು.

ಈ ಸನ್ಯಾಸಿ ಮಳೇಲಿ ನೆನೆಯಲಾರದೆ, ಅಲ್ಲಿದ್ದ ರೈತನೊಬ್ಬನ ಮನೆ ಪಡಸಾಲೆಗೆ ಬಂದು ಚಳೀಲಿ ನಡುಗುತ್ತಾ ನಿಂತ. ಅದೇ ಮನೆಯ ರೈತನೂ ಹುಯ್ಯೋ ಮಳೆಯಲ್ಲಿ ನೆನಕೊಂಡು, ನೇಗಿಲು ಹೊತ್ಕೊಂಡು, ಕೈಯಲ್ಲಿ ದನ ಹಿಡಕೊಂಡು ಬಂದ. ಅವನ ಹೆಂಡತಿಯೂ ಮಂಕರಿ ತಲೆಮೇಲೆ ಹೊತ್ಕೊಂಡು, ಕುರಿ-ಮೇಕೆ ಹಿಡಕೊಂಡು, ಮಳೆಯಲ್ಲಿ ನೆನೆದು ಒದ್ದೆಯಾಗಿ ಮನೆಗೆ ಬಂದಳು.

ಇದನ್ನೆಲ್ಲಾ ನೋಡುತ್ತಾ ಪಡಸಾಲೆಯಲ್ಲಿ ಕುಳಿತಿದ್ದ ಸನ್ಯಾಸಿ: ಗಂಡ-ಹೆಂಡತಿ ಆ ಹುಯ್ಯೋ ಮಳೆಯಲ್ಲಿ ನೆನೆದು ತೊಪ್ಪೆಯಾಗಿ ಮನೆಗೆ ಬಂದದ್ದನ್ನು ನೋಡಿದ. ಈ ಸಂಸಾರಿಗಳ ಕಷ್ಟ ನೋಡಿದರೆ; ಇದರಿಂದ ಸಿಗೋ ಸುಖಾನೂ ಬೇಡ, ಈ ಗೋಳೂ ಬೇಡ. ಆದ್ದರಿಂದ ನನ್ನಂತ ಸನ್ಯಾಸಿ ಬಾಳು ಸೈ! ಸಂಸಾರಿ ಬಾಳು ಛೀ! ಅಂದುಕೊಂಡ.

ರಾತ್ರಿಯಾಯಿತು. ಮಳೆ ಸಣ್ಣಗೆ ಕುಟುಕುತ್ತಲೇ ಇತ್ತು. ಗಾಳಿ ಬರ್ರೋ ಅಂತ ಬೀಸುತ್ತಿತ್ತು. ಚಳಿ ತಡೆಯಲಾರದೆ ಸನ್ಯಾಸಿ ಪಡಸಾಲೆಯ ಮೂಲೆಯೊಂದರಲ್ಲಿ ಮುದುಡಿ ಕುಳಿತಿದ್ದ.



ಮನೆ ಒಳಗಡೆ ಇದ್ದ ರೈತ, ಅಟ್ಟದ ಮೇಲಿಂದ ಸೌದೆ ತೆಗೆದ. ನೀರೊಲೆಗೆ ಉರಿಹಾಕಿದ. "ಚಳಿ ಹೆಚ್ಚಾಗ್ತಿದೆಕಣಮ್ಮಿ, ಬಾಯಿ ಕೆಟ್ಹೋಗದೆ! ಮಸಾಲೆಖಾರ ರುಬ್ಬುಕೋ" ಅಂದ. ಮನೆಯಲ್ಲಿದ್ದ ಒಂದು ಮೊಟ್ಟೆಕೋಳಿ ಹಿಡಿದು ಕುಯ್ದು ಹಸನುಮಾಡಿದ. ಬಾಡಿನ ಮಡಕೆಗೆ ಹಾಕಿದ. ಸ್ನಾನ ಮಾಡೋಕೆ ಕುಳಿತುಕೊಂಡ. ಗಣಗಣ ಕಾದಿದ್ದ ಹಂಡೆ ನೀರಿನಲ್ಲಿ ಮನಸಾರೆ ಸ್ನಾನ ಮಾಡಿ ಮಡಿಬಟ್ಟೆ ಉಟ್ಟ.

ಅವನ ಹೆಂಡತಿ, ಗಂಡನ ಸ್ನಾನ ಮುಗಿಯೋ ಹೊತ್ತಿಗೆ ರುಚಿಯಾಗಿ ಕೋಳಿಬಾಡಿನ ಸಾರು ಮಾಡಿಟ್ಟಳು. ತಣಿಗೆ-ಚೆಂಬು ಬೆಳಗಿ, ಹಿಟ್ಟಿನ ಮುದ್ದೆ ಕಟ್ಟಿದಳು. ತಾನೂ ಚೆಂದಾಗಿ ಸ್ನಾನ ಮಾಡಿ ಮಡಿಯಾದಳು.

ಗಂಡನ್ನ ಊಟಕ್ಕೆ ಕರೆದು, ತಾನೂ ಊಟಕ್ಕೆ ಕುಳಿತಳು. ಎರಡೂ ತಣಿಗೆಗೆ ಮಾಡಿದ್ದ ಕೋಳಿಬಾಡನ್ನೆಲ್ಲಾ ಸುರಿದುಕೊಂಡರು. ಒಂದು ಮೂಳೆನೂ ಬಿಡದಂಗೆ



ಗಂಡ-ಹೆಂಡತಿ ಇಬ್ಬರೂ ಹೊಟ್ಟೆತುಂಬಾ ಆನಂದವಾಗಿ ಊಟಮಾಡಿದರು. ಗಂಡ -ಹೆಂಡತಿ ಬಾಗಿಲು ಭದ್ರಮಾಡಿ ಕಂಬಳಿಹೊದ್ದು ಬೆಚ್ಚಗೆ ಮಲಗಿದರು. ಹೊರಗಡೆ ಮಳೆ ಇನ್ನೂ ಕುಟುಕುತ್ತಲೇ ಇದ್ದುದರಿಂದ ಊರಿನ ಸದ್ದು ಅಡಗಿತ್ತು. ಜನರೆಲ್ಲ ತಮ್ಮ ತಮ್ಮ ಮನೆಗಳಲ್ಲಿ ಉಂಡು ಬೆಚ್ಚಗೆ ಮಲಗಿದ್ದರು.

ಆದರೆ, ಹೊರಗಡೆ ಪಡಸಾಲೆಯ ಒಂದು ಮೂಲೆಯಲ್ಲಿ ಸನ್ಯಾಸಿ ಒಬ್ಬನೇ, ಕೊರೆಯೋ ಚಳಿಯಲ್ಲಿ ನಡುಗುತ್ತಾ ಕುಳಿತಿದ್ದ. ಮಳೆ ಚಟ-ಪಟ ಸಣ್ಣಗೆ ಬೀಳುತ್ತಿದ್ದರಿಂದ, ಯಾರ ಮನೆಗೂ ಭಿಕ್ಷಕ್ಕೆ ಹೋಗಲಾಗಲಿಲ್ಲ. ಚಳಿ ಮತ್ತು ಹಸಿವಿನಿಂದ ನಡುಗುತ್ತಾ ಕುಳಿತಿದ್ದ. ಸನ್ಯಾಸಿ "ಹೇಗಾದರೂ ಇರಲಿ ಸಂಸಾರಿ ಬಾಳೇ ಸೈ! ಈ ಸನ್ಯಾಸಿ ಬಾಳು ಛೀ! ಒಂದು ಕಷ್ಟ ಬರಲಿ - ಒಂದು ಸುಖ ಬರಲಿ, ಏನೇ ಭಂಗ ಬಂದರೂ, ಈ ಸಂಸಾರಸುಖದ ಮುಂದೆ ಬೇರೆ ಇಲ್ಲ!" ಎಂದು ತನ್ನಲ್ಲೇ ಅಂದುಕೊಂಡ.





ಎದ್ದು ಬಾರಯ್ಯ ಮುದ್ದು ಗಣದೇವ
ನಮಗಿದ್ದೇವ ಕಲಿಸಯ್ಯ ಗಣದೇವ

## ಮುದ್ದು ಗಣದೇವ

ಶರಣು ಶರಣುವಯ್ಯ ಗಣದೇವ
ನಿಮ್ಮ ಗ್ಯಾನ ಮಾಡಿ ನೆನೆದೇವಯ್ಯ ಗಣದೇವ

ಎದ್ದು ಬಾರಯ್ಯ ಮುದ್ದು ಗಣದೇವ
ನಮಗಿದ್ದೇವ ಕಲಿಸಯ್ಯ ಗಣದೇವ

ನೆನೆಯಕ್ಕಿ ನೆನೆಗಡಲೆ ಗಣದೇವ
ಗೊನೆಯ ಮ್ಯಾಲಿನ ಬಾಳೆಹಣ್ಣು ಗಣದೇವ


ಸಿಪ್ಪೆ ಒಡ್ದ ತೆಂಗಿನಕಾಯಿ ಗಣದೇವ
ಸಿಗಳಿ ತಂಬಿಟ್ಟದುಂಡೆ ಗಣದೇವ

ಹತ್ತಿಸಿದ ಊದುಗಡ್ಡಿ ಗಣದೇವ
ನಿನಗೆ ಕತ್ತರಿಸಿದ ಕಳಿಯಡ್ಕೆ ಗಣದೇವ

ಹಸುರಂಗಿ ಕಾಲುಕಡಗ ಗಣದೇವ
ನಿನಗೆ-ಕುಸುರಿದ ಮೇಲುಕಟ್ಟು ಗಣದೇವ

ರಂಡಿಗಪ್ಪು ಮಂಡಿಗಾಯ ಗಣದೇವ
ಮಂಡೀಗೆ ಸೀಗೆಯಕಾಯಿ ಗಣದೇವ
ಎದ್ದು ಬಾರಯ್ಯ-ಮುದ್ದು ಗಣದೇವ

## ಸಂಪಾದಕರು



### ಪ್ರೊ. ಕಾಳೇಗೌಡ ನಾಗವಾರ

ಕಾಳೇಗೌಡ ನಾಗವಾರ ಕನ್ನಡ ಸಾಂಸ್ಕೃತಿಕಲೋಕದ ಮಾನವೀಯ ಕತೆಗಾರ, ಅಪಾರ ಅಂತಃಕರಣದ ಕವಿ ಹಾಗೂ ದೇಶೀಸಂಸ್ಕೃತಿಗಳ ಬಗ್ಗೆ ತುಂಬು ಹೆಂಗರುಳುಳ್ಳ ಜಾನಪದ ತಜ್ಞ. ಕರ್ನಾಟಕದ ಉದ್ದಗಲಕ್ಕೂ ಅವಿರತವಾಗಿ ಸಂಚರಿಸುತ್ತಾ ಅಪಾರವಾದ ಲೋಕಾನುಭವವನ್ನು ಪಡೆದಿರುವ ಇವರು, ತಮ್ಮೊಳಗಿನ ಜನಪರ ಆಲೋಚನೆಯ ಸೂಕ್ಷ್ಮ, ಸೃಜನಶೀಲ ಮನಸ್ಸನ್ನು ಎಚ್ಚರದಿಂದ ಕಾಯ್ದುಕೊಂಡು ಬಂದಿರುವ ಪ್ರತಿಭಾವಂತ ಲೇಖಕ. ಅಚ್ಚಕನ್ನಡದ ಗ್ರಾಮೀಣ ಸತ್ವದಿಂದ ರೂಪುಗೊಂಡ ನಾಗವಾರ ಅವರು ಎಪ್ಪತ್ತರ ದಶಕದಿಂದೀಚಿನ ಕನ್ನಡ ಸೃಜನಶೀಲ ಪ್ರಜ್ಞೆಯ ಅವಿಭಾಜ್ಯ ಅಂಗವಾಗಿದ್ದಾರೆ.

ಕ್ರಿಯಾಶೀಲ ಸಂಘಟಕರಾದ ಕಾಳೇಗೌಡ ನಾಗವಾರ (೧೯೪೭) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕಿನ ನಾಗವಾರ ಗ್ರಾಮದವರು. ಕನ್ನಡದ ಪ್ರಗತಿಪರ ಚಳವಳಿಗಳೊಂದಿಗೆ ಬೆಳೆದುಬಂದ ಪ್ರೊ. ನಾಗವಾರರ ಎಲ್ಲ ಬರವಣಿಗೆಗಳೂ ಸಮಾಜವಾದಿ ಆಶಯಗಳ ನೆಲೆಗಟ್ಟಿನ ಮೇಲೆ ನಿಂತಿವೆ. ಈಗ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

ರಾಮಮನೋಹರ ಲೋಹಿಯಾ ಅವರ ಚಿಂತನೆಯಿಂದ ಪ್ರಭಾವಿತರಾಗಿರುವ ಇವರು ಕನ್ನಡದ ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಮುಖ ಘಟ್ಟವಾದ ಬಂಡಾಯ ಸಾಹಿತ್ಯ ಚಳವಳಿಯ ಸ್ಥಾಪಕ ಸಂಚಾಲಕರಲ್ಲೊಬ್ಬರು. ಭಾರತೀಯ ಭಾಷೆಗಳಲ್ಲೇ ಮೊದಲ ಬಾರಿಗೆ ಲೋಹಿಯಾ ಅವರ ಸಮಾಜವಾದಿ ವಿಚಾರಗಳನ್ನು ಸಮಗ್ರವಾಗಿ ಕನ್ನಡಕ್ಕೆ ತರುವ ಮಹತ್ವದ ಯೋಜನೆಯ ಸಾಂಸ್ಕೃತಿಕ ಹೊಣೆಗಾರಿಕೆಯನ್ನು ಕಾಳೇಗೌಡ ನಾಗವಾರ ಅವರು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.

ವಸಾಹತುಶಾಹಿ ಮತ್ತು ನಮ್ಮ ಜಾನಪದ ವಯ್ಯಾಕರಣಿಗಳ ಸಿದ್ಧಮಾರ್ಗವನ್ನು ನಿರಾಕರಿಸಿರುವ ಡಾ. ನಾಗವಾರರು ಜಾನಪದ ಸಂಗ್ರಹ ಹಾಗೂ ವಿಮರ್ಶೆಗಳಿಗೆ ಸೃಜನಶೀಲತೆಯ ಪ್ರಾಣಶಕ್ತಿಯನ್ನು ತುಂಬಿದವರು. ನಿರ್ಲಕ್ಷಿತ ಒಳಸಂಸ್ಕೃತಿಗಳ ಜ್ಞಾನಪರಂಪರೆಯ ಮಹಾಪ್ರಭೆಯನ್ನು ಶೋಧಿಸುತ್ತಾ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಮರ್ಶಾ ನೆಲೆಯಿಂದ ಹೊರಡುವ ಪ್ರೊ. ನಾಗವಾರರ ಜಾನಪದ ವಿಮರ್ಶೆಯ ಮಾದರಿಯು ಕನ್ನಡಕ್ಕೆ ಇಂದು ಹೆಚ್ಚು ಪ್ರಸ್ತುತವಾಗಿದೆ. ವಿವಿಧ ಬಗೆಯ ಜಾನಪದ ಅಭಿವ್ಯಕ್ತಿಗಳು ಮತ್ತು ದೇಶೀಸಂಸ್ಕೃತಿಯ ಸೂಕ್ಷ್ಮಗಳ ಹರಿಕಾರರಾದ ಜನಪದ ಕಲಾವಿದರ ಬಗ್ಗೆ ಸದಾ ಕಟ್ಟೆಕ್ಕರೆಯಿಂದಿರುವ ನಾಗವಾರರು ಪ್ರಸ್ತುತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಕ್ರಿಯಾಶೀಲ ಅಧ್ಯಕ್ಷರಾಗಿದ್ದಾರೆ.


**ಬೆಟ್ಟಸಾಲು ಮಳೆ, ಅಲೆಗಳು, ಕರಾವಳಿಯಲ್ಲಿ ಗಂಗಾಲಗ್ನ, ಕನ್ನೆಯ ಸ್ನೇಹ , ಈ ಮಂಜಿನೊಳಗೆ, ಪ್ರೀತಿ ಮತ್ತು ನಿರ್ಭೀತಿ, ಜನಪದ ಸಾಹಿತ್ಯ, ಬೇಕಾದ ಸಂಗಾತಿ, ಬಯಲುಸೀಮೆಯ ಲಾವಣಿಗಳು, ಬೀದಿಮಕ್ಕಳು ಬೆಳೆದೊ, ಸರ್ವಜ್ಞ ಮತ್ತು ಹರಿಹರ ಮುಂತಾದುವು ಡಾ. ನಾಗವಾರ ಅವರ ಪ್ರಮುಖ ಕೃತಿಗಳು.**

○

---

ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - ೫೭೦ ೦೦೬

## ಸಂಪಾದಕರು



### ಜಿ ವಿ ಆನಂದಮೂರ್ತಿ

ತುಮಕೂರು ಜಿಲ್ಲೆಯ ತಿಗಳರ ಗೊಲ್ಲಹಳ್ಳಿಯವರಾದ ಜಿ ವಿ ಆನಂದಮೂರ್ತಿ ಅವರ ವಿದ್ಯಾಭ್ಯಾಸ ತುಮಕೂರು ಮತ್ತು ಬೆಂಗಳೂರಿನಲ್ಲಿ. ಬೆಂಗಳೂರು ವಿಶ್ವವಿದ್ಯಾಲಯದಿಂದ ಚಿನ್ನದ ಪದಕದೊಂದಿಗೆ ಕನ್ನಡ ಎಂ.ಎ. ಪದವಿ. ರಾಜ್ಯಾದ್ಯಂತ ಕ್ಷೇತ್ರಕಾರ್ಯ ಮಾಡಿ ಮೌಖಿಕ ಪರಂಪರೆಯಲ್ಲಿದ್ದ ಅನೇಕ ಅನುಭಾವಿ ಕವಿಗಳ ತತ್ತ್ವಪದಗಳನ್ನು ಸಂಗ್ರಹಿಸಿದ್ದಾರೆ. ತುಮಕೂರಿನ ಎಲ್ಲ ಬಗೆಯ ಪ್ರಗತಿಪರ ಸಾಂಸ್ಕೃತಿಕ ಸಂಘಟನೆಗಳೊಂದಿಗೆ ಕ್ರಿಯಾಶೀಲರಾಗಿ ಬೆಳೆದು ಬಂದ ಆನಂದಮೂರ್ತಿ ಪ್ರಸ್ತುತ ತುಮಕೂರು ಜಿಲ್ಲೆಯ ಕೊರಟಗೆರೆ ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ.

ಸೃಜನಶೀಲ ಸಾಹಿತ್ಯ ಮತ್ತು ಜಾನಪದ ಕ್ಷೇತ್ರಕಾರ್ಯದೊಂದಿಗೆ ಪರಿಸರ ಕುರಿತಾದ ಅಧ್ಯಯನಕ್ಕೂ ತಮ್ಮ ಆಸಕ್ತಿಯನ್ನು ವಿಸ್ತರಿಸಿಕೊಂಡಿದ್ದಾರೆ. ಇವರು ರೂಪಾಂತರಿಸಿದ ದೇವನೂರ ಮಹಾದೇವರ ದ್ಯಾವನೂರು, ದೇವರುಗಳ ರಾಜ್ಯದಲ್ಲಿ ಮತ್ತು ಕರ್ನಾಟಕ ಇತಿಹಾಸ ಮತ್ತು ಸಾಹಿತ್ಯಿಕ ಪರಂಪರೆಯನ್ನು ಕುರಿತಾದ ಸಂಪದ ರಂಗ ರೂಪವನ್ನು ರಂಗಭೂಮಿಯ ಖ್ಯಾತ ರಂಗನಿರ್ದೇಶಕರುಗಳು ಪ್ರಯೋಗಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮುತ್ತಿನಹಾರ ಪುಸ್ತಕ ಮಾಲೆಯ ಸಂಚಾಲಕರಾಗಿ ಕಾರ್ಯ ನಿರ್ವಹಿಸಿರುವ ಆನಂದಮೂರ್ತಿ ಪ್ರಸ್ತುತ ಕರ್ನಾಟಕ ಜಾನಪದ ಮತ್ತು

ಯಕ್ಷಗಾನ ಅಕಾಡೆಮಿಯ ಪ್ರಕಟಣೆಯಾದ ಜಾನಪದ ಸಮಾಚಾರ ಪತ್ರಿಕೆಯ ಸಂಪಾದಕರಾಗಿದ್ದಾರೆ.

ಪ್ರಕಟಿತ ಕೃತಿಗಳು: ಬುದ್ಧ ತೋರಿದ ದಾರಿ, ತತ್ತ್ವಪದಕಾರರು (ಆಯ್ಕೆ), ಸಂಪಾದಿತ ಕೃತಿಗಳು: ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ, ಮೂರು ದಲಿತ ಕಮ್ಮಟಗಳು, ಮಹಾಯಾನ. ಸಂಪಾದಿತ ಜಾನಪದ ಕೃತಿಗಳು : ಗಂಧರ್ವಲೋಕದ ಗೆಣೆಕಾರರು, ಕರಾವಳಿ ಯಕ್ಷಗಾನ, ಜಾನಪದದ ತುಂಬು ಹೊಳೆ, ಹಲವು ತೋಟದ ಹೂಗಳು, ಸಾಲುಸಂಪಿಗೆ ನೆರಳು, ಒಗಟಿನ ಗಂಟು, ಆಡಿ ಬಾ ನನಕಂದ, ಜನಪದ ಕಥೆಗಳು, ಕಲಾವಿದರ ಒಡನಾಟ ಹಾಗೂ ನವಸಾಕ್ಷರರಿಗಾಗಿ ಬರೆದಿರುವ ಹಲವಾರು ಪುಸ್ತಕಗಳನ್ನು ರಾಜ್ಯ ಸಂಪನ್ಮೂಲ ಕೇಂದ್ರ, ಮೈಸೂರು ಇವರು ಪ್ರಕಟಿಸಿದ್ದಾರೆ. ಗ್ರಾಮೀಣ ಭಾಗದ ಅಜ್ಞಾತ ಜನಪದ ಕಲಾವಿದರನ್ನು ಕುರಿತು ಇವರು ಬರೆದಿರುವ ಲೇಖನಗಳು ನಾಡಿನ ಅನೇಕ ಪತ್ರಿಕೆ ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ೧೯೯೮ರಿಂದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

○

---

ಅಧ್ಯಾಪಕ, ವಾಟರ್‌ಟ್ಯಾಂಕ್ ಹಿಂಭಾಗ, ವಿದ್ಯಾನಗರ , ತುಮಕೂರು - ೫೭೨ ೧೦೩

ಸಹಸ್ರಮಾನ ಜಾನಪದ ಸಂಪುಟಗಳು

೧. ಗಂಧರ್ವಲೋಕದ ಗೆಣೆಕಾರರು

೨. ಕರಾವಳಿ ಯಕ್ಷಗಾನ

೩. ಕರ್ನಾಟಕ ಬುಡಕಟ್ಟುಗಳು : ಸಂಪುಟ ಎರಡು

೪. ಗಿರಿಜನ ಕಾವ್ಯ
(ಪ್ರಾತಿನಿಧಿಕ ಗಿರಿಜನ ಕಾವ್ಯ)

೫. ಗಿರಿಜನ ಸಂಸ್ಕೃತಿ
(ಕರ್ನಾಟಕ ಗಿರಿಜನ ಸಂಸ್ಕೃತಿ ಬಗೆಗಿನ ಪ್ರಾತಿನಿಧಿಕ ಲೇಖನಗಳು)

೬. ಹಲವು ತೋಟದ ಹೂಗಳು
(ಪ್ರಾತಿನಿಧಿಕ ಜನಪದ ತತ್ತ್ವಪದಗಳು)

೭. ನಡುನೀರ ತಂಪು
(ಪ್ರಾತಿನಿಧಿಕ ಜನಪದ ಕಾವ್ಯ)

೮. ಜಾನಪದದ ತುಂಬುಹೊಳೆ
(ವಿವಿಧ ಜಾನಪದ ತಜ್ಞರ ಅಧ್ಯಯನ ಟಿಪ್ಪಣಿಗಳು)

೯. ಜೀಶಂಪ ಅವರ ಜಾನಪದ ಬರಹಗಳು

೧೦. ಕಲಾವಿದರ ಒಡನಾಟ

೧೧. ಸಾಲುಸಂಪಿಗೆ ನೆರಳು
(ಎಳೆಯರಿಗಾಗಿ ಜಾನಪದ : ಪ್ರಾತಿನಿಧಿಕ ಜನಪದ ಸಾಹಿತ್ಯ)




ನಾಡಿನ ಜನಪದ ಕಲೆ, ಸಾಹಿತ್ಯ. ಪರಂಪರೆಯಿಂದ ಬಂದಿರುವ ಜ್ಞಾನ ಹಾಗು ಒಟ್ಟು ನಮ್ಮ ಜನಸಮುದಾಯದ ಸಂಸ್ಕೃತಿಯ ಉದಾತ್ತ ಮೌಲ್ಯಗಳ ಪುನರುತ್ಥಾನದ ಹಾದಿಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ತನ್ನ ಪಯಣವನ್ನು ಆರಂಭಿಸಿದೆ.

ಸತ್ಯ ಮತ್ತು ಸೌಂದರ್ಯಕ್ಕಾಗಿ ನಿರಂತರವಾಗಿ ಹಾರೈಸಿದ ಮತ್ತು ಆ ಮೂಲಕ ತಮ್ಮ ಸಮಸ್ತ ಬದುಕನ್ನೇ ಆನಂದಮಯವಾಗಿಸಿಕೊಂಡ ನಮ್ಮ ಹಿರಿಯರ-ಹೆತ್ತವರ ಅನುಭವದ ಜಗತ್ತಿನ ಅಪರೂಪದ ಸಂಗತಿಗಳೇ ಸರಳ-ಸುಂದರ ಜನಪದ ಸಾಹಿತ್ಯವಾಗಿ ರೂಪುಗೊಂಡಿವೆ.

ಜನಪದ ಸಂಸ್ಕೃತಿಯಲ್ಲಿ ಸ್ಪಷ್ಟವಾಗಿ ಕಂಡುಬರುವ ಸಹಬಾಳ್ವೆ, ಜಾತ್ಯತೀತ ನಿಲುವುಗಳು, ನಿಸರ್ಗ ಪ್ರೇಮ ಹಾಗು ಸಕಲಜೀವಿಗಳ ಏಳಿಗೆಯನ್ನು ಕುರಿತಂತೆ ಇರುವ ತೆರೆದ ಮನಸ್ಸು ಅತ್ಯಂತ ಮುಖ್ಯವಾದುದು. ನಮ್ಮ ಹೆಮ್ಮೆಯ ಈ ಜಾನಪದದ ಅನಂತಮುಖಿಗಳ ಆಶಯಗಳನ್ನು ಒಳಗೊಂಡಿರುವ ಸಾಲುಸಂಪಿಗೆ ನೆರಳು ಸಂಪುಟವನ್ನು ನಾಡಿನ ಎಳೆಯರಿಗಾಗಿ ಸಂತೋಷದಿಂದ ಅರ್ಪಿಸುತ್ತಿದ್ದೇವೆ.

ಪ್ರೊ. ಕಾಳೇಗೌಡ ನಾಗವಾರ

ಅಧ್ಯಕ್ಷರು



**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ**

ಕನ್ನಡ ಭವನ, ಜೆ ಸಿ ರಸ್ತೆ, ಬೆಂಗಳೂರು ೫೬೦ ೦೦೨